ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 13 ಬುಧವಾರ 2025

ಸಂಪುಟ: 46 | ಸಂಚಿಕೆ: 118 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

ರಾಜಣ್ಣ ವಜಾ: ಉಭಯ ಸದನಗಳಲ್ಲಿ ಮಾತಿನ ಚಕಮಕಿ

ಬೆಂಗಳೂರು, ಆ.12(ಕೆಎಂಶಿ)– ಸಚಿವ ಸ್ಥಾನದಿಂದ ಕೆ.ಎನ್.ರಾಜಣ್ಣ ಪದಚ್ಯುತಿ ವಿಷಯ ವಿಧಾನ ಮಂಡಲದ ಉಭಯ ಸದನಗಳಲ್ಲಿಂದು ಪ್ರಸ್ತಾಪವಾಗಿ ಪ್ರತಿಪಕ್ಷ ಮತ್ತು ಆಡಳಿತ ಸದಸ್ಯರ ನಡುವೆ ಏರಿದ ಧ್ವನಿಯಲ್ಲಿ ಮಾತಿನ ಚಕಮಕಿಗೆ ಕಾರಣವಾಯಿತು.

ವಿಧಾನಸಭೆ ಕಲಾಪ ಆರಂಭವಾಗುತ್ತಿದ್ದಂತೆ ಬಿಜೆಪಿ ಸದಸ್ಯರು, ಕೆ.ಎನ್.ರಾಜಣ್ಣ ಪದಚ್ಯುತಿಗೆ ಸೂಕ್ತ ಕಾರಣ ನೀಡಬೇಕೆಂದು ಪಟ್ಟು ಹಿಡಿದರು. ವಿರೋಧ ಪಕ್ಷದ ನಾಯಕ ಆರ್.ಅಶೋಕ್ ವಿಷಯ ಪ್ರಸ್ತಾಪಿಸಿ, ಸಚಿವ ರಾಜಣ್ಣ ಪದಚ್ಯುತಿ ಕುರಿತು ನಿನ್ನೆ ಪ್ರಸ್ತಾಪಿಸಿದಾಗ ಸಂಸದೀಯ ವ್ಯವಹಾರಗಳ ಸಚಿವರು ಮಾಧ್ಯಮಗಳಲ್ಲಿ ಬರುವುದನ್ನೆಲ್ಲಾ ಚರ್ಚೆ ಮಾಡಲಾಗುವುದಿಲ್ಲ ಎಂದಿದ್ದರು. ■6ನೇ ಪುಟಕ್ಕೆ



ಪಕ್ಷ, ನಾಯಕತ್ವ ವಿರುದ್ಧ ಹೇಳಿಕೆ ನೀಡುವವರಿಗೆ 'ಹೈ' ಸಂದೇಶ

ಬೆಂಗಳೂರು, ಆ.12(ಕೆಎಂಶಿ)– ಪಕ್ಷ ವಿರೋಧಿ ಹಾಗೂ ನಾಯಕತ್ವದ ಬಗ್ಗೆ ಸಾರ್ವಜನಿಕವಾಗಿ ಹೇಳಿಕೆ ನೀಡುವ ಶಾಸಕರು, ಸಚಿವರು ಮತ್ತು ಮುಖಂಡರ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಕಾಂಗ್ರೆಸ್ ವರಿಷ್ಠರು ಎಚ್ಚರಿಸಿದ್ದಾರೆ.

ಕಾಂಗ್ರೆಸ್ ಹೈಕಮಾಂಡ್ ಇನ್ನೂ ಬಲಿಷ್ಠವಾಗಿದೆ ಎಂಬುದನ್ನು ತೋರಿಸುವ ಉದ್ದೇಶದಿಂದಲೇ ಕೆ.ಎನ್.ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸಲಾಗಿದೆ. ವಜಾ ಆದೇಶದ ಜೊತೆಗೆ ಪಕ್ಷ ಮತ್ತು ಸರ್ಕಾರದಲ್ಲಿ ಶಿಸ್ತು ಕಾಪಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕ್ರಮ ತೆಗೆದುಕೊಳ್ಳುವಂತೆ ಎಐಸಿಸಿ ಸೂಚಿಸಿದೆ. ಕರ್ನಾಟಕ ಕಾಂಗ್ರೆಸ್‌ಗೆ ಮಾತ್ರವಲ್ಲ ಇಡೀ ರಾಷ್ಟ್ರದಲ್ಲಿ ಪಕ್ಷದ ಶಿಸ್ತಿಗೆ ಬದ್ಧರಾಗಿರಬೇಕು ಎಂಬ ಸೂಚನೆಯೂ ಇದಾಗಿದೆಯಂತೆ. ಕಳೆದ ಎರಡು ವರ್ಷಗಳಿಂದ ನಾಯಕತ್ವ ಮತ್ತು ಪಕ್ಷ ಸಂಘಟನೆಗೆ ಸಂಬಂಧಿಸಿದಂತೆ ಶಾಸಕರು, ಸಚಿವರೇ ಹಾದಿಬೀದಿಯಲ್ಲಿ ಮಾತನಾಡಿ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದರು. ■6ನೇ ಪುಟಕ್ಕೆ

ವಜಾ ಮಾಡುವಂತಹ ಅಪರಾಧ ರಾಜಣ್ಣ ಏನು ಮಾಡಿದ್ದರು!

ಬೆಂಗಳೂರು, ಆ.12(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಪರಮಾಪ್ತರು, ಸಂಪುಟದ ಹಿರಿಯ ಸಹೋದ್ಯೋಗಿ ರಾಜಣ್ಣ ಸಂಪುಟದಿಂದ



ವಜಾ ಮಾಡುವಂತಹ ಘೋರ ಅಪರಾಧ ಏನು ಮಾಡಿದ್ದರು ಎಂಬುದನ್ನು ರಾಜ್ಯದ ಜನತೆಗೆ ಹೇಳಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಒತ್ತಾಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಣ್ಣ ಮಾಡಿದ ಮಹಾ ತಪ್ಪಾದರೂ ಏನು ಯಾವ ಕಾರಣಕ್ಕೆ ಸಂಪುಟದಿಂದ ತೆಗೆಯಲಾಯಿತು, ಇದು ಕಾಂಗ್ರೆಸ್‌ನ ಆಂತರಿಕ ವಿಚಾರ ಅಲ್ಲ, ಸದನದಲ್ಲಿ ಚರ್ಚೆ ಆಗಬೇಕು ಎಂದರು. ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್‌ಗೆ ಪರಿಶಿಷ್ಟ ಪಂಗಡದವರ ಬಗ್ಗೆ ಇರುವ ಪ್ರೀತಿ, ವಿಶ್ವಾಸ ಇಷ್ಟೇನಾ. ಕಳೆದ ವಾರ ಬೆಂಗಳೂರಿಗೆ ಬಂದ ರಾಹುಲ್ ಗಾಂಧಿ ಚುನಾವಣಾ ಆಯೋಗದ ವಿರುದ್ಧ ಆರೋಪ ಮಾಡಿದರು. ■6ನೇ ಪುಟಕ್ಕೆ

ಮೈಸೂರಲ್ಲಿ ರಸ್ತೆ ಗುಂಡಿ ಮುಚ್ಚುವ ಕಾರ್ಯ ಈ ವಾರವೇ ಶುರು

● ಮೈಸೂರು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾಹಿತಿ ● 10 ಕೋಟಿ ವೆಚ್ಚದಲ್ಲಿ ಆಯ್ದ ರಸ್ತೆಗೆ ಡಾಂಬರೀಕರಣ

ಮೈಸೂರು, ಆ.12(ಎಂಕೆ)– ಅರಮನೆ ನಗರಿ ಮೈಸೂರಿನಲ್ಲಿ ನಾಡಹಬ್ಬ ಕಳೆಗಟ್ಟುತ್ತಿದ್ದು, ಸುಮಾರು 10 ಕೋಟಿ ರೂ.ವೆಚ್ಚದಲ್ಲಿ ರಸ್ತೆ ಗುಂಡಿ ಮುಚ್ಚುವುದು, ಡಾಂಬರೀಕರಣ ಹಾಗೂ ವೈಟ್ ಟ್ಯಾಪಿಂಗ್ ಕಾಮಗಾರಿ ಆರಂಭಕ್ಕೆ ಮೈಸೂರು ನಗರಪಾಲಿಕೆ ಸಿದ್ಧತೆ ನಡೆಸಿದೆ.

ಮೈಸೂರು ನಗರದ ರಸ್ತೆಗಳನ್ನು ದಸರಾ ಉದ್ಘಾಟನೆಗೂ ಮುನ್ನ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ನಗರ ಪಾಲಿಕೆ ವಿವಿಧ ವಿಭಾಗಗಳಲ್ಲಿ ಕಾಮಗಾರಿ ನಡೆಸಲಿದ್ದು, ಇನ್ನು 15 ದಿನಗಳಲ್ಲಿ 10 ಕೋಟಿ ಕಾಮಗಾರಿಗೆ ಚಾಲನೆ ನೀಡಲಾಗುವುದು. ಈ ಸಂಬಂಧ ಈಗಾಗಲೇ ಟೆಂಡರ್ ಪ್ರಕ್ರಿಯೆ ಆರಂಭವಾಗಿದೆ ಎಂದು ಎಂಸಿಸಿ ಆಯುಕ್ತ ಶೇಖ್ ತನ್ವೀರ್ ಆಸಿಫ್ ಹೇಳಿದ್ದಾರೆ. ಟೆಂಡರ್‌ಗಳು ಪ್ರಕ್ರಿಯೆ ಮುಗಿದ ನಂತರ ವರ್ಕ್ ಆರ್ಡರ್ ನೀಡಲಾಗುವುದು. ಸೆ.22ರಂದು ದಸರಾ ಉದ್ಘಾಟನೆಗೂ ಮುನ್ನ ಈ ಎಲ್ಲ ಕಾಮಗಾರಿಗಳನ್ನು ಮುಗಿಸಿ ಮೈಸೂರು ನಗರವನ್ನು ಗುಂಡಿ ಮುಕ್ತವಾಗಿಸುವ ಗುರಿ ಹೊಂದಿದ್ದೇವೆ ಎಂದರು.

ಈ ವಾರದಿಂದಲೇ ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ಆರಂಭಿಸಲಿದ್ದು, ಅದಕ್ಕಾಗಿ 3 ಕೋಟಿ ರೂ. ಮೀಸಲಿಡಲಾಗಿದೆ. ಹಾಗೆಯೇ ಸೆಪ್ಟೆಂಬರ್ ತಿಂಗಳ ಮೊದಲ ವಾರದಲ್ಲಿ ಸುಮಾರು 3 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಡಾಂಬರೀಕರಣ ನಡೆಸಲಾಗುವುದು ಎಂದು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು. ಹಾಗೆಯೇ ನಗರ ಪಾಲಿಕೆ ವ್ಯಾಪ್ತಿಯ ಶೌಚಾಲಯಗಳು ಹಾಗೂ ಉದ್ಯಾನವನಗಳ ಅಭಿವೃದ್ಧಿ, ಯುಜಿಡಿ ದುರಸ್ತಿ ಕಾಮಗಾರಿಗಳು ನಡೆಸಲಾಗುವುದು. ಮೈಸೂರು ಮಹಾನಗರ ಪಾಲಿಕೆಯ ಮುಖ್ಯ ಕಚೇರಿಯ ■6ನೇ ಪುಟಕ್ಕೆ



ಕೃಷ್ಣವಿಲಾಸ ರಸ್ತೆಯಲ್ಲಿ ಭಾರಿ ಗುಂಡಿ ಅಪಾಯಕ್ಕೆ ಕಾದಂತಿದೆ.

ಅಕ್ರಮ ಬಡಾವಣೆಗಳ ನಿರ್ದಾಕ್ಷಿಣ್ಯ ತೆರವು

ಬೆಂಗಳೂರು, ಆ.12(ಕೆಎಂಶಿ)– ನಗರ ಪ್ರದೇಶಗಳಲ್ಲಿ ನಿರ್ಮಾಣವಾಗಿರುವ ಅಕ್ರಮ ಬಡಾವಣೆಗಳನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ವಿಧಾನ ಪರಿಷತ್ತಿನಲ್ಲಿ ಸ್ಪಷ್ಟಪಡಿಸಿದ್ದಲ್ಲದೆ, ಬೆಂಗಳೂರು ಮಾದರಿಯಲ್ಲಿ ಉಳಿದ ನಗರಗಳಲ್ಲೂ ಆಸ್ತಿಗಳಿಗೆ ಇ-ಖಾತೆ ನೀಡುವ ಬಗ್ಗೆ ಸರ್ಕಾರ ಗಂಭೀರ ಚಿಂತನೆ ನಡೆಸಿದೆ ಎಂದರು. ಸಿ.ಎನ್.ಮಂಜೇಗೌಡ ನಿಯಮ 330ರಡಿ ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ಅಕ್ರಮ ಬಡಾವಣೆಗಳನ್ನು ತೆರವುಗೊಳಿಸುವಲ್ಲಿ ವಿಫಲರಾಗುವ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಜರುಗಿಸುವ ಎಚ್ಚರಿಕೆ ನೀಡಿದರು. ವಿನ್ಯಾಸ ಅನುಮೋದನೆ ಪಡೆಯದೇ ಬಡಾವಣೆ ನಿರ್ಮಿಸಿದರೆ ಅಕ್ರಮ. ಇಂತಹ ಬಡಾವಣೆಗಳ ನಿವೇಶನಗಳ ಖಾತೆ ಮಾಡದಂತೆ ನಿರ್ಬಂಧ ಹೇರಲಾಗಿದೆ. ಅಲ್ಲದೇ, ಅಂತಹ ಬಡಾವಣೆ ಗಳ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಕ್ಕೂ ಅನುಮತಿ ನೀಡುವುದಿಲ್ಲ ಎಂದರು. ಅನಧಿಕೃತ ಬಡಾವಣೆಗಳ ನಿರ್ಮಾಣ ■6ನೇ ಪುಟಕ್ಕೆ



ಬೈರತಿ ಸುರೇಶ್



ಮಂಜೇಗೌಡ

ಮುಡಾ ಪ್ರಕರಣ ಸಿಬಿಐಗೆ ವಹಿಸಲು ಮನವಿ

ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಹೈಕೋರ್ಟ್ ಸಮನ್ಸ್

ಸಮನ್ಸ್ ನೀಡಲು ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬನ್ನಿ ಎಂದ ಸಿಎಂ ನಿವಾಸದ ಭದ್ರತಾ ಅಧಿಕಾರಿಗಳು

ಮೈಸೂರು, ಆ.12(ಬಿಎಲ್ ಯು)– ಮುಡಾ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ದೂರುದಾರ ಸ್ನೇಹಮಯಿ ಕೃಷ್ಣ ಸಲ್ಲಿಸಿರುವ ಮನವಿ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ಹೈಕೋರ್ಟ್ ಸಮನ್ಸ್ ಜಾರಿ ಮಾಡಿದೆ. ಆದರೆ ಸಮನ್ಸ್ ಪಡೆಯಲು ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬನ್ನಿ ಎಂದು ಸಿದ್ದರಾಮಯ್ಯ ಅವರ ಮನೆಯ ಭದ್ರತೆಗೆ ನಿಯೋಜಿಸಿರುವ ಪೊಲೀಸ್ ಅಧಿಕಾರಿಗಳು ಸಲಹೆ ನೀಡಿದ್ದಾರೆ.

ಮುಡಾ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಸ್ನೇಹಮಯಿ ಕೃಷ್ಣ ಅವರು ಹೈಕೋರ್ಟ್‌ಗೆ ಮನವಿ ಸಲ್ಲಿಸಿದ್ದರು. ಈ ಸಂಬಂಧ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ಪೀಠದಲ್ಲಿ ಈ ಬಗ್ಗೆ ವಿಚಾರಣೆ ನಡೆಯುತ್ತಿದೆ. ಜುಲೈ 10 ರಂದು ನಡೆದ ವಿಚಾರಣೆ ವೇಳೆ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವ ಬಗ್ಗೆ ಖುದ್ದು ಹಾಜರಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಬೇಕು. ಇಲ್ಲವೇ ನಿಮ್ಮ ವಕೀಲರಿಂದ ಅಭಿಪ್ರಾಯ ತಿಳಿಸಿ ಎಂದು ಹೈಕೋರ್ಟ್ ಪಾರ್ವತಿ ಅವರಿಗೆ ಸಮನ್ಸ್ ನೀಡಿದೆ.

ಈ ಸಂಬಂಧ ಇಂದು ನಮ್ಮ ವಕೀಲರ ಮೂಲಕ ಸಮನ್ಸ್ ಜಾರಿ ಮಾಡಲು ಬೆಂಗಳೂರಿನ ವಿಜಯನಗರದ ಸಿದ್ದರಾಮಯ್ಯ ಅವರ ಮನೆಗೆ ಹೋಗಿದ್ದೆವು. ಆದರೆ ಪಾರ್ವತಿ ಅವರು ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಯಲ್ಲಿ ವಾಸವಾಗಿದ್ದಾರೆ. ಅಲ್ಲಿಗೆ ಹೋಗಿ ಎಂದು ಸಲಹೆ ನೀಡಿದರು ಎಂದು ಸ್ನೇಹಮಯಿ ಕೃಷ್ಣ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ತರುವಾಯ ಕಾವೇರಿ ನಿವಾಸಕ್ಕೆ ಹೋದಾಗ ಪಾರ್ವತಿ ಅವರು ಮನೆಯಲ್ಲಿ ಇಲ್ಲ ಎಂದು ಭದ್ರತೆಗೆ ನಿಯೋಜನೆಗೊಂಡಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ತಿಳಿಸಿದರು. ಇದು ಕೋರ್ಟ್ ಸಮನ್ಸ್ ಆಗಿರುವ ಕಾರಣ ಅವರನ್ನು ಖುದ್ದು ಭೇಟಿ ಮಾಡಿ ನೀಡಬೇಕು ಎಂದು ತಿಳಿಸಿದ್ದೆವು. ಪಾರ್ವತಿ ಅವರನ್ನು ಭೇಟಿ ಮಾಡಬೇಕೆಂದರೆ ಅಪಾಯಿಂಟ್‌ಮೆಂಟ್ ತೆಗೆದುಕೊಳ್ಳಬೇಕು ಎಂದು ಇನ್ಸ್‌ಪೆಕ್ಟರ್ ಹೇಳಿದರು.

ಎಂತಹ ಪ್ರಭಾವಿಯಾದರೂ ಕೋರ್ಟ್ ಸಮನ್ಸ್ ನೀಡಲು ಅಪಾಯಿಂಟ್‌ಮೆಂಟ್ ತೆಗೆದುಕೊಳ್ಳುವ ನಿಯಮ ಇಲ್ಲ. ಆದ ಕಾರಣ ಸೆಪ್ಟಂಬರ್ 4 ರಂದು ನಡೆಯುವ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ಪೀಠಕ್ಕೆ ಈ ವಿಚಾರವನ್ನು ಅಫಿಡವಿಟ್ ಮೂಲಕ ತಿಳಿಸುತ್ತೇವೆ ಎಂದು ಸ್ನೇಹಮಯಿ ಕೃಷ್ಣ ತಿಳಿಸಿದರು.

ರಾಜಣ್ಣ ವಜಾ ಬೆನ್ನಲ್ಲೇ ಶಾಸಕಾಂಗ ಸಭೆ



ಬೆಂಗಳೂರು, ಆ.12– ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿರುವ ಬೆಳವಣಿಗೆ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಶಾಸಕಾಂಗ ಸಭೆ ನಡೆಸಿದರು.

ಸಿದ್ದರಾಮಯ್ಯ ಅವರು ಮಾತನಾಡಿ, ಅಧಿವೇಶನದಲ್ಲಿ ಸರ್ಕಾರದ ಸಾಧನೆಯನ್ನು ಸಮರ್ಥವಾಗಿ ಮಂಡಿಸುವುದು, ವಿರೋಧ ಪಕ್ಷಗಳ ಆಧಾರ ರಹಿತ ಆರೋಪಗಳು ಹಾಗೂ ಸುಳ್ಳುಗಳನ್ನು ದಾಖಲೆ ಹಾಗೂ ಅಂಕಿ ಅಂಶಗಳ ಸಮೇತ ಸಮರ್ಥವಾಗಿ ಪ್ರಸ್ತಾಪಿಸಿ ಉತ್ತರ ನೀಡುವಂತೆ ವಿವರಿಸಿದರು. ರಾಜಣ್ಣ ವಿಚಾರವಾಗಿ ನಡೆದ ಚರ್ಚೆ ಬಗ್ಗೆ ಇನ್ನಷ್ಟೇ ಮಾಹಿತಿ ಲಭ್ಯವಾಗಬೇಕಿದೆ. ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಎಚ್.ಕೆ.ಪಾಟೀಲ್, ಡಾ. ಜಿ.ಪರಮೇಶ್ವರ್, ಕೆ.ಎಚ್.ಮುನಿಯಪ್ಪ ಕೆ.ಜೆ.ಜಾರ್ಜ್, ಆರ್.ವಿ.ದೇಶಪಾಂಡೆ, ಎನ್.ಎಸ್. ಬೋಸರಾಜ್, ವಿಧಾನಸಭೆ ಮುಖ್ಯ ಸಚೇತಕ ಅಶೋಕ್ ಪಟ್ಟಣ ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಮ್ ಅಹ್ಮದ್ ಮತ್ತಿತರರು ಭಾಗವಹಿಸಿದ್ದರು.

ಬಿಜೆಪಿ ಶಾಸಕಾಂಗ ಪಕ್ಷದ ಸಭೆ; ಸರ್ಕಾರದ ವಿರುದ್ಧ ರಣತಂತ್ರ



ಬೆಂಗಳೂರು, ಆ.12– ವಿಧಾನ ಮಂಡಲ ಮುಂಗಾರು ಅಧಿವೇಶನದ ಹಿನ್ನೆಲೆ ಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರ ನೇತೃತ್ವದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಯಿತು.

ರಾಜಭವನದ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ್, ವಿಧಾನಸಭೆ ವಿಪಕ್ಷ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್, ಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್.ರವಿ ಕುಮಾರ್ ಸೇರಿ ಬಿಜೆಪಿ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಭಾಗಿಯಾಗಿದ್ದರು.

ಸಭೆ ಬಳಿಕ ಮಾತನಾಡಿದ ಅಶೋಕ್, ಅಧಿವೇಶನದಲ್ಲಿ ಏನು ಚರ್ಚಿಸಬೇಕು ಎಂಬುದರ ಕುರಿತು ಸದಸ್ಯರಿಂದ ಅನೇಕ ಸಲಹೆಗಳು ಬಂದಿವೆ. ಆರ್‌ಸಿಬಿ ವಿಜಯೋತ್ಸವದ ಸಂದರ್ಭದಲ್ಲಿ ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ 11 ಜನರು ಸಾವನ್ನಪ್ಪಿದ ಬಗ್ಗೆ ಚರ್ಚಿಸಲು ಈಗಾಗಲೇ ಅಧಿವೇಶನದಲ್ಲಿ ಪ್ರಸ್ತಾಪಿಸಲಾಗಿದೆ.

ಇದಲ್ಲದೆ, ರಸಗೊಬ್ಬರ ಕೊರತೆ, ಧರ್ಮಸ್ಥಳ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣದ ನಂತರ ಹರಡಲಾಗಿರುವ ತಪ್ಪು ಮಾಹಿತಿಯ ಬಗ್ಗೆಯೂ ಪ್ರಸ್ತಾಪಿಸಲಾಗುತ್ತದೆ ಎಂದು ಹೇಳಿದರು.

ಪ್ರಕರಣದಲ್ಲಿ ಎಸ್‌ಐಟಿ ರಚಿಸಿ ಹಲವು ದಿನಗಳಾಗಿವೆ. ಆದರೆ, ಇನ್ನೂ ಯಾವುದೇ ವರದಿ ಹೊರಬಂದಿಲ್ಲ. ಅನಾಮಿಕ ವ್ಯಕ್ತಿ ಈ ಹಿಂದೆ 13 ಸೈಟ್‌ಗಳನ್ನು ಸೂಚಿಸಿದ್ದರು, ಆದರೆ, ಈಗ ಆ ಸಂಖ್ಯೆ ಹೆಚ್ಚುತ್ತಿದೆ. ಇದೀಗ ಜನರು ಕೂಡ ವಿರೋಧಿಸುತ್ತಿದ್ದಾರೆ. ತಪ್ಪು ಮಾಹಿತಿ ಹರಡಲಾಗುತ್ತಿದೆ. ದೂರುದಾರರು ಸ್ಪಷ್ಟವಾಗಿದ್ದರೆ, ಮೊದಲ ಸ್ಥಳದಲ್ಲಿಯೇ ಸಾಕ್ಷ್ಯ ಪತ್ತೆಯಾಗಬೇಕಿತ್ತು. ನೂರಾರು ಯುವತಿಯರ ಕೊಲೆ ಯಾಗಿದೆ ಎಂದು ಆತ ಆರೋಪಿಸಿದ್ದಾನೆ. ಆದರೆ, ಸಾಕ್ಷ್ಯ ಇರುವ ಸ್ಥಳ ತೋರಿಸುತ್ತಿಲ್ಲ. ಇದರ ಹಿಂದೆ ಯಾರೋ ಇದ್ದಾರೆ ಎಂಬ ಅನುಮಾನವಿದೆ. ಆದರೆ, ಸರ್ಕಾರವೇಕೆ ಮೌನ ತಾಳಿದೆ. ಈ ಬಗ್ಗೆ ಸದನದಲ್ಲಿಯೂ ಚರ್ಚಿಸಲಾಗುವುದು ಎಂದು ತಿಳಿಸಿದರು.

ಆ.20, ಲೋಕಾಯುಕ್ತರಿಂದ ದೂರು ಸ್ವೀಕಾರ

ಮೈಸೂರು: ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗದ ಅಧಿಕಾರಿಗಳಿಂದ ಆ.20ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಸರಗೂರು ತಾಲೂಕಿನ ಡಾ.ಬಿ.ಆರ್. ಅಂಬೇಡ್ಕರ್ ಭವನ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವವರ ವಿರುದ್ಧ ಅಗತ್ಯ ದಾಖಲೆಗಳೊಡನೆ ದೂರು ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ನಿಧನ



ಶ್ರೀಮತಿ ತುಳಸಿ

ಮೈಸೂರು, ಆ. 12– ಮೈಸೂರಿನ ಹೆಬ್ಬಾಳು ನಿವಾಸಿ ಶ್ರೀಮತಿ ತುಳಸಿ (60) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ನಿವೃತ್ತ ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ದೇಶಕರಾದ ಗೋಪಾಲ್, ಪುತ್ರ ಪಾಂಡವಪುರ ತಾಲೂಕಿನ ಚಿನಕುರಳಿಯಲ್ಲಿ ವೈದ್ಯಾಧಿಕಾರಿ ಆಗಿರುವ ಡಾ. ಜಿ.ಸಂದೀಪ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ ಬುಧವಾರ ಬೆಳಿಗ್ಗೆ 11 ಗಂಟೆಗೆ ಮೈಸೂರಿನ ಮಂಜೇಗೌಡನಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಿರಾಶ್ರಿತರಿಗೆ ಬಟ್ಟೆ, ಚಾಪೆ, ಹೊದಿಕೆ ವಿತರಿಸಿ ಸಿದ್ದರಾಮಯ್ಯ ಹುಟ್ಟುಹಬ್ಬ ಆಚರಣೆ



ನಿರಾಶ್ರಿತರಿಗೆ ಬಟ್ಟೆ, ಚಾಪೆ ಮತ್ತು ಹೊದಿಕೆ ವಿತರಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರ 78ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಕಾಂಗ್ರೆಸ್ ಹಿಂದುಳಿದ ವರ್ಗಗಳ ಘಟಕದ ನಗರಾಧ್ಯಕ್ಷ ಎನ್.ಆರ್.ನಾಗೇಶ್ ಇತರರು ಉಪಸ್ಥಿತರಿದ್ದರು.

ಮೈಸೂರು, ಆ.12(ಜಿಎ)–ಮೈಸೂರು ನಗರ ಮತ್ತು ಗ್ರಾಮಾಂತರ ಹಿಂದುಳಿದ ವರ್ಗಗಳ ಘಟಕದ ವತಿಯಿಂದ ನಿರಾಶ್ರಿತರಿಗೆ ಬಟ್ಟೆ, ಚಾಪೆ ಮತ್ತು ಹೊದಿಕೆ ವಿತರಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರ 78ನೇ ವರ್ಷದ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ 78ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಮೈಸೂರು ನಗರ ಮತ್ತು ಗ್ರಾಮಾಂತರ ಹಿಂದುಳಿದ ವರ್ಗಗಳ ಘಟಕದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಕೇಕ್ ಕತ್ತರಿಸಿ, ನಿರಾಶ್ರಿತರಿಗೆ ಬಟ್ಟೆ, ಚಾಪೆ ಮತ್ತು ಹೊದಿಕೆಯನ್ನು ವಿತರಿಸಿದರು.

ನಂತರ ನಗರಾಧ್ಯಕ್ಷ ಆರ್.ಮೂರ್ತಿ ಮಾತನಾಡಿ, ಸಿದ್ದರಾಮಯ್ಯ ಅವರಿಗೆ ಬಡವರು, ಹಿಂದುಳಿದವರ ಬಗ್ಗೆ ಇರುವ ಕಾಳಜಿಗೆ ಅನುಸಾರವಾಗಿ ನಗರ ಮತ್ತು ಗ್ರಾಮಾಂತರ ಹಿಂದುಳಿದ ವರ್ಗಗಳ ಅಧ್ಯಕ್ಷರು ಜನರಿಗೆ ಸಹಾಯ ಮಾಡಬೇಕು ಎಂದು ನಿರ್ಧರಿಸಿ, ನಿರಾಶ್ರಿತರಿಗೆ ಅನುಕೂಲವಾಗುವಂತೆ ಚಾಪೆ, ಹೊದಿಕೆ ನೀಡುತ್ತಿದ್ದಾರೆ. ಈ ಕೆಲಸದಿಂದ ಸಿದ್ದರಾಮಯ್ಯ ಅವರಿಗೆ ನಿರಾಶ್ರಿತರ ಆಶೀರ್ವಾದ ತಲುಪಿ ಅವರಿಗೆ ಮತ್ತಷ್ಟು ಶಕ್ತಿ ತಲುಪಿದಂತಾಗುತ್ತದೆ ಎಂದರು.

ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ ಕುಮಾರ್ ಮಾತನಾಡಿ, ಸಿಎಂ ಸಿದ್ದರಾಮಯ್ಯ ಅವರು ತಾವು ಹುಟ್ಟುಹಬ್ಬ ಆಚರಣೆ ಮಾಡಿಕೊಳ್ಳದೇ ಇದ್ದರೂ ಸಾರ್ವಜನಿಕರೇ ವಿವಿಧ ಸೇವಾ ಕಾರ್ಯಗಳ ಮೂಲಕ ಹುಟ್ಟುಹಬ್ಬ ಆಚರಿಸುವ ಏಕೈಕ ನಾಯಕ ಎಂದರು.

ಬೆಂಗಳೂರಿನಿಂದ ಬಳ್ಳಾರಿಗೆ ನಡೆದ ಪಾದಯಾತ್ರೆ ಸಂದರ್ಭದಲ್ಲಿ ಸಿದ್ದರಾಮಯ್ಯನವರು ಹಾಗೂ ನನ್ನ ನಡುವೆ ಒಡನಾಟ ಹೆಚ್ಚಾಯಿತು. ಈವರೆಗೂ ಅವರ ಹುಟ್ಟುಹಬ್ಬಕ್ಕೆ ಕೇಕ್ ಕತ್ತರಿಸಿಲ್ಲ. ಹಾರ ಹಾಕುವುದಿಲ್ಲ. ಆತ್ಮಾಭಿಮಾನದಿಂದ ಅವರ ಹೆಸರಿಗೆ ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಕಪ್ಪು ಚುಕ್ಕಿ ಬರದಂತೆ ನಡೆದುಕೊಂಡು ಬಂದಿದೆ. ಮುಂದೆಯೂ ಹಾಗೇ ಇರುತ್ತೇವೆ. ಒಬ್ಬ ರಾಜಕಾರಣಿ ಹೇಗೆ ಜೀವನ ರೂಪಿಸಿಕೊಳ್ಳಬೇಕು ಎಂಬುದಕ್ಕೆ ಸಿದ್ದರಾಮಯ್ಯ ಅವರು ಉದಾಹರಣೆ. ಅವರ ಕುರಿತ ಪುಸ್ತಕಗಳನ್ನು ಓದಿದರೆ, ಜಾತಿ, ಧರ್ಮದ ಸುಳಿಗೆ ಸಿಲುಕುವುದಿಲ್ಲ. ಹಾಗೇ ಭ್ರಷ್ಟಾಚಾರಿಯೂ ಆಗುವುದಿಲ್ಲ ಎಂದು ತಿಳಿಸಿದರು.

ಈ ವೇಳೆ ಕಾಂಗ್ರೆಸ್ ಹಿಂದುಳಿದ ವರ್ಗಗಳ ಗ್ರಾಮಾಂತರ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿರುವ ಟಿ.ನರಸೀಪುರ ಪುರಸಭೆ ಮಾಜಿ ಅಧ್ಯಕ್ಷ ಸೋಮುಗೆ ಅಭಿನಂದನೆ ಸಲ್ಲಿಸಲಾಯಿತು.

ಬಳಿಕ ಮಾತನಾಡಿದ ಅವರು ಸಿದ್ದರಾಮಯ್ಯ, ಯತೀಂದ್ರ ಸಿದ್ದರಾಮಯ್ಯರ ಆದೇಶದ ಮೇರೆಗೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್ ಅವರ ಮಾರ್ಗದರ್ಶನದಲ್ಲಿ ಹಿಂದುಳಿದ ವರ್ಗಗಳ ಘಟಕದ ಜಿಲ್ಲಾಧ್ಯಕ್ಷನಾಗಿದ್ದೇನೆ. ದೇವರಾಜ ಅರಸು ನಂತರ ಹಿಂದುಳಿದ ವರ್ಗಗಳ ನಾಯಕರಾಗಿ ಸಿದ್ದರಾಮಯ್ಯನವರು ಕೆಲಸ ಮಾಡಿದ್ದಾರೆ. ಎಲ್ಲಾ ಸಮಾಜಕ್ಕೂ ನ್ಯಾಯ ಒದಗಿಸಿದ ನಾಯಕ ಸಿದ್ದರಾಮಯ್ಯ, ಮೈಸೂರು ಮಹಾರಾಜರು, ದೇವರಾಜ್ ಅರಸು ಬಳಿಕ ಮೈಸೂರಿಗೆ ಅತಿ ಹೆಚ್ಚು ಕೊಡುಗೆ ಕೊಟ್ಟಿರುವ ನಾಯಕರಾಗಿದ್ದಾರೆ ಅದು ಸಿದ್ದರಾಮಯ್ಯ ಎಂದರು.

ಕಾಂಗ್ರೆಸ್ ಹಿಂದುಳಿದ ವರ್ಗಗಳ ಘಟಕದ ನಗರಾಧ್ಯಕ್ಷ ಎನ್.ಆರ್.ನಾಗೇಶ್ ಮಾತನಾಡಿ, ಎಲ್ಲರನ್ನು ನಾವು ಶೋಷಿತ ಸಮುದಾಯದ ನಾಯಕರು ಎಂದು ಹೇಳಲು ಸಾಧ್ಯವಿಲ್ಲ. ಈ ರಾಜ್ಯದಲ್ಲಿ ಶೋಷಿತ ಸಮುದಾಯದ ನಾಯಕ ಅಂತ ಯಾರಾದ್ರೂ ಇದ್ದರೆ ಅವರು ಸಿದ್ದರಾಮಯ್ಯನವರು, ಸಿದ್ದರಾಮಯ್ಯನವರದ್ದು ತಾಯಿ ಹೃದಯ, ತಮ್ಮ ರಾಜಕೀಯ ಜೀವನದ ಉದ್ದಕ್ಕೂ ಶೋಷಿತ ಸಮುದಾಯಗಳ ಪರವಾಗಿ ಕೆಲಸ ಮಾಡಿದ್ದಾರೆ. ಮುಖ್ಯವಾಹಿನಿಯಿಂದ ದೂರವಿದ್ದ ಸಮುದಾಯಗಳನ್ನು ಮುಖ್ಯವಾಹಿನಿಗೆ ತರಬೇಕೆಂದು ಅನೇಕ ಯೋಜನೆಗಳನ್ನು ಜಾರಿ ಮಾಡಿದ್ದಾರೆ. ಇಂತಹ ನಾಯಕರ ಬೆನ್ನಿಗೆ ಸದಾ ಶೋಷಿತ ಸಮುದಾಯಗಳು ನಿಲ್ಲುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಹಿಂದುಳಿದ ವರ್ಗಗಳ ನಗರ ಸಂಚಾಲಕ ಲಕ್ಷ್ಮಿ ನಾರಾಯಣ್, ಗ್ರಾಮಾಂತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕರಾಳಪುರ ನಾಗರಾಜು, ಮಾಜಿ ಮೇಯರ್‌ಗಳಾದ ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಮಾಜಿ ಜಿಪಂ ಸದಸ್ಯ ಮಂಜುನಾಥ್, ಕಾಂಗ್ರೆಸ್ ಮುಖಂಡರಾದ ಅಮ್ಜದ್ ಖಾನ್, ಕೆರಳ್ಳಿ ನವೀನ್, ಟಿ.ಬಿ.ಚಿಕ್ಕಣ್ಣ, ನಗರ ಪ್ರದಾನ ಕಾರ್ಯದರ್ಶಿ ಆರ್.ಗಿರೀಶ್, ದೀಪಕ್, ಹಿಂದುಳಿದ ವರ್ಗಗಳ ಘಟಕದ ಹರೀಶ್ ರೆಡ್ಡಿ, ರಾಜು ಉಪ್ಪಾರ್, ರಾಘು ಈಡಿಗ, ಕಮಲ ಅನಂತರಾವ್, ನಗರಪಾಲಿಕೆ ಮಾಜಿ ಸದಸ್ಯ ಆರ್.ಹೆಚ್.ಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಸಿದ್ದರಾಮಯ್ಯನವರ ಹುಟ್ಟುಹಬ್ಬ ಆಚರಣೆ




ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 78ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಇಂದಿರಾಗಾಂಧಿ ಮತ್ತು ದೇವರಾಜ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸಿಹಿ ವಿತರಿಸಲಾಯಿತು.

ಮೈಸೂರು, ಆ.12(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 78ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಶಾಸಕ ಕೆ.ಹರೀಶ್‌ಗೌಡ ಸೂಚನೆಯಂತೆ ಇಂದಿರಾಗಾಂಧಿ ಮತ್ತು ದೇವರಾಜ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ವಿಶೇಷ ಪೂಜೆ ಸಲ್ಲಿಸಿ, ಸಿಹಿ ವಿತರಿಸಲಾಯಿತು.

ಈ ವೇಳೆ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಚೇಗೌಡನಕೊಪ್ಪಲ್ ರವಿ ಮಾತನಾಡಿ, ಪಂಚ ಗ್ಯಾರಂಟಿಗಳ ಮುಖಾಂತರ ಜನರ ಮನಸು ಗೆದ್ದಿರುವ ಸಿದ್ದರಾಮಯ್ಯ ಅವರು ಮೈಸೂರು ಜಿಲ್ಲೆಗೆ ಸುಮಾರು 25,000 ಕೋಟಿ ರೂ. ಅನುದಾನ ನೀಡಿರುವುದು ದೊಡ್ಡ ಸಾಧನೆಯಾಗಿದೆ. ದೇಶದ ಅಪರೂಪದ ರಾಜಕಾರಣಿಗಳಲ್ಲಿ ಸಿದ್ದರಾಮಯ್ಯ ಒಬ್ಬರು. ರಾಜ್ಯದ ಜನತೆ ಸಂತೋಷವಾಗಿ ಇರಬೇಕು ಎಂಬ ಉದ್ದೇಶದಿಂದ ಎಲ್ಲಾ ಯೋಜನೆಗಳನ್ನು ಅನುಷ್ಠಾನ ಮಾಡಿದ್ದಾರೆ. ಅವರು ಆರೋಗ್ಯ, ನೆಮ್ಮದಿಯ ಜೀವನ ನಡೆಸುವಂತೆ ದೇವರಲ್ಲಿ ಪ್ರಾರ್ಥನೆ ಸಲ್ಲಿಸಲಾಗಿದೆ ಎಂದರು.

ಈ ವೇಳೆ ಮುಖಂಡರಾದ ರಮೇಶ್ ರಾಯಪ್ಪ, ಸುಶೀಲ ಮರಿಗೌಡ, ರತ್ನ ಕುಂಬಾರ ಕೊಪ್ಪಲ್, ವಾರ್ಡ್ ಅಧ್ಯಕ್ಷ ಜಗದೀಶ್, ಕಾರ್ಯದರ್ಶಿ ರಾಮಚಂದ್ರ, ಜೇಕಬ್, ಸುರೇಶ್, ಶಿವಪ್ರಕಾಶ್, ಪಡುವಾರಹಳ್ಳಿ ಕುಮಾರ್, ಗೀತಾ, ಗಿರಿಜಾಂಬಾ, ಹೇಮಾಲತಾ, ಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.


ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.08.2025 ಬುಧವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025 ರಿಂದ 16.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು–ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ. ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಅಂಬಯ್ಯನುಲಿ, ವ್ಯಾಖ್ಯಾನ–ಡಾ.ಹೆಚ್.ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ–ಸಂಗೀತ ಮತ್ತು ಪ್ರದರ್ಶನ ಕಲೆಗಳ ಕ್ಷೇತ್ರದಲ್ಲಿ ಇರುವ ಅವಕಾಶಗಳು ಕುರಿತು ಅಂತಾರಾಷ್ಟ್ರೀಯ ಖ್ಯಾತಿಯ ವಯೋಲಿನ್ ವಾದಕರು, ಸಂಸ್ಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಮೈಸೂರು ವಿಶ್ವವಿದ್ಯಾಲಯದ ಲಲಿತಕಲಾ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಮೈಸೂರು ಎಂ. ಮಂಜುನಾಥ್ ಅವರೊಂದಿಗಿನ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ – ತೋರಣ–ಹೂರಣ ನೂರು ನಿಮ್ಮೊಂದಿಗೆ ನಾವು ಮೂವರು, ಪ್ರಸ್ತುತಿ–ಎನ್. ಕೇಶವಮೂರ್ತಿ, ಡಾ. ಉಮೇಶ್, ಆರ್. ಲೋಕೇಶ್ವರಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಟಿ. ನರಸೀಪುರ ತಾಲೂಕು ಬೆನಕನಹಳ್ಳಿಯ ಗಿರಿಜಮ್ಮ ಮತ್ತು ಸಂಗಡಿಗರಿಂದ ಸರಸ್ವತಿ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾ ರಂಗ ಕೃಷ್ಣ ಜನ್ಮಾಷ್ಟಮಿ ಕುರಿತು ಕಾರ್ಯಕ್ರಮ ವೈವಿಧ್ಯ ನಡೆಸಿಕೊಡುತ್ತಾರೆ ಮೈಸೂರಿನ ತ್ರಿಮೂರ್ತಿನಗರದ ಲಲಿತಾ ಮಹಿಳಾ ಮಂಡಳಿ ಸದಸ್ಯರು, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಡಾ. ಎಸ್.ಪಿ. ವಿದ್ಯಾಕುಮಾರಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಬ್ಬಿನ ತಳಿಗಳು ಹಾಗೂ ಸುಧಾರಿತ ಬೇಸಾಯ ವಿಧಾನಗಳು ಈ ಕುರಿತು ಮಂಡ್ಯದ ವಿ.ಸಿ. ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ. ಕೆ.ವಿ. ಕೇಶವಯ್ಯ ಅವರೊಂದಿಗೆ ಸಂದರ್ಶನ, ಸಂದರ್ಶಕರು –ಎನ್. ಕೇಶವಮೂರ್ತಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು ಸಮಾಜ ಸೇವೆ ಕ್ಷೇತ್ರದಲ್ಲಿನ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಮೈಸೂರಿನ ODP ಸಂಸ್ಥೆಯ ನಿರ್ದೇಶಕರಾದ ರೆವರೆಂಡ್ ಅಲೆಕ್ಸ್ ಪ್ರಶಾಂತ್ ಸಿಕ್ವೇರ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 9.30 ಕ್ರೀಡಾಲೋಕ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ, 10.15 ಜನಪದ ಸಂಗೀತ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ. ಬೆಳಗ್ಗೆ 9ರಿಂದ ಮೈಗ್ರೇನ್‌ಗೆ ಪರಿಹಾರ–ಆಕ್ಯುಪಂಕ್ಚರ್ ಚಿಕಿತ್ಸೆ, ಯಾವುದೇ ತರಹದ ತಲೆನೋವಿಗೆ ಚಿಕಿತ್ಸಾ ಶಿಬಿರ. ಆರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯವರ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ. ಬೆಳಗ್ಗೆಯಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು:** ದೀಕ್ಷಾರಂಭ ಪುನಶ್ಚೇತನ ಕಾರ್ಯಕ್ರಮ. ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ. ಬೆಳಗ್ಗೆ 9ಕ್ಕೆ

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಇಸುಬು ರೋಗ ಮತ್ತು ಹುಳಕಡ್ಡಿ, ಬೆರಳು ಸಂದಿಯ ಫಂಗಲ್ ಇನ್ಫೆಕ್ಷನ್, ಕಿಟಿಬ ಕುಷ್ಠಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ :** ಯುಜಿ ಸ್ಪರ್ಧೆ ಕಾರ್ಯಕ್ರಮ, ಅಧ್ಯಕ್ಷತೆ : ಜೆಎಸ್‌ಎಸ್ ಎಹೆಚ್‌ಇಆರ್ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಗೌರವ ಅತಿಥಿಗಳು : ಡಾ. ಕೆ.ಎ. ರವೀಶ, ಸ್ಥಳ: ಶ್ರೀರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ಫಾರ್ಮಸಿ ಕಾಲೇಜು, ಬೆಳಗ್ಗೆ 11ಕ್ಕೆ

■ **ಕೆವಿಕೆ ಫೌಂಡೇಷನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ :** ಸಾಮೂಹಿಕ ಸೀಮಂತ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಗ್ಯಾರಂಟಿ ಯೋಜನೆ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್, ಸೌಮ್ಯ ಅನಿಲ್ ಚಿಕ್ಕಮಾದು, ನ್ಯಾಯಾಧೀಶರಾದ ಅಮರನಾಥ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರಾದ ಬಿ. ಬಸವರಾಜ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಮೈಸೂರು ಡಯೋಗ್ನೋಸ್ಟಿಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಜಿ. ಮುತ್ತಣ್ಣ, ಸ್ಥಳ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಕಚೇರಿ ಸಭಾಂಗಣ, ವಿಜಯನಗರ 2ನೇ ಹಂತ, ಬೆಳಗ್ಗೆ 11ಕ್ಕೆ.

■ **ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ, ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ (ಸುಬ್ಬರಾಯನ ಕೆರೆ)–ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳವರ ಮಠದ ಶಾಖೆ:** ಶ್ರೀ ರಾಘವೇಂದ್ರ ತೀರ್ಥ ಗುರು ಸಾರ್ವಭೌಮರ 354ನೇ ಆರಾಧನಾ ಮಹೋತ್ಸವ. ಶ್ರೀ ಸುಜ್ಞಾನೇಂದ್ರತೀರ್ಥರ ಆರಾಧನೆ, ಬೆಳಗ್ಗೆ 7ಕ್ಕೆ ಉತ್ಸವರಾಯರಿಗೆ ಪಾದಪೂಜೆ, ಪಂಚಾಮೃತ, ಹಸ್ತೋದಕ ಮಹಾಮಂಗಳಾರತಿ, ರಾತ್ರಿ 8ಕ್ಕೆ ಆಶಿಕಾ ಮತ್ತು ಹರಿಹರನ್ ಅವರಿಂದ ಭರತನಾಟ್ಯ ಮತ್ತು ಕಥಕ್ ನೃತ್ಯ, ಸ್ಥಳ: ಮಠದ ಆವರಣ, ನಾರಾಯಣಶಾಸ್ತ್ರಿ ರಸ್ತೆ

■ **ಮೈಸೂರು ಆರ್ಟ್ ಗ್ಯಾಲರಿ :** ನೂರರ ನೆನಪು ಕಿರು ಹೊತ್ತಿಗೆ ಲೋಕಾರ್ಪಣೆ ಸಮಾರಂಭ, ಕಿರು ಹೊತ್ತಿಗೆ ಲೋಕಾರ್ಪಣೆ : ಹಿರಿಯ ಸಾಹಿತಿ ಪ್ರೊ. ಸಿ. ನಾಗಣ್ಣ, ಮುಖ್ಯ ಅತಿಥಿಗಳು : ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ದೇವಿಕ, ಅಧ್ಯಕ್ಷತೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ, ಉಪಸ್ಥಿತರು : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ: ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ, ಸಂಜೆ 4.30ಕ್ಕೆ

■ **ಬಲಮುರಿ ಶಕ್ತಿ ಮಹಾಗಣಪತಿ ದೇವಾಲಯ:** 35ನೇ ವರ್ಷದ ವಾರ್ಷಿಕೋತ್ಸವ. ಬೆಳಗ್ಗೆ 7 ಗಂಟೆಗೆ ಗಣಪತಿ ಪೂಜೆ, 10ಕ್ಕೆ ಗಣಪತಿ ಅಥರ್ವಶ್ರೀರ್ಷ, ಪುರುಷಸೂಕ್ತ ಗಣಪತಿ, ಸೂಕ್ತರಿಂದ ಹೋಮ 35ನೇ ವರ್ಷದ ವಾರ್ಷಿಕೋತ್ಸವ ಮುಕ್ತಾಯ ಸಮಾರಂಭದ ಪೂರ್ಣಾಹುತಿ, ಮಧ್ಯಾಹ್ನ 1ಕ್ಕೆ ಮಹಾ ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 5.30ಕ್ಕೆ ಹುಡ್ಕೋ 1ನೇ ಹಂತ, ಬನ್ನಿಮಂಟಪದ ಮುಖ್ಯ ರಸ್ತೆಗಳಲ್ಲಿ ಗಣಪತಿ, ದೇವರ ಉತ್ಸವ, ರಾತ್ರಿ 8ಕ್ಕೆ ಉಯ್ಯಾಲೋತ್ಸವ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಹುಡ್ಕೋ ಒಂದನೇ ಹಂತ, ಬನ್ನಿಮಂಟಪ.

■ **ಶ್ರೀ ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವ–2025. ಬೆಳಗ್ಗೆಯಿಂದ ಸರ್ವಸಮರ್ಪಣ ಉತ್ಸವ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನದ ಪ್ರಾಂಗಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಬ್ರಹ್ಮವಿದ್ಯಾ, ಡಿವಿಜಿ ಬಳಗ ಪ್ರತಿಷ್ಠಾನ, ಜಯತು ಭಾರತಮ್ ಮಹೀಯತಾಂ ಸಂಗೀತಶಾಸ್ತ್ರಂ :** ಭಾರತೀಯ ಸಂಗೀತ ಶಾಸ್ತ್ರ ದಿನಾಚರಣೆ, ಶಾಸ್ತ್ರಸೂರಿ ಮತ್ತು ಸಂಸ್ಮರಣ ಪ್ರಶಸ್ತಿ ಪ್ರದಾನ ಸಮಾರಂಭ, ಕನ್ನಡ ಕಾವ್ಯ ವಾಚನ : ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಡಾ. ಜ್ಯೋತಿ ಶಂಕರ್, ಆರೋಗ್ಯ ದಿನಚರಿ : ಬೆಂಗಳೂರು ಆಯುರ್ಧಾಮದ ಡಾ. ಪ್ರಶಾಂತ್ ಭಟ್, ರಾಸ ಸಂಗೀತ ಗೋಷ್ಠಿ : ಪರಿಕಲ್ಪನೆ ಮತ್ತು ನಿರ್ದೇಶನ ವಿದುಷಿ ಡಾ. ಅಂಬಿಕಾ ಶಾಸ್ತ್ರಿ, ಸಹಕಾರ : ಬ್ರಹ್ಮವಿದ್ಯಾ ಹಾಗೂ ಬಿಎಂಎಸ್‌ಎಸ್‌ಎ, ಸ್ಥಳ: ಶ್ರೀ ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 5.30 ರಿಂದ.

■ **ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಗಣಿತ ಕುಣಿತ, ಡ್ಯಾನ್ಸ್ ವಿತ್ ಮ್ಯಾತ್ಸ್ ಕುರಿತು ಬಿ.ಎಸ್. ಕೃಷ್ಣಮೂರ್ತಿ ಅವರಿಂದ ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ

■ **ಶ್ರೀಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ. ಪ್ರಾಧ್ಯಾಪಕ ಡಾ. ಬಿ.ವಿ.ವಸಂತ ಕುಮಾರ್ ಅವರಿಂದ ಪ್ರವಚನ, ಗಮಕ ವಿದ್ವಾನ್ ಕೃ.ರಾಮಚಂದ್ರ ಅವರಿಂದ ವಾಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ರಿಂದ.

■ **ಸಂಚಲನ, ಮೈಸೂರು, ರಂಗ ರಥ, ಬೆಂಗಳೂರು:** ನಟನಾಭ್ಯಾಸ ಶಿಬಿರ. ಶಿಬಿರದ ನಿರ್ದೇಶಕರು: ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್. ಸ್ಥಳ: ತಾಲೀಮು ಕೊಠಡಿ, ಕಲಾಮಂದಿರ, ಬೆಳಗ್ಗೆ 6.30ರಿಂದ.

■ **ನರಸಿಂಹರಾಜ ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** 91ನೇ ವರ್ಷದ ಶ್ರೀ ಪ್ರಸನ್ನ ಮಹಾಗಣಪತಿಯ ಪ್ರತಿಷ್ಠಾ ವರ್ಧಂತಿ ಮಹೋತ್ಸವದ ಅಂಗವಾಗಿ ವಿದ್ವಾನ್ ಪಿ. ಗುರುಪ್ರಸಾದ್ ಅವರಿಂದ ಸ್ಯಾಕ್ಸೋಫೋನ್ ವಾದನ, ವಿದ್ವಾನ್ ಹೆಚ್.ಎಸ್. ತಾಂಡವಮೂರ್ತಿ–ವಯೋಲಿನ್, ವಿದ್ವಾನ್ ಸಿ.ಎನ್. ಕೇಶವದತ್ತ–ಮೃದಂಗ, ವಿದ್ವಾನ್ ಎಂ.ಜೆ. ಕಿರಣ್ ಕುಮಾರ್–ಘಟಂ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಎನ್.ಆರ್. ಮೊಹಲ್ಲಾ, ಸಂಜೆ 6.30ಕ್ಕೆ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ವಚನ ಗಾಯನ ಮತ್ತು ಯುವ ಸಂಗೀತೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದುಷಿ ಪಾವನಿ ಭಾರದ್ವಾಜ್ ಅವರಿಂದ ವಚನ ಗಾಯನ, ವಿದುಷಿ ಸಿ.ವಿ. ಶೃತಿ–ವಯೋಲಿನ್, ವಿದ್ವಾನ್ ಮಾಲೋಲ ಸಿಂಹ–ಮೃದಂಗ, ವಿದ್ವಾನ್ ಧೀಮಂತ ಭಟ್–ಘಟಂ, ಸ್ಥಳ: ಮಂತ್ರಮಹರ್ಷಿ ಸಭಾ ಭವನ, ಜೆಎಸ್‌ಎಸ್ ಪ್ರೌಢಶಾಲೆ ಆವರಣ, ಸರಸ್ವತಿಪುರಂ, ಸಂಜೆ 6ಕ್ಕೆ.

ಜಂಬೂ ಸವಾರಿ ಮಾರ್ಗದಲ್ಲಿ ದಸರಾ ಗಜಪಡೆ ತಾಲೀಮು

● ಮೊದಲ ತಂಡದ 9 ಆನೆಗಳ ಗಾಂಭೀರ್ಯ ನಡಿಗೆ, ಭಾರೀ ಭದ್ರತೆ
● ರಸ್ತೆ ಇಕ್ಕೆಲಗಳಲ್ಲಿ ದಸರಾ ರೂವಾರಿಗಳಿಗೆ ಮಾರುಹೋದ ಜನ



ಮೈಸೂರು ದಸರಾ ಮಹೋತ್ಸವಕ್ಕೆ ಮೊದಲ ತಂಡದಲ್ಲಿ ಆಗಮಿಸಿರುವ ಗಜಪಡೆಯ ಒಂಬತ್ತು ಆನೆಗಳ ತಾಲೀಮು ಮಂಗಳವಾರ ಆರಂಭಗೊಂಡಿತು.

ಮೈಸೂರು, ಆ.12(ಎಸ್‌ಬಿಡಿ)– ನಾಡಹಬ್ಬ ದಸರಾ ಗಜಪಡೆಯ ತಾಲೀಮು ಮಂಗಳವಾರ ಅಧಿಕೃತವಾಗಿ ಆರಂಭವಾಗಿದ್ದು, ಕ್ಯಾಪ್ಟನ್ ಅಭಿಮನ್ಯು ಸೇರಿದಂತೆ ಮೊದಲ ತಂಡದ ಒಂಬತ್ತು ಆನೆಗಳು ಗಾಂಭೀರ್ಯದ ನಡಿಗೆ ಅಭ್ಯಾಸ ಶುರುಮಾಡಿವೆ.

ವಿಶ್ವ ಆನೆ ದಿನದಂದೇ ಗಜಪಡೆ ತಾಲೀಮು ಆರಂಭಗೊಂಡಿರುವುದು ವಿಶೇಷವಾಗಿದ್ದು, ಬೆಳಗ್ಗೆ ಅರಮನೆ ಅಂಗಳದಿಂದ ಸುಭಾಷ್‌ಚಂದ್ರಬೋಸ್ ವೃತ್ತ(ಹಳೇ ಆರ್‌ಎಂಸಿ ಸರ್ಕಲ್) ಹಾಗೂ ಸಂಜೆ ಆಯುರ್ವೇದ ಆಸ್ಪತ್ರೆ ವೃತ್ತದವರೆಗೆ ಆನೆಗಳು ಹೆಜ್ಜೆ ಹಾಕಿವೆ.

ಇಂದು ಬೆಳಗ್ಗೆ 7.30ಕ್ಕೆ ಅರಮನೆ ಮುಂಭಾಗದ ಕೋಡಿ ಸೋಮೇಶ್ವರ ದೇವಾಲಯದ ಬಳಿಯ ಆನೆ ಶಿಬಿರದಿಂದ ಹೊರಟ ಅಭಿಮನ್ಯು, ಧನಂಜಯ, ಭೀಮ, ಏಕಲವ್ಯ, ಮಹೇಂದ್ರ, ಕಂಜನ್, ಪ್ರಶಾಂತ, ಕಾವೇರಿ ಹಾಗೂ ಲಕ್ಷ್ಮೀ ಆನೆಗಳು ಬಲರಾಮ ದ್ವಾರದ ಮೂಲಕ ಚಾಮರಾಜ ವೃತ್ತ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಆಯುರ್ವೇದ ಆಸ್ಪತ್ರೆ ವೃತ್ತದ ಮೂಲಕ ಹಳೇ ಆರ್‌ಎಂಸಿ ವೃತ್ತದವರೆಗೆ ತೆರಳಿ ವಾಪಸ್ ಅರಮನೆ ಆವರಣದವರೆಗೆ ನಡಿಗೆ ತಾಲೀಮು ನಡೆಸಿದವು. ಹಾಗೆಯೇ ಸಂಜೆ 5.28ಕ್ಕೆ ಅಭಿಮನ್ಯು ನೇತೃತ್ವದಲ್ಲೇ ತಾಲೀಮು ಆರಂಭಿಸಿದ ಗಜಪಡೆ, ಆಯುರ್ವೇದ ಆಸ್ಪತ್ರೆ ವೃತ್ತದವರೆಗೆ ಸಾಗಿ ಸಂಜೆ 6.42ರ ಹೊತ್ತಿಗೆ ಅರಮನೆಗೆ ವಾಪಸ್ಸಾಯಿತು.


> ಇಂದಿನಿಂದ ದಸರಾ ಗಜಪಡೆಗೆ ಜಂಬೂ ಸವಾರಿ ತಾಲೀಮು ಆರಂಭಿಸಲಾಗಿದೆ. ಎಲ್ಲಾ ಆನೆಗಳೂ ಆರೋಗ್ಯವಾಗಿವೆ ಎಂದು ವೈದ್ಯರು ದೃಢಪಡಿಸಿದ್ದಾರೆ. ಈಗಾಗಲೇ ಸಾಮಾನ್ಯ ಆಹಾರದ ಜೊತೆಗೆ ವಿಶೇಷ ಆಹಾರವನ್ನೂ ನೀಡಲಾಗುತ್ತಿದೆ. ಮೊದಲ ತಂಡದ 9 ಆನೆಗಳು ಈ ಹಿಂದೆಯೂ ದಸರಾ ಮೆರವಣಿಗೆಯಲ್ಲಿ ಭಾಗಿಯಾಗಿದ್ದರಿಂದ ನಗರದ ವಾತಾವರಣ ಹಾಗೂ ವಾಹನಗಳ ಶಬ್ಧಕ್ಕೆ ಹೊಂದಿಕೊಂಡಿವೆ. ವಿಶ್ವ ಆನೆಗಳ ದಿನದಂದು ಸಾರ್ವಜನಿಕರಿಗೆ ಗಜಪಡೆಯನ್ನೇ ನೋಡುವ ಅವಕಾಶ ಸಿಕ್ಕಿದೆ.
> -ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್

ಈ ಬಾರಿ ದಸರಾ ಮಹೋತ್ಸವದ ಮೊದಲ ದಿನದ ಗಜಪಡೆ ತಾಲೀಮು ಕಣ್ತುಂಬಿಕೊಂಡ ಸಾರ್ವಜನಿಕರು, ತಮ್ಮ ಮೊಬೈಲ್‌ಗಳಲ್ಲಿ ಗಾಂಭೀರ್ಯದ ಗಜಪಡೆ ನಡಿಗೆಯನ್ನು ಸೆರೆ ಹಿಡಿದು ಸಂಭ್ರಮಿಸಿದರು. ದೂರದಿಂದಲೇ ಆನೆಗಳು ಸಾಗುವುದನ್ನು ಸೆಲ್ಫಿಯಲ್ಲಿ ಸೆರೆ ಹಿಡಿಯುವ ಪ್ರಯತ್ನ ಮಾಡಿದರು. ಸಯ್ಯಾಜಿರಾವ್ ರಸ್ತೆಯಲ್ಲಿ ಸಾಗುವಾಗ ದೇವರಾಜ ಮಾರುಕಟ್ಟೆ ಬಳಿಯ ವ್ಯಾಪಾರಿಗಳು ಆನೆಗಳಿಗೆ ಧರಿಸಲು ಕಾವಾಡಿಗಳಿಗೆ ಹೂ ನೀಡಿದರು. ನಿಂತಲ್ಲೇ ಭಕ್ತಿಯಿಂದ ಗಜಪಡೆಗೆ ನಮಿಸಿದರು.

ವಿವಿ ಹಂತದ ತಾಲೀಮು: ದಸರಾ ಜಂಬೂ ಸವಾರಿ ನೆರವೇರುವ ಮಾರ್ಗದಲ್ಲಿ ಗಜಪಡೆಗೆ ತಾಲೀಮು ನಡೆಸುವುದು ವಾಡಿಕೆ. ಆರಂಭಿಕ ದಿನಗಳಲ್ಲಿ ಸ್ವಲ್ಪ ದೂರ ತಾಲೀಮು ನಡೆಸಿ, ಹಂತ ಹಂತವಾಗಿ ಬನ್ನಿಮಂಟಪದವರೆಗೂ ಆನೆಗಳಿಗೆ ನಡಿಗೆ ತರಬೇತಿ ನೀಡಲಾಗುತ್ತದೆ. ಈ ಬಾರಿ ದಸರಾದಲ್ಲಿ ಭಾಗಿಯಾಗಲಿರುವ ಒಟ್ಟು 14ರಲ್ಲಿ ಸದ್ಯ 9 ಆನೆಗಳು ಅರಮನೆ ಅಂಗಳದಲ್ಲಿ ಬೀಡುಬಿಟ್ಟಿದ್ದು, ಅವುಗಳಿಗೆ ತಾಲೀಮು ಆರಂಭಿಸಲಾಗಿದೆ. ಇನ್ನೆರಡು ವಾರದಲ್ಲಿ ಎರಡನೇ ತಂಡದಲ್ಲಿ ಉಳಿದ ಐದು ಆನೆಗಳೂ ಆಗಮಿಸಿದ ನಂತರ ಗಜಪಡೆಯ ಸಂಪೂರ್ಣ ತಾಲೀಮು ನಡೆಸಲಾಗುವುದು. ಹೀಗೆ ಸಾಮಾನ್ಯ ತಾಲೀಮು ಬಳಿಕ, ಭಾರ ಹೊರುವ ತಾಲೀಮು ನಂತರ ಮರದ ಅಂಬಾರಿ ಹೊರುವ ತಾಲೀಮು ನಡೆಯಲಿದೆ. ಮರದ ಅಂಬಾರಿ ಹೊರುವ ತಾಲೀಮು ವೇಳೆ ಸಾಂಪ್ರದಾಯಿಕ ಫಿರಂಗಿ ತಾಲೀಮು ಅಂತಿಮವಾಗಿ ಜಂಬೂ ಸವಾರಿ ಪುಷ್ಪಾರ್ಚನೆ ತಾಲೀಮು ಕೂಡ ನಡೆಯಲಿದೆ. ಒಟ್ಟಾರೆ ಗಜಪಡೆಯನ್ನು ವಿವಿಧ ಹಂತಗಳಲ್ಲಿ ಜಂಬೂ ಸವಾರಿಗೆ ಸನ್ನದ್ಧಗೊಳಿಸಲಾಗುತ್ತದೆ.

ಗಜಪಯಣದ ಮೂಲಕ ಆ.4ರಂದು ಮೈಸೂರಿಗೆ ಆಗಮಿಸಿದ ಮೊದಲ ತಂಡದ 9 ಆನೆಗಳು, ಆ.10ರಂದು ಅಶೋಕಪುರಂ ಅರಣ್ಯ ಭವನದ ಆವರಣದಿಂದ ನಡಿಗೆ ಮೂಲಕ ಅರಮನೆ ಆವರಣಕ್ಕೆ ಆಗಮಿಸಿವೆ. ಸೋಮವಾರ ಬೆಳಗ್ಗೆ ಧನ್ವಂತರಿ ರಸ್ತೆಯಲ್ಲಿ ಆನೆಗಳ ತೂಕ ಪರೀಕ್ಷೆಯೂ ಆಗಿದೆ.

ಶ್ರೀಗಳ ಆಶೀರ್ವಾದ



ಮೈಸೂರಿನ ಚಾಮರಾಜ ಕ್ಷೇತ್ರದ ಬಿಜೆಪಿ ಮುಖಂಡ ಡಾ.ಸುಶ್ರುತ್ ಗೌಡ ತಮ್ಮ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠಕ್ಕೆ ಮಂಗಳವಾರ ಭೇಟಿ ನೀಡಿ, ಶ್ರೀಗಳ ಆಶೀರ್ವಾದ ಪಡೆದರು. ಈ ವೇಳೆ ಮುಖಂಡರಾದ ಕೆ.ಯೋಗೇಶ್, ನಿಖಿಲ್, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್ ಇದ್ದರು.

ಕೆ.ಆರ್.ಪೇಟೆ: ಹೃದಯಾಘಾತದಿಂದ ಇಂಜಿನಿಯರಿಂಗ್ ವಿದ್ಯಾರ್ಥಿ ಸಾವು



ಕೆ.ಆರ್.ಪೇಟೆ, ಆ.12– ಹೃದಯಾಘಾತದಿಂದ ಇಂಜಿನಿಯರಿಂಗ್ ವಿದ್ಯಾರ್ಥಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಕರೋಟಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ನವೀನ್ (21) ಸಾವನ್ನಪ್ಪಿದವರು. ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಮಾಡುತ್ತಿದ್ದ ಈತ ರಜೆ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಆಗಮಿಸಿದ್ದ. ಈ ವೇಳೆ ನವೀನ್‌ಗೆ ಹಠಾತ್ ಹೃದಯಾಘಾತವಾಗಿದ್ದು, ಪೋಷಕರು ಕಿಕ್ಕೇರಿ ಸರ್ಕಾರಿ ಆಸ್ಪತ್ರೆ ದಾಖಲಿಸಿದ್ದಾರೆ. ಆದರೆ ಆಸ್ಪತ್ರೆ ಸಿಬ್ಬಂದಿ ಪ್ರಾಥಮಿಕ ಚಿಕಿತ್ಸೆ ನೀಡದೆ, ಚನ್ನರಾಯಪಟ್ಟಣ ಆಸ್ಪತ್ರೆಗೆ ತೆರಳುವಂತೆ ತಿಳಿಸಿದ್ದಾರೆ. ಚಿಕಿತ್ಸೆಗಾಗಿ ಚನ್ನರಾಯಪಟ್ಟಣಕ್ಕೆ ಕರೆದೊಯ್ಯುವ ಮಾರ್ಗಮಧ್ಯೆ ನವೀನ್ ಸಾವನ್ನಪ್ಪಿದ್ದಾನೆ.

ಪೋಷಕರ ಆಕ್ರಂದನ: ಮಗನ ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಕಿಕ್ಕೇರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ್ದರೆ ನನ್ನ ಮಗ ಬದುಕುಳಿಯುತ್ತಿದ್ದ ಎಂದು ನವೀನ್ ಪೋಷಕರು ಆರೋಪಿಸಿದರು.

ಭೂ ಪರಿಹಾರದ ಬಾಕಿ ಪಾವತಿ ವಿಳಂಬ

ಎಂಡಿಎಗೆ ಸೇರಿದ ನಾಲ್ಕು ಕಾರು ಜಪ್ತಿಗೆ ಕೋರ್ಟ್ ಆದೇಶ

ಕೋರ್ಟ್ ಅಮೀನ್ ಜೊತೆ ಜಪ್ತಿಗೆ ಬಂದು ಬರಿಗೈಯಲ್ಲಿ ವಾಪಸ್ ಆದ ಭೂ ಮಾಲೀಕರ ಪರ ವಕೀಲರು

ಮೈಸೂರು,ಆ.12(ಪಿಎಂ)– ಭೂ ಸ್ವಾಧೀನದ ಬಾಕಿ ಪರಿಹಾರ ಹಣ ಪಾವತಿಸದ ಹಿನ್ನೆಲೆಯಲ್ಲಿ ಎಂಡಿಎಗೆ (ಮೈಸೂರು ಅಭಿವೃದ್ಧಿ ಪ್ರಾಧಿಕಾರ) ಸೇರಿದ ನಾಲ್ಕು ಕಾರುಗಳ ಜಪ್ತಿಗೆ ಮೈಸೂರಿನ ನಾಲ್ಕನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಆದೇಶಿಸಿದೆ.

ಮೈಸೂರಿನ ಹೃದಯ ಭಾಗದಲ್ಲಿರುವ ಡಿ.ದೇವರಾಜ ಅರಸು ರಸ್ತೆಯ ಅಗಲೀಕರಣಕ್ಕಾಗಿ 1979ರಲ್ಲಿ ಗುಣಾಂಬ ಮ್ಯಾಟರ್ನಿಟಿ ಅಂಡ್ ಚೈಲ್ಡ್ ವೆಲ್‌ಫೇರ್ ಟ್ರಸ್ಟ್‌ಗೆ ಸೇರಿದ ಜಾಗವನ್ನು ಅಂದಿನ ಸಿಐಟಿಬಿ (ಇಂದಿನ ಎಂಡಿಎ) ಭೂಸ್ವಾಧೀನಪಡಿಸಿಕೊಂಡಿತ್ತು. ಈ ಸಂಬಂಧ ನಿಗದಿಪಡಿಸಿದ ಪರಿಹಾರ ನ್ಯಾಯಸಮ್ಮತವಲ್ಲವೆಂದು ಟ್ರಸ್ಟ್ ನ್ಯಾಯಾಲಯದ ಮೊರೆ ಹೋಗಿತ್ತು.

ಇದೀಗ ಕೋರ್ಟ್ ಆದೇಶದಂತೆ ಬಾಕಿ ಪರಿಹಾರ ಪಾವತಿಸದ ಕಾರಣ ಎಂಡಿಎಗೆ ಸೇರಿದ ನಾಲ್ಕು ಕಾರುಗಳನ್ನು ಜಪ್ತಿ ಮಾಡಿಕೊಳ್ಳುವಂತೆ 4ನೇ ಹೆಚ್ಚುವರಿ ಸಿವಿಲ್ ಕೋರ್ಟ್ ಆದೇಶ ನೀಡಿದೆ. ಅದರಂತೆ ಮಂಗಳವಾರ ಟ್ರಸ್ಟ್ ಪರ ವಕೀಲ ಬಿ.ಎಸ್.ಚಂದ್ರಶೇಖರ್, ಕೋರ್ಟ್ ಅಮೀನ್ ಸುರೇಶ್ ಜಪ್ತಿ ವಾರಂಟ್ ಪ್ರತಿಯೊಂದಿಗೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಎಂಡಿಎ ಆವರಣಕ್ಕೆ ಬಂದರಾದರೂ ಯಾವುದೇ ಪ್ರಯೋಜನವಾಗದೇ ಬರಿಗೈಯಲ್ಲಿ ಹಿಂತಿರುಗಿದರು.



ಎಂಡಿಎ ಕಚೇರಿಗೆ ಕೋರ್ಟ್ ಜಪ್ತಿ ವಾರಂಟ್‌ನೊಂದಿಗೆ ವಕೀಲ ಬಿ.ಎಸ್.ಚಂದ್ರಶೇಖರ್, ಕೋರ್ಟ್ ಅಮೀನ್ ಸುರೇಶ್ ಮಂಗಳವಾರ ಭೇಟಿ ನೀಡಿದ್ದರು.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ವಕೀಲ ಬಿ.ಎಸ್.ಚಂದ್ರಶೇಖರ್, ಬಾಕಿ ಪರಿಹಾರ ಹಣ ಮತ್ತು ಅದರ ಮೇಲಿನ ಬಡ್ಡಿ ಹಣವನ್ನು ಪಾವತಿ ಮಾಡದ ಹಿನ್ನೆಲೆಯಲ್ಲಿ ಎಂಡಿಎಗೆ ಸೇರಿದ ನಾಲ್ಕು ಕಾರುಗಳ ವಶಕ್ಕೆ ಕೋರ್ಟ್ ಜಪ್ತಿ ವಾರಂಟ್ ಹೊರಡಿಸಿದೆ ಎಂದು ತಿಳಿಸಿದರು.

ನಿಗದಿಪಡಿಸಿದ ಪರಿಹಾರ ಹಣ ಸೂಕ್ತವಲ್ಲವೆಂದು ಟ್ರಸ್ಟ್‌ನಿಂದ ತಕರಾರು ಅರ್ಜಿ ಸಲ್ಲಿಸಲಾಗಿತ್ತು. ಈ ಸಂಬಂಧ ಕಡತವನ್ನು ನ್ಯಾಯಾಲಯಕ್ಕೆ ಎಂಡಿಎ ಸಲ್ಲಿಸಿತ್ತು. ಭೂ ಸ್ವಾಧೀನ ಕಾಯ್ದೆ ಕಲಂ 18ರ ಅಡಿಯಲ್ಲಿ 4ನೇ ಹೆಚ್ಚುವರಿ ಸಿವಿಲ್ ಕೋರ್ಟ್, ಹೆಚ್ಚಿನ ಪರಿಹಾರ ನೀಡುವಂತೆ ತೀರ್ಪು ನೀಡಿತ್ತು. ಆ ಬಳಿಕ ಕೋರ್ಟ್ ಸೂಚಿಸಿದ ಒಟ್ಟು 8 ಕೋಟಿ ಪರಿಹಾರದ ಹಣದಲ್ಲಿ ಹಂತ ಹಂತವಾಗಿ 5 ಕೋಟಿ ರೂ. ಅನ್ನು ಎಂಡಿಎಯಿಂದ ಸದರಿ ಟ್ರಸ್ಟ್‌ಗೆ ಪಾವತಿ ಮಾಡಲಾಗಿದೆ. ಆದರೆ ಬಾಕಿ ಇರುವ 3 ಕೋಟಿ ರೂ.ಗೂ ಅಧಿಕ ಪರಿಹಾರದ ಹಣವನ್ನು ಪಾವತಿಸದೇ ವಿಳಂಬ ಮಾಡುತ್ತಿರುವ ಹಿನ್ನೆಲೆಯಲ್ಲಿ ಡಿಕ್ರಿದಾರರಾದ ಟ್ರಸ್ಟ್‌ನವರು ಕೋರ್ಟ್‌ನಲ್ಲಿ ಜಾರಿ ಅರ್ಜಿ ಪ್ರಕರಣ ದಾಖಲಿಸಿದ್ದರು ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ಕೋರ್ಟ್ ಎಂಡಿಎ ಆಯುಕ್ತರ ಕಾರು ಸೇರಿದಂತೆ ನಾಲ್ಕು ಕಾರುಗಳ ಜಪ್ತಿಗೆ ಆದೇಶಿಸಿದೆ. ಹೀಗಾಗಿ ಕೋರ್ಟ್ ಅಮೀನ್ ಸುರೇಶ್ ಜಪ್ತಿ ವಾರಂಟ್ ಅನ್ನು ಎಂಡಿಎ ಅಧಿಕಾರಿಗಳ ಮುಂದೆ ಹಾಜರುಪಡಿಸಿದರೂ ಪ್ರಯೋಜನವಾಗಲಿಲ್ಲ. ಜಪ್ತಿಗೆ ಸಂಬಂಧಿಸಿದ ಕಾರುಗಳು ಎಂಡಿಎ ಕಚೇರಿ ಆವರಣದಲ್ಲಿ ಇರಲಿಲ್ಲ ಎಂದರು.

ತವರಿಗೆ ಕೊಂಡೊಯ್ಯುತ್ತಿದ್ದ ಮಹಿಳೆ ಆಭರಣ ಬಸ್ ನಿಲ್ದಾಣದಲ್ಲಿ ಕಳವು

ಮೈಸೂರು, ಆ.12– ವರಮಹಾಲಕ್ಷ್ಮೀ ಹಬ್ಬಕ್ಕೆಂದು ತವರಿಗೆ ತೆಗೆದುಕೊಂಡು ಹೋಗುತ್ತಿದ್ದ ಸುಮಾರು ಐದು ಲಕ್ಷ ರೂ. ಮೌಲ್ಯದ ಚಿನ್ನಾಭರಣವನ್ನು ಮೈಸೂರಿನ ಸಬರ್ಬನ್ ಬಸ್ ನಿಲ್ದಾಣದಲ್ಲಿ ಖದೀಮರು ಕಳ್ಳತನ ಮಾಡಿರುವುದಾಗಿ ಮಹಿಳೆಯೊಬ್ಬರು ಲಷ್ಕರ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮೈಸೂರಿನ ಅಗ್ರಹಾರ ನಿವಾಸಿ ಎಸ್.ಜಿ. ವೀಣಾ ದೂರು ನೀಡಿದ್ದು, ಆ.7ರಂದು ಸಂಜೆ ಸಾಲಿಗ್ರಾಮದಲ್ಲಿರುವ ತವರು ಮನೆಗೆ ಹೋಗುವಾಗ ವರಮಹಾಲಕ್ಷ್ಮೀ ಹಬ್ಬದಂದು ಪೂಜಿಸಲೆಂದು ನನ್ನ ಸುಮಾರು 90 ಗ್ರಾಂ ಚಿನ್ನದ ಒಡವೆಗಳನ್ನು ಬಾಕ್ಸ್‌ನಲ್ಲಿ ಹಾಕಿಕೊಂಡು, ವ್ಯಾನಿಟಿ ಬ್ಯಾಗ್‌ನಲ್ಲಿ ಇಟ್ಟುಕೊಂಡಿದ್ದೆ. ಸಬರ್ಬನ್ ಬಸ್ ನಿಲ್ದಾಣದಲ್ಲಿ ಬಸ್ ಹತ್ತುವಾಗ ತುಂಬಾ ರಶ್ ಇತ್ತು. ಬಸ್ ಹತ್ತಿ ವ್ಯಾನಿಟಿ ಬ್ಯಾಗ್ ನೋಡಿದಾಗ ಅದರ ಜಿಪ್ ಕಿತ್ತುಹೋಗಿತ್ತು. ಅದರೊಳಗಿಟ್ಟಿದ್ದ ಚಿನ್ನಾಭರಣದ ಬಾಕ್ಸ್ ಕಳ್ಳತನವಾಗಿತ್ತು ಎಂದು ತಿಳಿಸಿದ್ದಾರೆ.

ಮೊಹಮ್ಮದ್ ತಾಹ ಶತಕ: ಲಯನ್ಸ್ ವಿರುದ್ಧ ಟೈಗರ್ಸ್‌ಗೆ ಜಯ

ಮೈಸೂರು, ಆ.12– ಮೊಹಮ್ಮದ್ ತಾಹ ಅವರ ಆಕರ್ಷಕ ಶತಕ ಹಾಗೂ ದೇವದತ್ ಪಡಿಕ್ಕಲ್ ಅವರ ಅರ್ಧಶತಕದ ನೆರವಿನಿಂದ ಶಿವಮೊಗ್ಗ ಲಯನ್ಸ್ ವಿರುದ್ಧ ಹುಬ್ಬಳ್ಳಿ ಟೈಗರ್ಸ್ 29 ರನ್‌ಗಳ ಜಯ ಸಾಧಿಸಿದೆ.

ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ ಟೈಗರ್ಸ್ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 216 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಪ್ರಖರ್ ಚತುರ್ವೇದಿ 8 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ಮೊಹಮ್ಮದ್ ತಾಹ ಹಾಗೂ ದೇವದತ್ ಪಡಿಕ್ಕಲ್ ಶತಕದ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 8 ಬೌಂಡರಿ, 1 ಸಿಕ್ಸರ್ ಒಳಗೊಂಡ 52 ರನ್ ಗಳಿಸಿದ್ದ ಪಡಿಕ್ಕಲ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಅಬ್ಬರಿಸಿದ ತಾಹ 53 ಎಸೆತಗಳಲ್ಲಿ 6 ಸಿಕ್ಸರ್, 10 ಬೌಂಡರಿ ಒಳಗೊಂಡ 101 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ಕೃಷ್ಣನ್ ಶ್ರೀಜಿತ್, 27, ಅಭಿನವ್ ಮುಕುಂದ್ 13 ರನ್ ಗಳಿಸಿದರು. ಶಿವಮೊಗ್ಗ ಪರ ವಿದ್ವತ್ ಕಾವೇರಪ್ಪ 2, ವಿ.ಕೌಶಿಕ್, ಆನಂದ್ ದೊಡ್ಡಮನಿ ತಲಾ ಒಂದೊಂದು ವಿಕೆಟ್ ಪಡೆದರು.



ಶತಕದ ಸಂಭ್ರಮದಲ್ಲಿ ಮೊಹಮ್ಮದ್ ತಾಹ

217 ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ಶಿವಮೊಗ್ಗ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 187 ರನ್ ಗಳಿಸಿ ಸೋಲು ಅನುಭವಿಸಿತು. ತಂಡದ ಪರ ಅನಿರುದ್ಧ್ ಜೋಶಿ 42 ಎಸೆತಗಳಲ್ಲಿ 9 ಸಿಕ್ಸರ್, 3 ಬೌಂಡರಿ ಒಳಗೊಂಡ 79 ರನ್ ಗಳಿಸಿ ಏಕಾಂಗಿ ಹೋರಾಟ ನಡೆಸಿದರಾದರೂ ತಂಡಕ್ಕೆ ಜಯ ತಂದು ಕೊಡಲು ಸಾಧ್ಯವಾಗಲಿಲ್ಲ. ಉಳಿದಂತೆ ಧ್ರುವ್ ಪ್ರಭಾಕರ್ 30, ಅನೀಶ್ವರ್ ಗೌತಮ್ 32, ಅವಿನಾಶ್ ಡಿ.22 ರನ್ ಗಳಿಸಿದರು. ಹುಬ್ಬಳ್ಳಿ ಪರ ನಿಶ್ಚಿತ್ ಪೈ, ಕೆ.ಸಿ. ಕಾರ್ಯಪ್ಪ ತಲಾ 2, ರಿತೇಶ್ ಭಟ್ಕಳ್, ಮನ್ವಿತ್ ಕುಮಾರ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಮೊಹಮ್ಮದ್ ತಾಹ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮೈಸೂರು ವಾರಿಯರ್ಸ್ ವಿರುದ್ಧ ಗುಲ್ಬರ್ಗಾ ಮಿಸ್ಟಿಕ್ಸ್‌ಗೆ ಭರ್ಜರಿ ಜಯ



ಮೈಸೂರು, ಆ.12– ತಂಡದ ಸಾಂಘಿಕ ಪ್ರದರ್ಶನದ ನೆರವಿನಿಂದ ಮೈಸೂರು ವಾರಿಯರ್ಸ್ ವಿರುದ್ಧ ಗುಲ್ಬರ್ಗಾ ಮಿಸ್ಟಿಕ್ಸ್ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಮೈಸೂರಿನ ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಮಂಗಳವಾರ ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 184 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಸಿ.ಎ. ಕಾರ್ತಿಕ್ ಕೇವಲ 4 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಎಸ್.ಯು. ಕಾರ್ತಿಕ್ ತಲಾ 3 ಸಿಕ್ಸರ್, ಬೌಂಡರಿ ಒಳಗೊಂಡ 36 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಜೊತೆಯಾದ ಕೆ.ವೆಂಕಟೇಶ್ ಹಾಗೂ ಹರ್ಷಿಲ್ ಧರ್ಮನಿ 72 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 2 ಬೌಂಡರಿ, 3 ಸಿಕ್ಸರ್ ಒಳಗೊಂಡ 40 ರನ್ ಗಳಿಸಿ ಹರ್ಷಿಲ್ ಧರ್ಮನಿ ಔಟಾದರು. ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ಮಾಡಿದ ಕೆ.ವೆಂಕಟೇಶ್ 50 ಎಸೆತಗಳಲ್ಲಿ 5 ಬೌಂಡರಿ, 4 ಸಿಕ್ಸರ್ ಒಳಗೊಂಡ 77 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ನಾಯಕ ಮನೀಶ್ ಪಾಂಡೆ 12 ರನ್ ಗಳಿಸಿದರಾದರೂ ಉಳಿದವರಿಂದ ನಿರೀಕ್ಷಿತ ಪ್ರದರ್ಶನ ಮೂಡಿ ಬರಲಿಲ್ಲ. ಉಳಿದಂತೆ ಯಶೋವ ರ್ಧನ್ ಪರಂತಪ್ 7 ರನ್ ಗಳಿಸಿದರು. ಗುಲ್ಬರ್ಗಾ ಪರ ಲ್ಯಾವಿಶ್ ಕೌಶಲ್ 3, ಮೋನಿಶ್ ರೆಡ್ಡಿ 2, ವಿಜಯ್ ಕುಮಾರ್ ವೈಶಾಕ್ 1 ವಿಕೆಟ್ ಪಡೆದರು.

185 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಲ್ಬರ್ಗಾ ಮಿಸ್ಟಿಕ್ಸ್ 18 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 187 ರನ್ ಗಳಿಸಿ ಜಯ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಲುವ್ನಿತ್ ಸಿಸೋಡಿಯಾ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ 23 ರನ್ ಗಳಿಸಿದರು. ನಂತರ ಜೊತೆಯಾದ ನಿಕಿನ್ ಜೋಸ್ ಹಾಗೂ ಪ್ರಜ್ವಲ್ ಪವನ್ 92 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ನಿಕಿನ್ ಜೋಸ್ 5 ಬೌಂಡರಿ, 1 ಸಿಕ್ಸರ್ ಒಳಗೊಂಡ 52 ರನ್ ಗಳಿಸಿದರೇ, ಪ್ರಜ್ವಲ್ ಪವನ್ 45 ರನ್ ಗಳಿಸಿದರು. ನಂತರ ಬಂದ ಸ್ಮರಣ್ ರವಿಚಂದ್ರನ್ 22 ಎಸೆತಗಳಲ್ಲಿ 4 ಸಿಕ್ಸರ್, 5ಬೌಂಡರಿ ಒಳಗೊಂಡ ಮಿಂಚಿನ 52 ರನ್ ಗಳಿಸಿ ತಂಡಕ್ಕೆ ಜಯ ತಂದು ಕೊಟ್ಟರು.

ಮೈಸೂರು ವಾರಿಯರ್ಸ್ ಪರ ಕೋದಂಡ ಅಜಿತ್ ಕಾರ್ತಿಕ್, ಯಶೋವರ್ಧನ್ ಪರಂತಪ್ ತಲಾ ಒಂದೊಂದು ವಿಕೆಟ್ ಒಪ್ಪಿಸಿದರು. ನಿಕಿನ್ ಜೋಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ನಕ್ಕರೆ ಅದೇ ಸ್ವರ್ಗ

ಹುಡುಗಿ : ನಿನ್ನೆ ನಾನು ರಾಖಿ ತಂದಿದ್ದೆ. ಯಾಕೆ ಕಟ್ಟಿಸಿಕೊಳ್ಳಲಿಲ್ಲ?

ಹುಡುಗ : ಹಾಗಾದರೆ ನಾಳೆ ನಾನು ತಾಳಿ ತರ್ತೀನಿ ಕಟ್ಟಿಸಿಕೊಳ್ತಿಯಾ?

ಮೈಸೂರು ಮಿತ್ರ

ಬುಧವಾರ, 13 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಎಲ್ಲೂ ಎಡವದಂತೆ ನಡೆಯುವುದು ದೊಡ್ಡದಲ್ಲ. ಎಷ್ಟು ಬಾರಿ ಬಿದ್ದರೂ ಎದ್ದು ಮುನ್ನಡೆಯುವುದು ಶ್ರೇಷ್ಠ ಸಾಧಕನ ಲಕ್ಷಣ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅತ್ತೆ ಮೇಲೆ ಕೋಪ
ಕತ್ತೆ ಮೇಲೆ ತೋರಿಸಿದ್ರು

ನಿಮ್ಮ ಪತ್ರಗಳು

■ ಮಹಾರಾಜ ಕಾಲೇಜು ಮೈದಾನದಲ್ಲೇ ಯುವ ದಸರಾ ನಡೆಸಲು ಮನವಿ

ಮಾನ್ಯರೆ,

ನಾಡ ಹಬ್ಬ ದಸರಾ ಕಾರ್ಯಕ್ರಮಗಳಲ್ಲಿ ಯುವ ದಸರಾ ಕಾರ್ಯಕ್ರಮ ಬಹು ಜನಪ್ರಿಯ ಕಾರ್ಯಕ್ರಮಗಳಲ್ಲೊಂದು. ಪ್ರತಿ ವರ್ಷ ಯುವ ದಸರಾ ಕಾರ್ಯಕ್ರಮವನ್ನು ಮಹಾರಾಜಾ ಕಾಲೇಜು ಮೈದಾನದಲ್ಲೇ ನಡೆಸಲಾಗುತ್ತಿತ್ತು. ಆದರೆ ಕಳೆದ ವರ್ಷ ಇಳೆಯರಾಜ, ಎ.ಆರ್.ರೆಹಮಾನ್ ಕರೆಸಿದ್ದಕ್ಕೆ ಹೆಚ್ಚು ಜನ ಸೇರಲಿ ಎಂದು ಉತ್ತನಹಳ್ಳಿ ಸಮೀಪ ಯುವ ದಸರಾ ಏರ್ಪಡಿಸಲಾಗಿತ್ತು. ಈ ಬಾರಿ ಮೊದಲಿನಂತೆಯೇ ಮಹಾರಾಜ ಕಾಲೇಜು ಮೈದಾನದಲ್ಲೇ ಏರ್ಪಡಿಸಲಿ. ಯುವ ದಸರಾ ಕಾರ್ಯಕ್ರಮವನ್ನು ಹೆಚ್ಚಾಗಿ ಯುವ ಜನತೆ ವೀಕ್ಷಿಸುತ್ತದೆ. ಕಾಲೇಜು ವಿದ್ಯಾರ್ಥಿಗಳು, ಹಾಸ್ಟೆಲ್ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಹೆಚ್ಚಾಗಿ ಭಾಗವಹಿಸಿ ಸಂಭ್ರಮಿಸಿ ಕುಣಿದು ಕುಪ್ಪಳಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತಾರೆ. ಈ ಬಾರಿಯೂ ಉತ್ತನಹಳ್ಳಿ ಮೈದಾನದಲ್ಲಿ ಯವ ದಸರಾ ಏರ್ಪಡಿಸಿದರೆ ಕಾಲೇಜು ವಿದ್ಯಾರ್ಥಿಗಳು, ಹಾಸ್ಟೆಲ್ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ, ಹಿರಿಯ ನಾಗರಿಕರಿಗೆ ತುಂಬಾ ತೊಂದರೆಯಾಗುತ್ತದೆ. ಏಕೆಂದರೆ ಎಲ್ಲರ ಬಳಿ ಸ್ಕೂಟರ್, ಕಾರು ಇರುವುದಿಲ್ಲ. ಆಟೋ ಪ್ರಯಾಣ ದರ ತುಂಬಾ ದುಬಾರಿ. ನಗರದ (ಸಿಟಿಯಿಂದ) ಹೊರಗಡೆ ಇರುವುದರಿಂದ ಕುಟುಂಬದವರೆಲ್ಲ (ಮಕ್ಕಳ ಸಮೇತ) ಭಾಗವಹಿಸಿ ಕಾರ್ಯಕ್ರಮ ನೋಡಲು ತುಂಬಾ ಕಷ್ಟವಾಗುತ್ತದೆ. ಆದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹಾದೇವಪ್ಪ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ್ ರೆಡ್ಡಿ, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಇದರ ಬಗ್ಗೆ ಗಮನ ಹರಿಸಿ ಯುವ ದಸರಾ ಕಾರ್ಯಕ್ರಮವನ್ನು ಪ್ರತಿ ವರ್ಷದಂತೆ ಮಹಾರಾಜ ಕಾಲೇಜು ಮೈದಾನದಲ್ಲಿ ಏರ್ಪಡಿಸಲಿ ಎಂಬುದು ನನ್ನ ಅಭಿಪ್ರಾಯ.

–ಅಹಲ್ಯ ಸಿ ನಾ. ಚಂದ್ರ, ಜನತಾ ನಗರ, ಮೈಸೂರು.

■ ಹದಗೆಟ್ಟ ರಸ್ತೆ ದುರಸ್ತಿಪಡಿಸಿ



ಮಾನ್ಯರೆ,

ಮೈಸೂರಿನ ರಿಂಗ್ ರಸ್ತೆ ಮತ್ತು ಹೆಬ್ಬಾಳು ಬಡಾವಣೆ ಸಂಪರ್ಕಿಸುವ ರಸ್ತೆ ಹಳ್ಳ ಕೊಳ್ಳಗಳಿಂದ ಕೂಡಿದ್ದು, ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ. ಇದರಿಂದಾಗಿ ಪೋಡಾರ್ ಶಾಲೆಗೆ ಹೋಗಲು ಚಿಕ್ಕ ಚಿಕ್ಕ ಮಕ್ಕಳು ಪ್ರಯಾಸ ಪಡುವಂತಾಗಿದೆ. ಅಲ್ಲದೆ ಇನ್ಫೋಸಿಸ್‌ಗೆ ಹೋಗುವ ಉದ್ಯೋಗಿಗಳಿಗೂ ತುಂಬಾ ಕಷ್ಟವಾಗಿದೆ. ಕೂಡಲೇ ಸಂಬಂಧ ಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ರಸ್ತೆ ದುರಸ್ತಿಪಡಿಸುವ ಮೂಲಕ ನಿವಾಸಿಗಳು, ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಶ್ವೇತಾರಾವ್, ವಿಜಯನಗರ 2ನೇ ಹಂತ, ಮೈಸೂರು.

■ ಕೇಂದ್ರ, ರಾಜ್ಯಗಳ ನಡುವೆ ಸಮನ್ವಯ ಅಗತ್ಯ

ಮಾನ್ಯರೆ,

ಪ್ರಧಾನಿ ಮೋದಿಯವರು ಬೆಂಗಳೂರಿಗೆ ಬಂದಿದ್ದ ಸಂದರ್ಭದಲ್ಲಿ ಮೆಟ್ರೋ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರದ ಪಾಲು ಹಾಗೂ ರಾಜ್ಯದ ಪಾಲು ಎಂಬ ತರ್ಕದ ಕ್ರೆಡಿಟ್ ಕಲಹ ನಡೆದಿರುವುದು ಗಮನಾರ್ಹ. ಇತ್ತೀಚಿನ ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಮಧ್ಯೆ ನಿರಂತರವಾಗಿ ನಡೆಯುತ್ತಿದ್ದ ಅನುದಾನದ ಸಂಘರ್ಷ ಇದೀಗ ಪ್ರಧಾನಿಯವರು ಬೆಂಗಳೂರಿಗೆ ಬಂದಾಗ ವೇದಿಕೆಯಲ್ಲಿಯೇ ನಡೆದಿರುವುದು ವಿಪರ್ಯಾಸ.

ಇಷ್ಟಕ್ಕೂ ರಾಷ್ಟ್ರದ ಅಭಿವೃದ್ಧಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಟ್ಟಿಗೆ ಕೈಜೋಡಿಸಬೇಕೆ ವಿನಹ ಈ ರೀತಿ ಅನುದಾನದ ಜಟಾಪಟಿಗೆ ಇಳಿದು ವೇದಿಕೆಯನ್ನು ಬಳಸಿಕೊಳ್ಳುವುದು ಮುಜುಗರ ತರುವ ವಿಚಾರ. ಒಕ್ಕೂಟ ವ್ಯವಸ್ಥೆಯಲ್ಲಿ ಯಾವುದೇ ರಾಜ್ಯಕ್ಕೆ ಅನುದಾನದ ಅಸಹನೆ ಆಗದಂತೆ ನೋಡಿಕೊಳ್ಳುವುದು ಕೇಂದ್ರದ ಜವಾಬ್ದಾರಿ. ಕೇಂದ್ರ ಸರ್ಕಾರವು ರಾಜ್ಯಗಳಿಗೆ ನೀಡಬೇಕಾದ ಹಣವನ್ನು ಸಮರ್ಪಕವಾಗಿ ನೀಡಿದರೆ, ಕೇಂದ್ರ ಹಾಗೂ ರಾಜ್ಯ ಸಹಭಾಗಿತ್ವದ ಯೋಜನೆಗಳಿಗೆ ತಾರತಮ್ಯವಿಲ್ಲದೆ ಅನುದಾನವನ್ನು ಕೇಂದ್ರ ನೀಡಿದರೆ ರಾಜ್ಯಗಳಿಗೆ ಅನುದಾನದ ಹಂಚಿಕೆ ಅಸಮಾಧಾನ ಇರದು. ಇನ್ನಾದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಒಕ್ಕೂಟ ವ್ಯವಸ್ಥೆಯಲ್ಲಿ ಅಸಮಾಧಾನ ಅಪಸ್ವರಗಳಿಗೆ ಆಸ್ಪದ ಕೊಡದೆ ಒಟ್ಟೊಟ್ಟಿಗೆ ಹೋಗುವುದರತ್ತ ತಮ್ಮ ಗಮನಹರಿಸಿ ಸಮನ್ವಯವನ್ನು ಸಾಧಿಸುವುದೊಳಿತು.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಒಳ ಮೀಸಲಾತಿ ಜಾರಿ ವಿಳಂಬ: ಸ್ಪರ್ಧಾರ್ಥಿಗಳ ಬದುಕು ಅತಂತ್ರ

ಮಾನ್ಯರೆ,

ನ್ಯಾ. ನಾಗ ಮೋಹನದಾಸ್ ಅವರ ನೇತೃತ್ವದ ಪರಿಶಿಷ್ಟ ಸಮುದಾಯಗಳ ಒಳ ಮೀಸಲಾತಿಯ ಸಂಪೂರ್ಣ ವರದಿ ರಾಜ್ಯ ಸರ್ಕಾರಕ್ಕೆ ಸಲಿಕೆಯಾಗಿದ್ದರು. ಈ ವರದಿಯನ್ನು ಜಾರಿಗೆ ತರಲು ಸರ್ಕಾರ ವಿಳಂಬ ಮಾಡುತ್ತಿರುವ ಕಾರಣ ರಾಜ್ಯದ ಎರಡೂ ಸಮುದಾಯಗಳ ಯುವಕರ ಬದುಕಿನ ಮೇಲೆ ಗಂಭೀರವಾದ ಪರಿಣಾಮ ಬೀರಿದೆ. ಉತ್ತಮ ಬದುಕು ಕಟ್ಟಿಕೊಳ್ಳಲು ಮನೆಮಠ ಹಾಗೂ ಊರು ಬಿಟ್ಟು ಸರ್ಕಾರಿ ಉದ್ಯೋಗಕ್ಕಾಗಿ ಹಂಬಲಿಸುತ್ತಿರುವ ಸಾಕಷ್ಟು ಯುವಕರ ಜೀವನದ ಪ್ರಶ್ನೆಯಾಗಿದೆ. ಒಳ ಮೀಸಲಾತಿಯ ಆಯೋಗ ರಚನೆಯಾದ ದಿನದಿಂದ ಯಾವುದೇ ರಾಜ್ಯ ಸರ್ಕಾರದ ನೇಮಕಾತಿಗಳ ಅಧಿಸೂಚನೆಗೆ ಆದೇಶ ನೀಡದೆ ತಡೆ ಹಿಡಿದಿರುವುದು ಸ್ಪರ್ಧಾರ್ಥಿಗಳ ಅತಂತ್ರ ಗೊಂದಲಕ್ಕೆ ಕಾರಣವಾಗಿದೆ. ರಾಜ್ಯ ಸರ್ಕಾರವು ಸ್ಪರ್ಧಾರ್ಥಿಗಳ ಬದುಕಿನ ಹಿತದೃಷ್ಟಿಯಿಂದ ತಕ್ಷಣ ಒಳ ಮೀಸಲಾತಿಯ ಜಾರಿಗೆ ಮುಂದಾಗಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅಧಿಸೂಚನೆಯನ್ನು ಹೊಡಿಸುವುದರ ಜೊತೆಗೆ ವಯೋಮಿತಿಯಲ್ಲೂ ಸಹ ಸಡಿಲಿಕೆ ಮಾಡಿ ಆದಷ್ಟು ಬೇಗ ಸರ್ಕಾರಿ ಉದ್ಯೋಗಗಳಿಗಾಗಿ ಅನೇಕ ವರ್ಷಗಳಿಂದ ಓದಿ ಕಾಯುತ್ತಿರುವ ಸ್ಪರ್ಧಾರ್ಥಿಗಳಿಗೆ ರಾಜ್ಯ ಸರ್ಕಾರವು ಸಿಹಿ ಸುದ್ದಿಯನ್ನು ನೀಡಿ ಪಾರದರ್ಶಕತೆಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವುದರ ಮೂಲಕ ನೇಮಕಾತಿಗೆ ಮುಂದಾಗಬೇಕಾಗಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ನುಡಿದಂತೆ ನಡೆಯಿರಲಿ...

ನುಡಿದಂತೆ ನಡೆವವನು ರೂಢಿಯೊಳಗುತ್ತಮನು ಎಂಬುದು ಸಾರ್ವತ್ರಿಕ ಸತ್ಯ. ಎಲ್ಲರೂ ತಮ್ಮ ಮಾತಿನಂತೆ ನಡೆದುಕೊಂಡರೆ ಆ ಲೋಕವೇ ಸ್ವರ್ಗವಾಗುತ್ತದೆ. ಮಾತು ದೇವತೆಗಳ ವಚನದಂತೆ ಅದ್ಭುತವಾಗಿದ್ದು, ನಡೆದ ರಾಕ್ಷಸರದಂತಾದರೆ ಈ ಲೋಕವೇ ನರಕ. ಶ್ರೀರಾಮನನ್ನು ದೇವರೆಂದು ಏಕೆ ಪೂಜಿಸುತ್ತೇವೆ? ಅವನು ನುಡಿದಂತೆ ನಡೆದನು. ಅವನನ್ನು ಆದರ್ಶವಾಗಿ ಸ್ವೀಕರಿಸಿದರೂ ನಾವು ಹಾಗೆ ನಡೆದುಕೊಳ್ಳುತ್ತಿಲ್ಲವೆಂಬುದು ವಿಷಾದನೀಯ.

ಜೀವನಾನುಭವದ ಕಣಜದಿಂದ ಕವಿ ಕೆ.ಸಿ. ಶಿವಪ್ಪನವರು ನುಡಿ–ನಡೆಗಳ ಬಗೆಗೆ ಹೇಳಿರುವ ಕೆಲವು ಚೌಪದಿಗಳನ್ನು ನೋಡಿದರೆ ನಮ್ಮ ತಪ್ಪುಗಳು ನಮ್ಮ ಅರಿವಿಗೆ ಬರುತ್ತವೆ. ಎಷ್ಟೋ ಸಂದರ್ಭಗಳಲ್ಲಿ ಆವಶ್ಯಕವಲ್ಲದಿರುವ ಮಾತುಗಳನ್ನು ಆಡಿ ನಾವು ತೊಂದರೆಗೆ ಸಿಕ್ಕಿಕೊಂಡಿದ್ದೇವೆ. ಅಂತಹ ಸ್ಥಿತಿಯನ್ನು ತಪ್ಪಿಸಲು ಮುದ್ದುರಾಮನ ಹಿತವಚನವನ್ನು ಕೇಳಬೇಕು –

ಎಷ್ಟುಚಿತವೋ ಅಷ್ಟು ಮಾತಾಡಿ ಸುಮ್ಮನಿರು
ಸೋನೆ ಮಳೆಯಂತಿರದ ಮಾತು ಉಲ್ಲಾಸ.
ಯಾರು ನುಡಿವರೊ ಅಧಿಕ ತಪ್ಪಿಗವರಧಿಕಾರಿ
ಕ್ಷೇಮಪಾತ್ರೆಯೊ ಮೌನ ಮುದ್ದುರಾಮ.

ಹೇಳಬೇಕಾದುದು ಏನಾದರೂ ಇದ್ದಾಗ ಮಾತ್ರ ಮಾತನಾಡಬೇಕು. ಎಲ್ಲಿ ಯಾವುದು ಉಚಿತ ಎಂಬುದನ್ನು ಅರಿತು ಅದನ್ನು ಅಷ್ಟೇ ಕಾಲದಲ್ಲಿ ಹೇಳಿ ಮುಗಿಸಬೇಕು. ಸೋನೆ ಮಳೆಯಂತೆ ಒಂದೇ ಸಮನೆ ಮಾತು ಸುರಿಯುತ್ತಿದ್ದರೆ, ಎಲ್ಲರಿಗೂ ಬೇಸರವೇ. ಹಾಗಿಲ್ಲದ ಮಾತು ಎಲ್ಲರ ಉಲ್ಲಾಸಕ್ಕೆ ಕಾರಣ. ಹೆಚ್ಚು ಮಾತನಾಡಿದರೆ ಅದರಲ್ಲಿ ಹೆಚ್ಚು ದೋಷಗಳಿರುವ, ತಪ್ಪುಗಳು ಹೆಚ್ಚಾಗಿರುವ ಸಂಭವವೇ ಇರುತ್ತದೆ. ಮೌನವೇ ಕ್ಷೇಮದ ಪಾತ್ರೆ. ಮೌನವನ್ನು ಆಶ್ರಯಿಸಿದಾಗ ಸುಳ್ಳನ್ನು ಹೇಳುವ ಅವಕಾಶ ತಪ್ಪುತ್ತದೆ. ಯಾರನ್ನಾದರೂ ನಿಂದಿಸಿ ಅವರ ಕೋಪಕ್ಕೆ ತುತ್ತಾಗುವ ಸಂದರ್ಭವೂ ಇರುವುದಿಲ್ಲ. ಆದ್ದರಿಂದ ಮೌನ ಕ್ಷೇಮದ ಪಾತ್ರೆ. ಮಾತನ್ನಾಡಿದ ಮೇಲೆ ಅದನ್ನು ಹಿಂದೆ ತೆಗೆದುಕೊಳ್ಳುವುದು ಕಷ್ಟದ ಕೆಲಸ. ಅದನ್ನೂ ಕವಿ ನೆನಪಿಸಿದ್ದಾರೆ–

ನುಡಿದಾದ ಮೇಲೆ ನೀ ಹಿಂಪಡೆಯಲಾರೆ ಅದ
ಮೌನದಿಂದಿರು ನಿಮಿಷ ನುಡಿವುದಕ್ಕೆ ಮುನ್ನ
ಔಚಿತ್ಯದಂಕಿತದ ಮೆದು ಮಾತೆ ಸೂಳ್ನುಡಿಯೊ
ನುಡಿ ಚಿಂತೆ ತರದಿರಲಿ ಮುದ್ದುರಾಮ

ಮಾತನಾಡುವುದಕ್ಕೆ ಮೊದಲು ಒಂದು ನಿಮಿಷ ಮೌನದಿಂದಿರಬೇಕು. ಈ ಮಾತಿನ ಪರಿಣಾಮವೇನಾಗಬಹುದು ಎಂದು ಯೋಚಿಸಬೇಕು. ಅನಂತರ ನುಡಿಯಬೇಕು. ನನ್ನ ಮಾತು ಉಚಿತವೆ? ಎಂಬ ಆಲೋಚನೆ ಒಳ್ಳೆಯದು. ಔಚಿತ್ಯದ ಪರಿಧಿಯೊಳಗೆ ಮಾತು ನಿಂತಿರಬೇಕು. ಅನುಚಿತವಾದ ಒಂದೇ ಮಾತು ನಮ್ಮ (ವಕ್ತೃವಿನ) ವ್ಯಕ್ತಿತ್ವವನ್ನೇ ಹಾಳು ಮಾಡಬಹುದು. ಅನೌಚಿತ್ಯವು ರಸಭಂಗಕ್ಕೆ ಕಾರಣವಾಗುವುದುಂಟು.

ಅನೌಚಿತ್ಯಾದ್ ಋತೇ ನಾನ್ಯದ್ ರಸಭಂಗಸ್ಯ ಕಾರಣಮ್ ।

(ರಸಭಂಗಕ್ಕೆ ಅನೌಚಿತ್ಯಕ್ಕಿಂತ ಬೇರೆ ಕಾರಣವಿಲ್ಲ) ಎಂದು ಪ್ರಖ್ಯಾತ ವಿಮರ್ಶಕ ಆನಂದವರ್ಧನನೇ ಹೇಳಿದ್ದಾನೆ. ಸಭೆಗಳಲ್ಲಿ ಅತ್ಯುತ್ಸಾಹದಿಂದ ಏನೇನೋ ನುಡಿದು ಅನಂತರ 'ನಾನು ಹಾಗೆ ಹೇಳಿರಲೇ ಇಲ್ಲ. ನನ್ನ ಮಾತನ್ನು ತಿರುಚಿ ವರದಿ ಮಾಡಿದ್ದಾರೆ' ಎಂದು ನುಣುಚಿಕೊಳ್ಳುವ ರಾಜಕಾರಣಿಗಳನ್ನು ನೋಡಿದ್ದೇವೆ. ಅಂತಹ ಚಿಂತೆಯನ್ನು ತರದಿರುವ ಮಾತನ್ನೇ ಆಡುವುದು ಉತ್ತಮ ಎಂದು ಮುದ್ದುರಾಮ ನಮ್ಮನ್ನು ಎಚ್ಚರಿಸಿದ್ದಾರೆ.

ನಮ್ಮ ಜೀವನದಲ್ಲಿ ಅನೇಕ ಸಮಸ್ಯೆಗಳು ಉಂಟಾಗುವುದು. ಏಕೆಂದರೆ, ನಾವು ಎಷ್ಟೋ ಬಾರಿ ದಾಕ್ಷಿಣ್ಯಕ್ಕೆ ಬಲಿಯಾಗಿ ಏನೋ ವಚನವನ್ನು ಕೊಟ್ಟು ಬಿಡುತ್ತೇವೆ. ಆಮೇಲೆ ಅದನ್ನು ನಡೆಸಲು ಸಾಧ್ಯವಾಗದೆ ತಲೆ ತಗ್ಗಿಸುವ ಸಂದರ್ಭಗಳು ಎದುರಾಗುತ್ತವೆ. ನನ್ನಂತಹವರನ್ನು ನೋಡಿ ಮುದ್ದುರಾಮ ಹೇಳಿದ್ದಾನೆ –

ಭಾಷೆ ಕೊಟ್ಟರೆ ಒಮ್ಮೆ ಪೂರೈಸು ಮರೆಯದೆಯೆ
ಯಾವುದಾಗದೊ ಅದನು ನುಡಿದು ಕೆಡಬೇಡ
ಆಸೆ ಹುಟ್ಟಿಸಿ ಮನದಿ ಕೊಡದಿದ್ದರದು ಪಾಪ
ನುಡಿದಂತೆ ನಡೆಯಿರಲಿ ಮುದ್ದುರಾಮ.

ಮಾತನ್ನು ಕೊಡಬಾರದು, ಕೊಟ್ಟರೆ ಅದನ್ನು ತಪ್ಪದೆ ಪೂರೈಸಬೇಕು. ನಿಮ್ಮ ಮನೆಗೆ ಬರುತ್ತೇನೆ ಎಂದು ಮಾತನ್ನು ಕೊಟ್ಟು ನಾನು ಹೋಗದಿದ್ದಾಗ ಆ ಆತಿಥೇಯರಿಗೆ ಆದ ವೈರಾಗ್ಯ ನನಗೆ ಅನಂತರ ತಿಳಿದು ತುಂಬ ವಿಷಾದ ಉಂಟಾಯಿತು. ಪ್ರಯೋಜನವೇನು? ನನ್ನ ಬಗೆಗೆ ಅವರಿಗಿದ್ದ ನಂಬಿಕೆ ನಷ್ಟವಾಯಿತು. ಯಾರದೋ ಮನಸ್ಸಿನಲ್ಲಿ ಆಶೆಯನ್ನು ಹುಟ್ಟಿಸಿ ಆಮೇಲೆ ಅದನ್ನು ಈಡೇರಿಸಲಾಗದಿದ್ದರೆ ಅದು ಪಾಪವೇ. ಆಶೆಯನ್ನು ಹುಟ್ಟಿಸದಿರುವುದು ಉತ್ತಮ. ಹುಟ್ಟಿಸಿ ಈಡೇರಿಸುವುದು ಮಧ್ಯಮ. ಆಶೆಯನ್ನು ಹುಟ್ಟಿಸಿ ಅದನ್ನು ಸಫಲಗೊಳಿಸದೆ ನಿರಾಶೆಗೊಳಿಸುವುದು ಅಧಮ. ನಮ್ಮ ಕೈಯಲ್ಲಾಗದ ಕೆಲಸವನ್ನು ಎಂದೂ ಒಪ್ಪಿಕೊಳ್ಳಬಾರದು. ಒಳ್ಳೆಯ ಕೆಲಸವನ್ನು ಮಾಡಬೇಕೆಂದಿದ್ದರೆ ಅದರ ಬಗೆಗೆ ಮಾತನಾಡದೆ ಮಾಡುವುದು ಲೇಸು. ಮಾತನಾಡಿ ಬಿಟ್ಟಿದ್ದರೆ, ಶತಾಯ ಗತಾಯ ಅದನ್ನು ನಡೆಸಿಕೊಡಲೇ ಬೇಕು.

ಎಷ್ಟೋ ಸಂದರ್ಭಗಳಲ್ಲಿ ಆಡಿದ ಒಂದು ಮಾತು ಸಂತೋಷದ ಹೂಬುಟ್ಟಿಯಾಗುತ್ತದೆ. ಅಮೃತದ ಕೊಡವಾಗುತ್ತದೆ. ಅವಿವೇಕದಿಂದ, ಗರ್ವದಿಂದ ಆಡಿದ ಮಾತು ಚೂರಿಯಾಗಿ, ಖಡ್ಗವಾಗಿ ಕೇಳಿದವನನ್ನು ಚುಚ್ಚುತ್ತದೆ. ಒಳ್ಳೆಯ, ಸಮಾಧಾನವನ್ನು ನೀಡುವ ನುಡಿಯನ್ನು ಮುದ್ದುರಾಮ ಮನಸಾರೆ ಹೊಗಳಿದ್ದಾನೆ.

ಯಾರೊ ಏಕೋ ಕರೆದು ಒಳಿತೆರಡು ಮಾತಾಡಿ
ನೀಡುವರು ಸಂತಸದ ಹೂಬುಟ್ಟಿಯನು
ಮನ ಆಗ ಗರಿಗೆದರಿ ಹಕ್ಕಿಯಂತಾಗುವುದು
ಹಂಚು ನೀ ಸವಿನುಡಿಯ ಮುದ್ದುರಾಮ.

ಅವರು ಯಾರೋ ನಮಗೆ ಗೊತ್ತಿಲ್ಲ. ಅಪರಿಚಿತರು, ನಿಷ್ಕಲ್ಮಷ ಮನಸ್ಸಿನವರು. ನಾವು ಮಾಡಿದ ಸಣ್ಣ ಪುಟ್ಟ ಸಾಧನೆಗಳನ್ನೂ ಪ್ರಶಂಸಿಸಿ ಬೆನ್ನು ತಟ್ಟಿ ಹೊಗಳುತ್ತಾರೆ. ಆಗ ನಮ್ಮ ಕಷ್ಟಗಳೆಲ್ಲ ಮರೆಯಾಗುತ್ತವೆ. ಅವರು ನಮಗೆ ಕೊಟ್ಟಿದ್ದು ಮಾತುಗಳಲ್ಲ, ಸಂತೋಷಗಳ ಹೂಬುಟ್ಟಿ – ಎಂಬ ಭಾವನೆ ಆಗ ನಮ್ಮಲ್ಲಿ ಹುಟ್ಟುತ್ತದೆ. ನಮ್ಮ ಮನಸ್ಸು ಹಕ್ಕಿಯಾಗಿ ಗರಿಗಳನ್ನು ಗೆದರಿ ಹಕ್ಕಿಯಂತೆ ಹಾರುವುದು. ಮುದ್ದುರಾಮನು ಇಂತಹ ಸವಿ ನುಡಿಯನ್ನು ಎಲ್ಲರೂ ಹಂಚಬೇಕೆನ್ನುತ್ತಾನೆ. ವಚನೇಕಾದರಿದ್ರತಾ? ಮಾತಿಗೂ ಬಡತನವೆ? ಅದನ್ನು ಕೊಡುವುದರಲ್ಲಿ ಸಂಕೋಚ ಬೇಡ. ಆದರೆ ಆ ಮಾತು ಹೃದಯದಿಂದ ಬಂದದ್ದಾಗಿರಬೇಕು, ಪ್ರಾಮಾಣಿಕವಾಗಿರಬೇಕು. ಕೇವಲ ತುಟಿಯ ಮೇಲಿನ ಮಾತಾಗಿರಬಾರದು. ನಿಜವಾದ ಮನಸ್ಸಿನ ಮಾತು ಅಪಾರ ಶಕ್ತಿಯನ್ನು ಹೊಂದಿರುತ್ತದೆ. ಅದನ್ನು ಮುದ್ದುರಾಮ ಹೊಗಳುವ ಬಗೆಯನ್ನು ನೋಡಿರಿ–

ಅಪರಿಚಿತ ನೆಲೆಯಲ್ಲಿ ಸವಿಮಾತು ಸಂಗಾತಿ
ನೇಹ ವರ್ಧನೆಗದುವೆ ನಿಜ ಆಪ್ತಮಿತ್ರ
ಮಾತು ಮಾಯಾದೀಪ ಮಾತೆ ಕಡು ಅಭಿಶಾಪ
ಉಕ್ತಿಯಲಿ ಶಕ್ತಿಯಿದೆ ಮುದ್ದುರಾಮ.

ಅಪರಿಚಿತರ ದೇಶದಲ್ಲಿ ಅಥವಾ ಸ್ಥಳದಲ್ಲಿಯೂ ಸವಿಯಾದ ಮಾತು ಸಂಗಾತಿಯಂತೆ, ಸಹಚಾರಿಣಿಯಂತೆ ನೆರವನ್ನು ನೀಡುತ್ತದೆ. ಬೇರೆ ಯಾರೂ ಇಲ್ಲದಿದ್ದರೂ ನಮ್ಮ ಸವಿನುಡಿಯೇ ನಮ್ಮ ಜೊತೆಗಾತಿ. ಸ್ನೇಹವನ್ನು ಬೆಳೆಸಲು ಅದು ನಿಜವಾದ ಆಪ್ತಮಿತ್ರನಂತೆ ಸಹಕರಿಸುತ್ತದೆ. ಮಾತು ಮಾಯಾದೀಪ. ಇಲ್ಲಿ ನಾವು ಅಲ್ಲಾ ಉದ್ದೀನ್ ಅದ್ಭುತದೀಪ ಎಂಬ ಕಥೆಯನ್ನು ನೆನಪಿಸಿಕೊಳ್ಳಬೇಕು.

ಕಥೆಯಲ್ಲಿ ಮಾಯಾದೀಪವನ್ನು ಉಜ್ಜಿದರೆ ಭೂತವು ಪ್ರತ್ಯಕ್ಷವಾಗಿ ಹೇಳಿದ ಕೆಲಸವನ್ನೆಲ್ಲ ಮಾಡಿಕೊಡುತ್ತದೆ. ಹಾಗೆ ಒಳ್ಳೆಯ ನುಡಿ ನಮಗೆ ಇಷ್ಟವಾದ ಕೆಲಸಗಳನ್ನೆಲ್ಲ ಮಾಡಿಕೊಡುತ್ತದೆ. ಆದರೆ ಮಾತು ಕೆಟ್ಟದ್ದಾದರೆ, ಅದೇ ಶಾಪವಾಗಿ ಪರಿಣಮಿಸಿ ನಮ್ಮನ್ನೇ ನಾಶಪಡಿಸುತ್ತದೆ. ಇದರಿಂದ ನಾವು ಮಾತಿನ ಶಕ್ತಿಯನ್ನು ಅರಿತುಕೊಳ್ಳಬೇಕು. ಅದು ಪೂರಕವೂ ಆಗಬಲ್ಲದು, ಮಾರಕವೂ ಆಗಬಲ್ಲದು. ಉಕ್ತಿಯಲ್ಲಿ ಶಕ್ತಿಯಿದೆ ಎಂಬುದು ಇದರ ನೀತಿ. ಮಾತಿನ ಶಕ್ತಿಯನ್ನರಿತು ಅದನ್ನು ಬಳಸಬಲ್ಲವರೇ ಜಾಣರು.

ವಸುಧೈವ ಕುಟುಂಬಕಮ್, ಇಡೀ ಜಗತ್ತೇ ನನ್ನ ಕುಟುಂಬ, ಸಮಸ್ತ ಮಾನವರನ್ನೂ ಪ್ರೀತಿಸುತ್ತೇನೆ ಎಂಬ ಉನ್ನತ ಆದರ್ಶ ಶ್ರೇಷ್ಠ. ಆದರೆ ಅದರ ಅನುಷ್ಠಾನ ಮನೆಯಿಂದ ಆರಂಭಿಸಬೇಕು. ನೆರೆಹೊರೆಯವರಿಗೆ ಸ್ನೇಹವನ್ನು ವಿಸ್ತರಿಸಬೇಕು. ತನ್ನ ಮನೆಯ ಜನರನ್ನೇ ಪ್ರೀತಿಸದವನು ಜಗತ್ತನ್ನು ಹೇಗೆ ಪ್ರೀತಿಸಿಯಾನು? ಇದನ್ನು ಮುದ್ದುರಾಮ ಹೇಳಿದ್ದಾನೆ –

ನಿನ್ನ ನೆರೆಹೊರೆಯವರ ನಗುತ ಮಾತಾಡಿಸದೆ
ಎಂದು ಬೆರೆಯುವೆ ಮುದದಿ ಲೋಕಜನರೊಡನೆ?
ಮನೆಯಂಗಳವ ಚೆಂದ ಗುಡಿಸುವುದ ಕಲಿ ಮೊದಲು
ಪ್ರೀತಿಸೋ ನಿನ್ನವರ ಮುದ್ದುರಾಮ॥

ನಿನ್ನ ನೆರೆಹೊರೆಯವರೊಡನೆ ನಗುತ್ತಾ ನೀನು ಮಾತನಾಡದಿದ್ದರೆ ಪ್ರಪಂಚದ ಜನರೆಲ್ಲರೊಡನೆ ಸಂತೋಷದಿಂದ ಬೆರೆಯುವುದು ಹೇಗೆ ಶಕ್ಯವಾದೀತು? ತನ್ನ ಮನೆಯ ಅಂಗಳವನ್ನೇ ಗುಡಿಸಿ ಶುಚಿಯಾಗಿ ಇಟ್ಟುಕೊಳ್ಳದವನು ಜಗತ್ತನ್ನು ಹೇಗೆ ಶುದ್ಧಪಡಿಸಲು ಸಾಧ್ಯ? ಮೊದಲು ಮನೆಯ ಅಂಗಳವನ್ನು ಗುಡಿಸಿ ಚಂದವಾಗಿ ಇಟ್ಟುಕೊಳ್ಳಲು ಕಲಿ. ನಿನ್ನವರನ್ನು ಮೊದಲು ಪ್ರೀತಿಸು. ಅದು ಬೆಳೆದು ವಿಶ್ವ ಪ್ರೀತಿಯಾಗಲಿ, ಪರಮಾತ್ಮ ಪ್ರೀತಿಯಾಗಲಿ. ಆರಂಭ ನಗುಮುಖದ ಮಾತಿನಿಂದ ಆಗಲಿ. ಅದು ಪ್ರಪಂಚ ಪ್ರೀತಿಗೆ ನಾಂದಿ. ಅದರಿಂದ ನುಡಿನಡೆಗಳ ಐಕ್ಯ ಸಾಧ್ಯವಾಗಲಿ ಎಂದು ಮುದ್ದುರಾಮನು ನಮ್ಮೆಲ್ಲರಿಗೂ ಮಾರ್ಗದರ್ಶನವನ್ನು ಮಾಡುತ್ತಿದ್ದಾನೆ.

ಒಳ ಮೀಸಲಾತಿ; ನ್ಯಾ.ನಾಗಮೋಹನ್‌ದಾಸ್ ಶಿಫಾರಸ್ಸು ಖಂಡಿಸಿ ನಾಳೆ ಮೈಸೂರಲ್ಲಿ ಬಲಗೈ ಸಮುದಾಯದ ಭಾರಿ ಪ್ರತಿಭಟನೆ

ಮೈಸೂರು, ಆ.12(ಎಂಟಿವೈ)– ಒಳ ಮೀಸಲಾತಿಗೆ ಸಂಬಂಧಿಸಿದಂತೆ ನ್ಯಾ.ನಾಗಮೋಹನ್‌ದಾಸ್ ಅವರು ಸಲ್ಲಿಸಿರುವ ಸಮೀಕ್ಷೆ ಹಾಗೂ ವರದಿ ಅವೈಜ್ಞಾನಿಕವಾಗಿದ್ದು, ಈ ವರದಿಯನ್ನು ತಿರಸ್ಕರಿಸುವಂತೆ ಆಗ್ರಹಿಸಿ ಪರಿಶಿಷ್ಟ ಜಾತಿ ಬಲಗೈ ಹೋರಾಟ ಸಮಿತಿ ವತಿಯಿಂದ ಆ.14ರಂದು ಮೈಸೂರಿನಲ್ಲಿ ಭಾರಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಉರಿಲಿಂಗಿಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾ.ನಾಗಮೋಹನ್‌ದಾಸ್ ನೀಡಿರುವ ವರದಿಯನ್ನು ಜಾರಿಗೊಳಿಸದಂತೆ ಆಗ್ರಹಿಸಿ ಆ.14ರಂದು ಬೆಳಗ್ಗೆ 10.30ಕ್ಕೆ ಪುರಭವನದಿಂದ ಜಿಲ್ಲಾಧಿಕಾರಿ ಕಚೇರಿವರೆಗೂ ಬೃಹತ್ ಮೆರವಣಿಗೆ ನಡೆಸಲಾಗುವುದು. ಈ ಮೆರವಣಿಗೆಯಲ್ಲಿ ಬಲಗೈ ಸಮುದಾಯದ ರಾಜಕಾರಣಿಗಳು, ಸರ್ಕಾರಿ ನೌಕರರು, ರಾಜಕೀಯ, ಶೈಕ್ಷಣಿಕ ವಲಯದವರು, ಸಮುದಾಯದ ಮುಖಂಡರು, ಭಾಗವಹಿಸಲಿದ್ದಾರೆ.



ಜ್ಞಾನಪ್ರಕಾಶ್ ಸ್ವಾಮೀಜಿ

ನ್ಯಾನಾಗ ಮೋಹನ್‌ದಾಸ್ ಅವರ ವರದಿ ಬಲಗೈ ಸಮುದಾಯಕ್ಕೆ ಮರಣ ಶಾಸನದಂತಿದೆ. 50 ಲಕ್ಷ ಜನಸಂಖ್ಯೆ ಇದ್ದ ಸಮುದಾಯವನ್ನು, 20 ಲಕ್ಷಕ್ಕೆ ಇಳಿಸಿದ್ದಾರೆ. ಇದರ ಬಗ್ಗೆ ನ್ಯಾ.ನಾಗಮೋಹನ್‌ದಾಸ್ ಅವಲೋಕನ ಮಾಡಿಕೊಳ್ಳಬೇಕು ಎಂದರು.

ಒಳ ಮೀಸಲಾತಿಯಲ್ಲಿ ಮಾದಿಗ ಸಮುದಾಯಕ್ಕೆ ಶೇ.6ರಷ್ಟು ಒಳ ಮೀಸಲಾತಿ ನೀಡಲಾಗಿದೆ ಎಂದು ಹೇಳಲಾಗಿದೆ. ಮಾದಿಗ ಸಮುದಾಯದವರು ಒಳ ಮೀಸಲಾತಿ ಪಡೆಯಲಿ. ಆದರೆ, ಬಲಗೈ ಸಮುದಾಯಕ್ಕೆ ಭಾರೀ ಅನ್ಯಾಯವಾಗಲಿದೆ. ಇದನ್ನು ವಿರೋಧಿಸಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ರಾಜ್ಯದಲ್ಲಿ ಎಡ ಹಾಗೂ ಬಲಗೈ ಸಮುದಾಯದ 1.47 ಕೋಟಿ ಜನಸಂಖ್ಯೆ ಇದೆ. ಆದರೆ, 1.16 ಕೋಟಿ ಜನರ ಸಮೀಕ್ಷೆ ಆಗಿದೆ. ಇನ್ನುಳಿದಂತೆ ಸಮೀಕ್ಷೆ ಆಗಿಲ್ಲ. ಹೀಗಾದರೆ ಸಮಿತಿ ವರದಿಯಲ್ಲಿ ಹೇಗೆ ಸಮಾನತೆ ವರದಿ ತಯಾರಿಸಲು ಸಾಧ್ಯ. ಗಣತಿದಾರರಿಗೆ ಮೊಬೈಲ್, ಟ್ಯಾಪ್ ನೀಡಿಲ್ಲ. ಅಲ್ಲದೆ, ಸರಿಯಾಗಿ ಸಮೀಕ್ಷೆ ಮಾಡಿಲ್ಲ ಎಂದು ವಿಷಾದಿಸಿದರು. ರಾಜ್ಯ ಸರ್ಕಾರ ದಲಿತ ಸಮುದಾಯಕ್ಕೆ ಒಳ ಮೀಸಲಾತಿ ನೀಡಲು ಸಮಿತಿ ರಚನೆ ಮಾಡಿ, ನಿಮ್ಮನ್ನು (ನ್ಯಾ.ನಾಗಮೋಹನ್‌ದಾಸ್) ಅಧ್ಯಕ್ಷರನ್ನಾಗಿ ಮಾಡಿದೆ. ನೀವು ಸಮೀಕ್ಷೆ ವರದಿಯನ್ನಷ್ಟೇ ರಾಜ್ಯ ಸರ್ಕಾರ ಕೊಡಬೇಕು. ಆದರೆ, ಮೀಸಲಾತಿ ಹಂಚಿದ್ದೇನೆ ಎಂದು ಹೇಳಲು ನೀವು ಯಾರು? ಎಂದು ಪ್ರಶ್ನಿಸಿದರು. ಗೋಷ್ಠಿಯಲ್ಲಿ ಮುಖಂಡರಾದ ಮಲೆಯೂರು ಸೋಮಯ್ಯ, ಭಾಸ್ಕರ್, ಸಿದ್ದಸ್ವಾಮಿ ಮತ್ತಿತರರು ಇದ್ದರು.

ಆ.15, ಸ್ವಾತಂತ್ರ್ಯ ದಿನಾಚರಣೆ



ಮೈಸೂರು,ಆ.12–ಮೈಸೂರಿನ ನಿವೇದಿತಾನಗರದ ದಿ ಅಕ್ಷಿ ಶಾಲೆಯಲ್ಲಿ ರೋಟರಿ ಆಗಸ್ಟ್ 15ರಂದು 79ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಗುವುದು.

ಮುಖ್ಯ ಅತಿಥಿಗಳಾಗಿ ಕ್ಯಾಪ್ಟನ್ ಡಾ.ವಿನಯ್ ವಿಠ್ಠಲ್ ಬೆಳಗ್ಗೆ 8.30 ಗಂಟೆಗೆ ಧ್ವಜಾರೋಹಣ ನೆರವೇರಿಸಲಿದ್ದಾರೆ. ಶಾಲಾ ವಿದ್ಯಾರ್ಥಿಗಳಿಂದ ದೇಶಭಕ್ತಿಗೀತೆಗಳು, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಚುಟುಕು ಭಾಷಣಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪಿಎಫ್ ಬಾಕಿ ಪಾವತಿ ವಿಳಂಬ: ಫಾಲ್ಕನ್ ಟೈರ್ಸ್ ಕಾರ್ಮಿಕರಿಂದ ಅನಿರ್ದಿಷ್ಟಾವಧಿ ಧರಣಿ ಎಚ್ಚರಿಕೆ

ಮೈಸೂರು, ಆ.12(ಬಿಎಲ್‌ಯು)– ಮೈಸೂರಿನ ಫಾಲ್ಕನ್ ಟೈರ್ಸ್ ಕಾರ್ಖಾನೆಯನ್ನು ಟೆಕ್ಸ್‌ಟೈಲ್ಸ್ ಕಂಪನಿಯೊಂದು 122 ಕೋಟಿಗೆ ಖರೀದಿ ಮಾಡಿದ್ದು, ಕಾರ್ಮಿಕರಿಗೆ ಇನ್ನೂ ಪಿಎಫ್ (ಭವಿಷ್ಯ ನಿಧಿ) ಬಾಕಿ ಪಾವತಿಯಾಗಿಲ್ಲ. ಶೀಘ್ರವೇ ಪಿಎಫ್ ಬಾಕಿ ನೀಡದಿದ್ದರೆ ಮೈಸೂರಿನ ಗಾಯತ್ರಿಪುರಂನ ಪಿಎಫ್ ಆಫೀಸ್ ಮುಂದೆ ಅನಿರ್ದಿಷ್ಟಾವಧಿ ಧರಣಿ ಕೈಗೊಳ್ಳಲು ಕಾರ್ಮಿಕರು ನಿರ್ಧರಿಸಿದ್ದಾರೆ.

ಈ ಸಂಬಂಧ ಫಾಲ್ಕನ್ ಟೈರ್ಸ್ ಯೂನಿಯನ್‌ನ ಕಾರ್ಯಕಾರಿ ಸಮಿತಿ ಸದಸ್ಯ ಮಂಜುರಾಜೇ ಅರಸ್, ಪಿಎಫ್ ಕಚೇರಿಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

'ಮೈಸೂರು ಮಿತ್ರ'ನಿಗೆ ಈ ಬಗ್ಗೆ ಮಾಹಿತಿ ನೀಡಿದ ಮಂಜುರಾಜೇ ಅರಸ್, ಫಾಲ್ಕನ್ ಟೈರ್ಸ್ ಕಾರ್ಖಾನೆಯನ್ನು ಟೆಂಡರ್ ಮೂಲಕ ಹರಾಜು ಹಾಕಿ ಬಂದ ಹಣದಲ್ಲಿ ಬ್ಯಾಂಕ್‌ಗಳ ಸಾಲ, ಕಾರ್ಮಿಕರಿಗೆ ಪಿಎಫ್ ಹಾಗೂ ಗ್ರಾಚ್ಯುಟಿ ಹಣ ನೀಡುವಂತೆ ಬೆಂಗಳೂರಿನ ಎನ್‌ಸಿಎಲ್‌ಟಿ ನ್ಯಾಯಾಲಯ ಆದೇಶ ನೀಡಿ ಶಿವದತ್ತೆ ಬನ್ನಂಜೆ ಅವರನ್ನು ಲಿಕ್ವಿಡೇಟರ್ ಆಗಿ ನೇಮಕ ಮಾಡಿತ್ತು.

ಇ–ಹರಾಜಿನಲ್ಲಿ ಟೆಕ್ಸ್‌ಟೈಲ್ಸ್ ಕಂಪನಿಯೊಂದು ಫಾಲ್ಕನ್ ಟೈರ್ಸ್ ಅನ್ನು 122,67,30,411 ರೂ.ಗೆ ಖರೀದಿ ಮಾಡಿದೆ. ಈ ಹಣದಲ್ಲಿ 32 ಕೋಟಿಯನ್ನು ಕಾರ್ಮಿಕರ ಪಿಎಫ್ ಬಾಕಿಗೆ ಮೀಸಲಿಟ್ಟು, ಉಳಿದ ಹಣವನ್ನು ಬ್ಯಾಂಕ್‌ಗಳ ಸಾಲಕ್ಕೆ ಪಾವತಿ ಮಾಡಲು ಲಿಕ್ವಿಡೇಟರ್ ಹಂಚಿಕೆ ಮಾಡಿದ್ದರು.

ಪಿಎಫ್ ಅಧಿಕಾರಿಗಳ ವಿಳಂಬ ಧೋರಣೆಗೆ ಖಂಡನೆ



ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಫಾಲ್ಕನ್ ಟೈರ್ಸ್ ಕಾರ್ಖಾನೆ ನೋಟ.

ಕಾರ್ಮಿಕರಿಗೆ ಗ್ರಾಚ್ಯುಟಿ ಹಣ ಪಾವತಿ ಆಗಿದೆ. ಜೊತೆಗೆ 2014 ರಿಂದ 2016 ರವರೆಗಿನ ಪಿಎಫ್ ಹಣವನ್ನೂ ಪಾವತಿ ಮಾಡಲಾಗಿದೆ. ಆದರೆ 2016 ರಿಂದ 2019 ರವರೆಗಿನ ಪಿಎಫ್ ಬಾಕಿ ಮಾತ್ರ ಪಾವತಿ ಆಗಿಲ್ಲ. ಇದರ ಬಾಕಿ ಸುಮಾರು 19 ಕೋಟಿಯನ್ನು ಈಗಾಗಲೇ ಲಿಕ್ವಿಡೇಟರ್ ಶಿವದತ್ತೆ ಬನ್ನಂಜೆ ಅವರು ಪಿಎಫ್ ಕಚೇರಿಗೆ ತುಂಬಿದ್ದಾರೆ. ಆದರೆ ನಮಗೆ ನೀಡಬೇಕಿರುವ ಬಾಕಿ ಪಾವತಿ ಮಾಡಲು ಪಿಎಫ್ ಕಚೇರಿಯ ಅಧಿಕಾರಿಗಳು ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಮಂಜುರಾಜೇ ಅರಸ್ ಆರೋಪಿಸಿದ್ದಾರೆ.

ನಮಗೆ ನೀಡಬೇಕಿರುವ ಬಾಕಿಯನ್ನು ಕಾರ್ಖಾನೆ ಖರೀದಿ ಮಾಡಿದ ಟೆಕ್ಸ್ ಟೈಲ್ಸ್ ಕಂಪನಿ ಪಾವತಿ ಮಾಡಿದೆ. ಲಿಕ್ವಿಡೇಟರ್ ಶಿವದತ್ತೆ ಬನ್ನಂಜೆ ಅವರು ಕಾರ್ಮಿಕರ ಪಿಎಫ್ ಬಾಕಿ ಹಣವನ್ನು ಪಿಎಫ್ ಕಚೇರಿಗೆ ತುಂಬಿದ್ದಾರೆ. ನಮ್ಮ ಪಿಎಫ್ ಬಾಕಿ ಪಡೆಯಲು ಇವರಿಂದ ಯಾವುದೇ ತಕರಾರು ಇಲ್ಲ.

> “ಕಳೆದ ವಾರ ಯೂನಿಯನ್ ಸಭೆ ನಡೆಯಿತು. ಪಿಎಫ್ ಬಾಕಿ ಪಾವತಿಸಲು ತಾವು ಮಧ್ಯೆ ಪ್ರವೇಶಿಸುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ ರೆಡ್ಡಿ ಹಾಗೂ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ನಿರ್ಧರಿಸಿದ್ದೇವೆ. ಯಾರಿಂದಲೂ ನಮ್ಮ ಸಮಸ್ಯೆ ಪರಿಹಾರವಾಗದಿದ್ದರೆ ಗಾಯತ್ರಿಪುರಂನಲ್ಲಿರುವ ಪಿಎಫ್ ಕಚೇರಿ ಮುಂದೆ 400ಕ್ಕೂ ಹೆಚ್ಚು ಕಾರ್ಮಿಕರಿಂದ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತೇವೆ.
>
> –ಮಂಜುರಾಜೇ ಅರಸ್.



ಆದರೆ ಪಿಎಫ್ ಕಚೇರಿಯ ಅಧಿಕಾರಿಗಳು ಮಾತ್ರ ಬಾಕಿ ಪಾವತಿ ಮಾಡುತ್ತಿಲ್ಲ ಎಂದು ಆಪಾದಿಸಿದ್ದಾರೆ.

ಈ ಸಂಬಂಧ ಹಲವು ಬಾರಿ ಪಿಎಫ್ ಕಚೇರಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕಾರ್ಖಾನೆ ಬಾಗಿಲು ಹಾಕಿದ ಸಮಯದಿಂದ ಕಾರ್ಮಿಕರು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಈಗ ಪಿಎಫ್ ಬಾಕಿ ನೀಡಿದರೆ ನಮ್ಮ ಸಮಸ್ಯೆ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗುತ್ತದೆ. ಈ ವಿಚಾರವನ್ನು ಮನದಟ್ಟು ಮಾಡಿದರೂ ಪಿಎಫ್ ಕಚೇರಿ ಅಧಿಕಾರಿಗಳು ನಮ್ಮ ಮನವಿಗೆ ಸ್ಪಂದಿಸುತ್ತಿಲ್ಲ ಎಂದು ದೂರಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಭೂ ಕುಸಿತವಾದ ಮೈಸೂರಿನ ಚಾಮುಂಡಿಬೆಟ್ಟದ ನಂದಿ ಮಾರ್ಗದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ ನಡೆಯುತ್ತಿರುವುದು. ದಸರಾ ವೇಳೆಗೆ ಇದನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

ಅಧಿಕಾರದಲ್ಲಿದ್ದವರೆಲ್ಲರ ಮಂತ್ರ ಅಭಿವೃದ್ಧಿ... ಅಭಿವೃದ್ಧಿ... ಅಭಿವೃದ್ಧಿ...

ಚಾಮುಂಡಿಬೆಟ್ಟದ ನಂದಿ ಮಾರ್ಗದಲ್ಲಿ ಭೂ ಕುಸಿತವಾಗಿ 6 ವರ್ಷವಾದರೂ ಆಮೆಗತಿಯಲ್ಲಿ ಸಾಗಿದೆ ಕಾಮಗಾರಿ

ದಸರಾ ವೇಳೆಗೆ ಕಾಮಗಾರಿ ಪೂರ್ಣಗೊಳಿಸುವ ವಿಶ್ವಾಸ

- ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ತಜ್ಞರ ಸಲಹೆಯಂತೆ ನಿರ್ಮಾಣ
- ಕಾಮಗಾರಿ ವಿಳಂಬಕ್ಕೆ ನಾನಾ ಕಾರಣ ನೀಡುತ್ತಾ ಬರುತ್ತಿರುವ ಅಧಿಕಾರಿಗಳು
- ಭಾರಿ ಮಳೆಯಾದರೆ ಈ ದಸರಾಗೂ ಕಾಮಗಾರಿ ಪೂರ್ಣಗೊಳ್ಳುವುದು ಡೌಟ್

ಮೈಸೂರು,ಆ.12(ಬಿಎಲ್‌ಯು)– ಚಾಮುಂಡಿಬೆಟ್ಟದ ನಂದಿ ಮಾರ್ಗದಲ್ಲಿ ಭೂ ಕುಸಿತವಾಗಿ ಆರು ವರ್ಷ ಕಳೆದರೂ, ಈ ರಸ್ತೆ ಪುನರ್‌ನಿರ್ಮಾಣ ಕಾಮಗಾರಿ ಇನ್ನು ಪೂರ್ಣಗೊಂಡಿಲ್ಲ. ಈ ಮಧ್ಯೆ ಪ್ರಸಕ್ತ ದಸರಾ ವೇಳೆಗೆ ಕಾಮಗಾರಿ ಪೂರ್ಣಗೊಳಿಸಿ, ರಸ್ತೆ ಸಂಚಾರಕ್ಕೆ ಮುಕ್ತಗೊಳಿಸಲು ಭರದ ಕಾಮಗಾರಿ ನಡೆಯುತ್ತಿದೆ.

ನಂದಿ ಮಾರ್ಗದ ರಸ್ತೆ ನಿರ್ಮಾಣ ಕಾರ್ಯ ಶೇ.80ರಷ್ಟು ಪೂರ್ಣಗೊಂಡಿದ್ದು, ಶೇ.20ರಷ್ಟು ಕಾಮಗಾರಿ ಮಾತ್ರ ಬಾಕಿ ಇದೆ. ಇದನ್ನು ಸೆಪ್ಟೆಂಬರ್ 22ರಿಂದ ಅಕ್ಟೋಬರ್ 2ರವರೆಗೆ ನಡೆಯುವ ದಸರಾ ಮಹೋತ್ಸವದ ಒಳಗೆ ಪೂರ್ಣಗೊಳಿಸಿ ನಂದಿ ಮಾರ್ಗದ ರಸ್ತೆಯನ್ನು ಸಾರ್ವಜನಿಕರಿಗೆ ಮುಕ್ತಗೊಳಿಸುವ ಗುರಿ ಹೊಂದಲಾಗಿದೆ ಎಂದು ಲೋಕೋಪಯೋಗಿ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ಪದ್ಮನಾಭ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಚಾಮುಂಡಿಬೆಟ್ಟದ ನಂದಿ ಮಾರ್ಗದ ವ್ಯೂ ಪಾಯಿಂಟ್ ಹಾಗೂ ನಂದಿ ಪ್ರತಿಮೆ ನಡುವಿನ ರಸ್ತೆಯಲ್ಲಿ 2019ರಲ್ಲಿ ಮೂರು ಕಡೆ ಭೂ ಕುಸಿತಗಳಾಯಿತು. ಇದೇ ಸ್ಥಳದ ಸನಿಹದಲ್ಲಿ ಅಕ್ಟೋಬರ್ 20, 2021 ರಂದು ಮತ್ತೆ ಭಾರಿ ಭೂ ಕುಸಿತವಾಯಿತು. ಅಪಾಯ ಅರಿತ ಲೋಕೋಪಯೋಗಿ ಇಲಾಖೆಯವರು ನಂದಿ ಮಾರ್ಗವನ್ನು ಕೊನೆಗೆ ಸಂಪೂರ್ಣ ಮುಚ್ಚಿದರು.

ನಂದಿ ಮಾರ್ಗ ಮುಚ್ಚಿದ ನಂತರ ಸರಣಿ ಭೂ ಕುಸಿತ ಆರಂಭವಾಯಿತು. ಅಕ್ಟೋಬರ್ 31, 2021ರಂದು ರಸ್ತೆ ಮೇಲೆ ಮತ್ತೆ ಗಮನಾರ್ಹ ಭೂ ಕುಸಿತವಾಯಿತು. ಮೊದಲು ಭೂ ಕುಸಿತವಾದ ಸ್ಥಳದ 10 ಮೀಟರ್ ದೂರದಲ್ಲಿ ಭಾರೀ ಮಳೆಯಿಂದಾಗಿ ನವೆಂಬರ್ 4, 2021 ರಂದು ಮತ್ತೊಂದು ಭೂ ಕುಸಿತವಾಯಿತು.

ಈ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆಯವರು ತಜ್ಞರ ಸಲಹೆ ಪಡೆದು ಆಧುನಿಕ ತಂತ್ರಜ್ಞಾನ ಬಳಸಿಕೊಂಡು ರಸ್ತೆ ನಿರ್ಮಿಸಬೇಕೆಂದು ನಿರ್ಧರಿಸಿದರು. ಲೋಕೋಪಯೋಗಿ ಇಲಾಖೆಯವರ ಮನವಿಯಂತೆ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನ ತಜ್ಞರ ತಂಡ ಸ್ಥಳ ಪರಿಶೀಲನೆ ನಡೆಸಿತು. ಆಧುನಿಕ ತಂತ್ರಜ್ಞಾನದಲ್ಲಿ ತಡೆಗೋಡೆ ಸೇರಿದಂತೆ ರಸ್ತೆ ನಿರ್ಮಾಣ ಮಾಡಬೇಕು. ಈಗಾಗಲೇ ಈ ಮಾರ್ಗದಲ್ಲಿ ಸಾಮಾನ್ಯ ರೀತಿಯಲ್ಲಿ ರಸ್ತೆ ನಿರ್ಮಾಣ ಮಾಡಿದಂತೆ ಕಾಮಗಾರಿ ಕೈಗೊಂಡರೆ ಮತ್ತೆ ಭೂ ಕುಸಿತವಾಗುತ್ತದೆ ಎಂದು ಎಚ್ಚರಿಸಿ ವರದಿ ನೀಡಿದ್ದರು.

ಇಲಾಖೆ ಅಧಿಕಾರಿಗಳು ತಜ್ಞರ ವರದಿ ಆಧರಿಸಿ ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಸಿದರು. ತರುವಾಯ ಸರ್ಕಾರದ ನಿರ್ದೇಶನದ ಮೇರೆಗೆ ಟೆಂಡರ್ ಸೇರಿದಂತೆ ನಿರ್ಮಾಣ ಕಾಮಗಾರಿಯ ಪ್ರಕ್ರಿಯೆ 2022–23ರಲ್ಲಿ ಆರಂಭವಾಯಿತು.

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ತಜ್ಞರ ಸಲಹೆಯಂತೆ ರೈನ್ ಫೋರ್ಸ್ಡ್ ಅರ್ಥ್ ರಿಟೈನ್ ಸ್ಟ್ರಕ್ಚರ್ ವಿಧಾನದಲ್ಲಿ ರಸ್ತೆ ನಿರ್ಮಾಣ ಮಾಡಲು ಟೆಂಡರ್ ಕರೆಯಲಾಯಿತು. ನಂತರ 9.75 ಕೋಟಿ ವೆಚ್ಚದಲ್ಲಿ ಭೂ ಕುಸಿತ ಪ್ರದೇಶದಲ್ಲಿ ಆಧುನಿಕ ತಂತ್ರಜ್ಞಾನ ವಿಧಾನದಲ್ಲಿ ತಡೆಗೋಡೆ ಸೇರಿದಂತೆ ರಸ್ತೆ ನಿರ್ಮಾಣ ಕಾಮಗಾರಿ ಆರಂಭಿಸಲಾಯಿತು.

ಈಗಾಗಲೇ ಭೂ ಕುಸಿತವಾಗಿರುವ ಸ್ಥಳದಲ್ಲಿ ರೈನ್ ಫೋರ್ಸ್ಡ್ ಅರ್ಥ್ ರಿಟೈನ್ ಸ್ಟ್ರಕ್ಚರ್ ಮಾದರಿಯಲ್ಲಿ ರಸ್ತೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುವಾಗ ಮತ್ತೆ ಭೂ ಕುಸಿತವಾಯಿತು. ಇದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳನ್ನು ಆತಂಕ ಉಂಟು ಮಾಡಿತು.

ತರುವಾಯ ಮತ್ತೆ ಭೂ ಕುಸಿತವಾಗಿರುವ ಸ್ಥಳದಲ್ಲಿ ತಡೆ ಗೋಡೆ ನಿರ್ಮಾಣ ಸೇರಿದಂತೆ ರಸ್ತೆ ನಿರ್ಮಿಸಲು ಎರಡನೇ ಹಂತದಲ್ಲಿ 4.90 ಕೋಟಿಯಲ್ಲಿ ಟೆಂಡರ್ ನೀಡಲಾಗಿದ್ದು, ನಿರ್ಮಾಣ ಕಾಮಗಾರಿ ಭರದಿಂದ ಸಾಗಿದೆ. ಈ ಬಾರಿಯ ದಸರಾ ವೇಳೆಗೆ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ರಸ್ತೆ ಸಂಚಾರಕ್ಕೆ ಮುಕ್ತಗೊಳಿಸಲು ಚುರುಕಿನ ಕಾಮಗಾರಿ ನಡೆಯುತ್ತಿದೆ. ಆದರೆ ಎಡೆಬಿಡದೆ ಭಾರೀ ಮಳೆಯಾದರೆ ದಸರಾ ವೇಳೆಗೆ ಕಾಮಗಾರಿ ಪೂರ್ಣಗೊಳಿಸುವುದು ಅನುಮಾನವಾಗಿದೆ.

ನಂದಿ ಮಾರ್ಗದ ಕಾಮಗಾರಿಗೆ ಅರಣ್ಯ ಇಲಾಖೆ ಹಲವು ಷರತ್ತು

ಚಾಮುಂಡಿಬೆಟ್ಟದ ನಂದಿ ಮಾರ್ಗದಲ್ಲಿ ಭೂ ಕುಸಿತವಾಗಿರುವ ಸ್ಥಳದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಅರಣ್ಯ ಇಲಾಖೆ ಹಲವು ಷರತ್ತುಗಳನ್ನು ವಿಧಿಸಿದೆ. ಚಾಮುಂಡಿಬೆಟ್ಟ ವನ್ಯಜೀವಿ ವಲಯವಾಗಿರುವ ಹಿನ್ನೆಲೆಯಲ್ಲಿ ವನ್ಯಜೀವಿಗಳಿಗೆ ಯಾವುದೇ ರೀತಿಯಲ್ಲೂ ತೊಂದರೆ ಆಗದಂತೆ ಕಾಮಗಾರಿ ನಡೆಸುವಂತೆ ಅರಣ್ಯ ಇಲಾಖೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ತಾಕೀತು ಮಾಡಿದೆ. ಬೆಳಿಗ್ಗೆ 6.30ರಿಂದ ಸಂಜೆ 6.30 ಗಂಟೆ ಒಳಗೆ ಮಾತ್ರ ರಸ್ತೆ ಕಾಮಗಾರಿ ಮಾಡಬೇಕು. ಈ ಸಮಯ ಮೀರಿದ ಮೇಲೆ ಎಂತಹ ತುರ್ತು ಕಾಮಗಾರಿ ಇದ್ದರೂ ಅದನ್ನು ಮಾಡಬಾರದು ಎಂದು ಅರಣ್ಯ ಇಲಾಖೆ ಎಚ್ಚರಿಕೆ ನೀಡಿದೆ. ಕಾಮಗಾರಿ ಮಾತ್ರವಲ್ಲದೆ ಸಂಜೆ 6.30 ಗಂಟೆ ನಂತರ ಯಂತ್ರೋಪಕರಣಗಳ ಬಳಕೆಯನ್ನೂ ನಿಷೇಧಿಸಲಾಗಿದೆ. ಇದರಿಂದ ಕಾಮಗಾರಿ ವಿಳಂಬವಾಗುತ್ತಿದೆ ಎಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಒಟ್ಟು 634 ಮೀಟರ್ ರಸ್ತೆ ನಿರ್ಮಾಣಕ್ಕೆ 14.65 ಕೋಟಿ ವೆಚ್ಚ

ಚಾಮುಂಡಿಬೆಟ್ಟದ ನಂದಿ ಮಾರ್ಗದ 634 ಮೀಟರ್ ಕಾಮಗಾರಿ ಅಂತಿಮ ಹಂತದಲ್ಲಿದೆ. ಎರಡು ಹಂತದ ಕಾಮಗಾರಿಗೆ 14.65 ಕೋಟಿ ರೂಪಾಯಿಗೆ ಟೆಂಡರ್ ನೀಡಲಾಗಿದೆ. ಮೊದಲ ಹಂತದಲ್ಲಿ 350 ಮೀಟರ್ ಭೂ ಕುಸಿತವಾಗಿದ್ದು, ಇದರಲ್ಲಿ ಈಗಾಗಲೇ ತಡೆ ಗೋಡೆ ಸೇರಿದಂತೆ 310 ಮೀಟರ್ ರಸ್ತೆ ನಿರ್ಮಿಸಲಾಗಿದೆ. ಶೇ.80ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಇನ್ನು ಕೇವಲ 40 ಮೀಟರ್ ಕಾಮಗಾರಿ ಮಾತ್ರ ಬಾಕಿ ಇದೆ. 9.75 ಕೋಟಿಯಲ್ಲಿ ಈಗ ರಸ್ತೆ ನಿರ್ಮಿಸಲಾಗುತ್ತಿದೆ. ಎರಡನೇ ಹಂತದ ಕಾಮಗಾರಿಯಲ್ಲಿ 284 ಮೀಟರ್ ಭೂ ಕುಸಿತವಾಗಿದ್ದು, ಇದರಲ್ಲಿ ಈಗಾಗಲೇ 200 ಮೀಟರ್ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಶೇ.80ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, 84 ಮೀಟರ್ ಕಾಮಗಾರಿ ಪ್ರಗತಿಯಲ್ಲಿದೆ. ಇದನ್ನು 4.90 ಕೋಟಿಗೆ ಟೆಂಡರ್ ನೀಡಲಾಗಿದೆ.

ರೈನ್ ಫೋರ್ಸ್ಡ್ ಅರ್ಥ್ ರಿಟೈನ್ ಸ್ಟ್ರಕ್ಚರ್ ವಿಧಾನದಲ್ಲಿ ಕಾಮಗಾರಿ

ಚಾಮುಂಡಿಬೆಟ್ಟದ ನಂದಿ ಮಾರ್ಗದಲ್ಲಿ ಭೂ ಕುಸಿತವಾಗಿರುವ ಸ್ಥಳದಲ್ಲಿ ರಸ್ತೆ ಕಾಮಗಾರಿ ಪೂರ್ಣಗೊಳಿಸಲು ವಿಳಂಬವಾಗಲು ಕಾರಣವೇನು ಎಂದು ಲೋಕೋಪಯೋಗಿ ಇಲಾಖೆಯವರು ಹಲವು ಕಾರಣಗಳನ್ನು ನೀಡಿದ್ದಾರೆ. ಇಂತಿಷ್ಟೆ ಸಮಯದಲ್ಲಿ ಕಾಮಗಾರಿ ನಡೆಸಬೇಕು ಎಂದು ಅರಣ್ಯ ಇಲಾಖೆಯವರು ತಾಕೀತು ಮಾಡಿರುವುದರ ಜೊತೆಗೆ ರೈನ್ ಫೋರ್ಸ್ಡ್ ಅರ್ಥ್ ರಿಟೈನ್ ಸ್ಟ್ರಕ್ಚರ್ ವಿಧಾನದಲ್ಲಿ ಕಾಮಗಾರಿ ಮಾಡಲು ಸಮಯ ಹಿಡಿಯುತ್ತದೆ ಎಂದು ತಿಳಿಸಿದ್ದಾರೆ.

ರಿಟೈನಿಂಗ್ ವಾಲ್‌ಗಳನ್ನು ನಿರ್ಮಾಣ ಮಾಡಲು ಸಮಯ ಹಿಡಿಯುತ್ತಿದೆ. 10 ಅಡಿ ರಿಟೈನಿಂಗ್ ವಾಲ್ ಮಾಡಿದ ಮೇಲೆ 28 ದಿನಗಳ ಕಾಲ ಚೆನ್ನಾಗಿ ಕ್ಯೂರಿಂಗ್ ಮಾಡಬೇಕು. ತರುವಾಯ ಅದು ಶಕ್ತಿಯುತವಾಗಿದೆ ಎಂದು ಖಾತರಿಯಾದ ನಂತರ 10 ಅಡಿಯ ಮತ್ತೊಂದು ರಿಟೈನಿಂಗ್ ವಾಲ್ ನಿರ್ಮಿಸಬೇಕು. 10 ಅಡಿಗೆ ಒಂದಾದ ಮೇಲೆ ಒಂದರಂತೆ ರಿಟೈನಿಂಗ್ ವಾಲ್ ನಿರ್ಮಿಸಬೇಕಾಗಿರುವ ಕಾರಣ ಸಮಯ ಹೆಚ್ಚು ಬೇಕಾಗಿದೆ. ಇದರಿಂದ ಕಾಮಗಾರಿ ವಿಳಂಬವಾಗಿದೆ ಎಂದು ರಸ್ತೆ ನಿರ್ಮಾಣದ ಇಂಜನಿಯರಿಂಗ್ ತಂತ್ರಜ್ಞಾನವನ್ನು ವಿವರಿಸಿದ್ದಾರೆ.

ಸಚಿವ ಸ್ಥಾನದಿಂದ ಸತ್ಯ ಹೇಳಿದ ರಾಜಣ್ಣ ವಜಾ

ಭ್ರಷ್ಟಾಚಾರ ಎಸಗಿದ ಭೈರತಿ ಸುರೇಶ್, ಜಮೀರ್, ಸಂತೋಷ್ ಲಾಡ್ ವಿರುದ್ಧ ಕ್ರಮ ಏಕಿಲ್ಲ!

ಮೈಸೂರು ನಗರ ಬಿಜೆಪಿ ವಕ್ತಾರ ಮೋಹನ್ ಪ್ರಶ್ನೆ



ನಗರ ಬಿಜೆಪಿ ವಕ್ತಾರ ಮೋಹನ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಆ.12(ಬಿಎಲ್‌ಯು)–ಭಾರಿ ಭ್ರಷ್ಟಾಚಾರ ಎಸಗಿರುವ ಸಚಿವರಾದ ಭೈರತಿ ಸುರೇಶ್, ಜಮೀರ್ ಅಹಮ್ಮದ್, ಸಂತೋಷ್ ಲಾಡ್ ಅವರಿಂದ ರಾಜೀನಾಮೆ ಪಡೆಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಪರಿಶಿಷ್ಟ ಪಂಗಡದವರನ್ನು ಮಾತ್ರ ಟಾರ್ಗೆಟ್ ಮಾಡಿದ್ದು, ಸತ್ಯ ನುಡಿದ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಲಾಗಿದೆ ಎಂದು ಬಿಜೆಪಿ ನಗರ ವಕ್ತಾರ ಮೋಹನ್ ಆರೋಪಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮುಡಾದಲ್ಲಿ ಹಗರಣ ನಡೆಸಿದ್ದಾರೆ. ಕಾರ್ಮಿಕ ಸಚಿವ ಸಂತೋಷ್ ಲಾಡ್ 500 ರೂ. ಬ್ಯಾಗ್‌ಗೆ 3000 ರೂ. ಬಿಲ್ ಮಾಡಿ ಹಣ ಲೂಟಿ ಮಾಡಿದ್ದಾರೆ, ಜಮೀರ್ ಅಹಮ್ಮದ್ ವಸತಿ ಇಲಾಖೆಯಲ್ಲಿ ಭ್ರಷ್ಟಾಚಾರ ನಡೆಸಿದ್ದಾರೆ. ಸಿದ್ದರಾಮಯ್ಯ ಅವರು ಇವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದು ಆಪಾದಿಸಿದರು.

ಮತಗಳ್ಳತನ ಸೇರಿದಂತೆ ಸರ್ಕಾರದ ಲೋಪದ ಬಗ್ಗೆ ಸತ್ಯ ನುಡಿದ ರಾಜಣ್ಣ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಿದ್ದಾರೆ. ಚಿನ್ನಸ್ವಾಮಿ ಸ್ಟೇಡಿಯಂ ಕಾಲ್ತುಳಿತ ಪ್ರಕರಣದಲ್ಲಿ ಗೃಹ ಸಚಿವರಿಂದ ರಾಜೀನಾಮೆ ಪಡೆಯದೆ ಬೆಂಗಳೂರು ಪೊಲೀಸ್ ಆಯುಕ್ತರಾಗಿದ್ದ ದಯಾನಂದ್ ಅವರನ್ನು ಅಮಾನತು ಮಾಡಿದ್ದಾರೆ. ಈ ಮೂಲಕ ಪರಿಶಿಷ್ಟ ಪಂಗಡದ ಸಮುದಾಯದವರನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಟಾರ್ಗೆಟ್ ಮಾಡಿದೆ. ರಾಜಣ್ಣ ಅವರನ್ನು ವಜಾ ಮಾಡಿದ ಹಿನ್ನೆಲೆಯನ್ನು ರಾಜ್ಯದ ಜನರಿಗೆ ತಿಳಿಸದೆ ರಾಹುಲ್ ಗಾಂಧಿ ಆದೇಶ ನೀಡಿದರು ಎಂದು ಕ್ರಮ ಕೈಗೊಂಡಿದ್ದಾರೆ ಎಂದು ಮೋಹನ್ ವಾಗ್ದಾಳಿ ನಡೆಸಿದರು.

ಹರ್ ಘರ್ ತಿರಂಗ ಅಭಿಯಾನ: 78ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಹರ್ ಘರ್ ತಿರಂಗ ಅಭಿಯಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ್ದಾರೆ. ಈ ಹಿನ್ನೆಲೆ ಮೈಸೂರಿನ ಮನೆ ಮನೆಗಳಲ್ಲಿ ತ್ರಿವರ್ಣ ಧ್ವಜ ಹಾರಿಸುವಂತೆ ಮೋಹನ್ ಮನವಿ ಮಾಡಿದರು.

ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ರಾಜಣ್ಣ ಅವರಿಂದ ವಾಲ್ಮೀಕಿ ಸಮಾಜದ ಮತಗಳನ್ನು ಪಡೆದು ಅಧಿಕಾರಕ್ಕೆ ಬಂದ ರಾಜ್ಯ ಕಾಂಗ್ರೆಸ್ ಸರ್ಕಾರ ಅದೇ ಸಮಾಜದವರನ್ನು ಸಚಿವ ಸ್ಥಾನದಿಂದ ವಜಾ ಮಾಡಿ ಹೀನಾಯವಾಗಿ ನಡೆಸಿಕೊಂಡಿದೆ ಎಂದು ಆರೋಪಿಸಿದರು. ಬಿಜೆಪಿ ಮಾಧ್ಯಮ ಸಂಚಾಲಕ ಮಹೇಶ್‌ರಾಜೇಅರಸ್, ಸಹ ಸಂಚಾಲಕ ಸಂತೋಷ್‌ಕುಮಾರ್ ಗೋಷ್ಠಿಯಲ್ಲಿದ್ದರು.

ವಿಶೇಷ ಅಲಂಕಾರ



ಮೈಸೂರಿನ ಕೃಷ್ಣಮೂರ್ತಿಪುರಂನ ಅಭಿನವ ಮಂತ್ರಾಲಯ, ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಆರಾಧಾನಾ ಮಹೋತ್ಸವ ಹಿನ್ನೆಲೆಯಲ್ಲಿ ಗುರುಗಳಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಮಧ್ಯಾರಾಧನೆ ಜೊತೆಗೆ ಸಾವಿರಾರು ಭಕ್ತರಿಗೆ ತೀರ್ಥ–ಪ್ರಸಾದ ನೀಡಲಾಯಿತು.

ಹಿರಿಯ ನಟ ವಿಷ್ಣುವರ್ಧನ್ ಅವರ ಪುಣ್ಯಭೂಮಿ ಪುನರ್ ನಿರ್ಮಾಣಕ್ಕೆ ಆಗ್ರಹಿಸಿ ವಿಷ್ಣು ಸ್ಮಾರಕದ ಮುಂದೆ ಪ್ರತಿಭಟನೆ

ಸರ್ಕಾರ ನಮ್ಮ ಬೇಡಿಕೆ ಈಡೇರಿಸದಿದ್ದರೆ ಅಭಿಮಾನಿಗಳಿಂದಲೇ ಬೃಹತ್ ದೇವಾಲಯ ನಿರ್ಮಾಣ ಮಾಡುತ್ತೇವೆ

ಮೈಸೂರು, ಆ.12(ಜಿಎ)–ಹಿರಿಯ ನಟ ವಿಷ್ಣುವರ್ಧನ್ ಅವರ ಪುಣ್ಯಭೂಮಿಯನ್ನು ಪುನರ್ ಸ್ಥಾಪಿಸುವಂತೆ ಆಗ್ರಹಿಸಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಉದ್ಬೂರು ಗೇಟ್‌ನಲ್ಲಿರುವ ವಿಷ್ಣುವರ್ಧನ್ ಸ್ಮಾರಕದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ವೇದಿಕೆ ರಾಜ್ಯಾಧ್ಯಕ್ಷ ರಾಜಶೇಖರ್ ಮಾತನಾಡಿ, ಕನ್ನಡ ಚಲನಚಿತ್ರದ ಮೇರು ನಟರಾದ ಡಾ.ವಿಷ್ಣುವರ್ಧನ್ ಕೇವಲ ಒಬ್ಬ ವ್ಯಕ್ತಿಯಾಗಿರಲಿಲ್ಲ ಒಂದು ದೊಡ್ಡ ಶಕ್ತಿಯಾಗಿದ್ದರು. ಅಂತಹ ವ್ಯಕ್ತಿಯ ಸಮಾಧಿಯನ್ನು ರಾತ್ರೋರಾತ್ರಿ ನೆಲಸಮಗೊಳಿಸಿದ ಪುಣ್ಯಭೂಮಿಯ ಪುನರ್ ನಿರ್ಮಾಣವನ್ನು ರಾಜ್ಯ ಸರ್ಕಾರ ಮಾಡಬೇಕು. ಇಲ್ಲದಿದ್ದರೆ ಸರ್ಕಾರದ ಕಾನೂನು ಚೌಕಟ್ಟಿನಲ್ಲಿ ಭೂಮಿ ಬೆಲೆಯನ್ನು ನಿಗದಿಪಡಿಸಿ ಕರ್ನಾಟಕದ ಅಭಿಮಾನಿಗಳೆಲ್ಲ ಆ ಜಾಗವನ್ನು ಖರೀದಿ ಮಾಡಿ ವಿಷ್ಣುವರ್ಧನ್ ಅವರ ಬೃಹತ್ ದೇವಾಲಯವನ್ನು ನಾವುಗಳೆಲ್ಲರೂ ಕಟ್ಟುತ್ತೇವೆ ಎಂದರು.

ಕನ್ನಡ ಚಲನಚಿತ್ರ ರಂಗಕ್ಕೆ ಸಾಹಸಸಿಂಹ ಡಾ.ವಿಷ್ಣುವರ್ಧನ್ ಅವರ ಕೊಡುಗೆಯ ಬಗ್ಗೆ ಇಡೀ ಕರ್ನಾಟಕಕ್ಕೆ ಗೊತ್ತು. ನಟ ಶ್ರೇಷ್ಠರಿಗೆ ಸೂಕ್ತ ಗೌರವ ನೀಡಲಾಗದೆ 2009ರಿಂದಲೂ ಸ್ಮಾರಕ ನಿರ್ಮಾಣಕ್ಕಾಗಿ ಕಾನೂನು ಹೋರಾಟಗಳನ್ನು ಅಭಿಮಾನಿ ದೇವರುಗಳು ಮಾಡಿಕೊಳ್ಳುತ್ತಲೇ ಬರುತ್ತಿದ್ದೇವೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಕೊನೆಗೂ ಈಗಿರುವ ಸಮಾಧಿ ಸ್ಥಳವನ್ನು ಉಳಿಸಿಕೊಳ್ಳಲಾಗದ ಸ್ಥಿತಿಗೆ ರಾಜಕಾರಣಿಗಳು, ಚಿತ್ರನಟರು, ಅಭಿಮಾನಿಗಳಾದ ನಾವು ತಲುಪಿದ್ದೇವೆ ಎನ್ನುವುದು ನಿಜಕ್ಕೂ ಬೇಸರದ ಸಂಗತಿ ಎಂದು ವಿಷಾದ ವ್ಯಕ್ತಪಡಿಸಿದರು.

ಡಾ.ವಿಷ್ಣುವರ್ಧನ್ ಅವರ ಸಮಾಧಿ ಸ್ಥಳದ ಭೂಮಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೂಡಲೇ ಜಾಗದ ಮಾಲೀಕರಿಂದ ಸ್ವಾಧೀನಪಡಿಸಿಕೊಂಡು, ಸರ್ಕಾರದ ನಿಯಮಾನುಸಾರ ನ್ಯಾಯಸಮ್ಮತ ಪರಿಹಾರ ನೀಡಿ ಸ್ಮಾರಕವನ್ನು ಕಾಪಾಡಿಕೊಳ್ಳಬೇಕು. ಆ ಸ್ಮಾರಕವನ್ನು ರಾಷ್ಟ್ರಮಟ್ಟದ ಪ್ರವಾಸಿ ಕೇಂದ್ರವಾಗಿ, ಕಲೆ–ಸಂಸ್ಕೃತಿಯ ಪ್ರತೀಕವಾಗಿ ಕಲಾ ಗ್ರಾಮವಾಗಿ ಅಭಿವೃದ್ಧಿಪಡಿಸಬೇಕು. ಈ ಸಮಸ್ಯೆ ಬಗೆಹರಿಯದಿದ್ದರೆ ರಾಜ್ಯಾದ್ಯಂತ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಡಿಪಿಕೆ ಪರಮೇಶ್, ಮಹದೇವಸ್ವಾಮಿ, ಕೆ.ಪಿ.ರವಿ, ಮಹೇಶ್, ಅಕ್ಬರ್, ಬಸವ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.



ನಟ ವಿಷ್ಣುವರ್ಧನ್ ಅವರ ಪುಣ್ಯಭೂಮಿಯನ್ನು ಪುನರ್ ಸ್ಥಾಪಿಸುವಂತೆ ಆಗ್ರಹಿಸಿ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಉದ್ಬೂರು ಗೇಟ್‌ನಲ್ಲಿರುವ ವಿಷ್ಣುವರ್ಧನ್ ಸ್ಮಾರಕದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಅವಹೇಳನ; ಇಬ್ಬರ ವಿರುದ್ಧ ಕ್ರಮಕ್ಕೆ ಪೊಲೀಸ್ ಆಯುಕ್ತರಿಗೆ ಕುರುಬರ ಸಂಘದಿಂದ ದೂರು



ಮೈಸೂರಿನ ಕನಕ ಭವನದಲ್ಲಿ ನಡೆದ ಕುರುಬ ಸಮುದಾಯದ ಮುಖಂಡರ ಸಭೆಯಲ್ಲಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿದರು.

ಮೈಸೂರು,ಆ.12–ಕುರುಬ ಸಮುದಾಯ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವಹೇಳನ ಮಾಡಿರುವ ಮಂಡ್ಯದ ಇಬ್ಬರು ವ್ಯಕ್ತಿಗಳ ವಿರುದ್ಧ ಕರ್ನಾಟಕ ಪ್ರದೇಶ ಕುರುಬರ ಸಂಘದ ವತಿಯಿಂದ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಗೆ ದೂರು ಸಲ್ಲಿಸಲಾಗಿದೆ.

ಇದಕ್ಕೂ ಮುನ್ನ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ನೇತೃತ್ವದಲ್ಲಿ ಸಿದ್ಧಾರ್ಥನಗರದ ಕನಕ ಭವನದಲ್ಲಿ ನಡೆದ ಕುರುಬ ಸಮುದಾಯದ ಮುಖಂಡರ ಸಭೆಯಲ್ಲಿ ಚರ್ಚೆ ನಡೆಸಿ, ಅವಹೇಳನಕಾರಿಯಾಗಿ ಮಾತನಾಡಿರುವ ವ್ಯಕ್ತಿಗಳನ್ನು ಕೂಡಲೇ ಬಂಧಿಸಿ, ಗಡಿಪಾರು ಮಾಡದಿದ್ದರೆ ಕರ್ನಾಟಕ ಬಂದ್‌ಗೆ ಕರೆ ನೀಡಲು ನಿರ್ಧರಿಸಲಾಯಿತು.

ಸಭೆಯಲ್ಲಿ ಕುರುಬ ಸಮುದಾಯದ ಜಿಲ್ಲಾಧ್ಯಕ್ಷ ಸುರೇಶ್ ನಂಜೇಗೌಡ, ತಾಲೂಕು ಅಧ್ಯಕ್ಷರಾದ ಕೋಟೆ ಆನಂದ್, ಕೆಂಪಣ್ಣ, ಕುನ್ನೇಗೌಡ, ಬಸವರಾಜು, ನಗರಪಾಲಿಕೆ ಮಾಜಿ ಸದಸ್ಯ ಗೋಪಿ, ರವಿ, ಶೋಭಾ, ಛಾಯಾ, ಬಸಪ್ಪ, ಸೋಮೇಗೌಡ, ಪುಟ್ಟಸ್ವಾಮಿ, ಜಯಸ್ವಾಮಿ, ಬಿಬಿಎಂಪಿ ಮಾಜಿ ಸದಸ್ಯ ಕೃಷ್ಣಮೂರ್ತಿ, ಅಭಿ, ರವಿ, ಅಪ್ಪುಗೌಡ, ಕೃಷ್ಣ, ಧರ್ಮೇಂದ್ರ, ಹುಚ್ಚೇಗೌಡ, ಹೆಚ್.ಕೆ.ಗೋಪಾಲ್, ಉದಯ್, ಮಹೇಶ್, ಸ್ವಾಮಿಗೌಡ, ಅಭಿ, ಕುರಿಹುಂಡಿ ರಾಜು, ಜಯಸ್ವಾಮಿ, ಮೋಹನ್, ಆನಂದ್, ಬಸವಣ್ಣ, ಪರಮೇಶ್, ಮಹೇಶ್, ರವಿ, ಅಪ್ಪುಗೌಡ, ಚಿಕ್ಕಣ್ಣ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಶೋಷಿತ ಸಮುದಾಯಗಳೊಂದಿಗೆ ಸಹ ಭೋಜನ ಮಾಡುವ ಮೂಲಕ ಸಿಎಂ ಸಿದ್ದರಾಮಯ್ಯನವರ ಹುಟ್ಟುಹಬ್ಬ ಆಚರಣೆ

ಪೌರಕಾರ್ಮಿಕರು ಮಾಡಿದ ಹೋಳಿಗೆ ಊಟವನ್ನು ಸವಿದ ಸಾಹಿತಿಗಳು, ಪ್ರಗತಿಪರ ಚಿಂತಕರು, ಅಲ್ಪಸಂಖ್ಯಾತರು, ಕಾಂಗ್ರೆಸ್ ಕಾರ್ಯಕರ್ತರು



ಸಿಎಂ ಸಿದ್ದರಾಮಯ್ಯ ಜನ್ಮದಿನದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯಿಂದ ದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಸೇರಿದಂತೆ ಶೋಷಿತ ಸಮುದಾಯಗಳೊಂದಿಗೆ ಸಹಪಂಕ್ತಿ ಭೋಜನ ಮಾಡಲಾಯಿತು.

ಮೈಸೂರು,ಆ.12(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಜನ್ಮ ದಿನದ ಅಂಗವಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ವತಿಯಿಂದ ದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ಸೇರಿದಂತೆ ಶೋಷಿತ ಸಮುದಾಯಗಳೊಂದಿಗೆ ಸಹಪಂಕ್ತಿ ಭೋಜನ ಮಾಡಲಾಯಿತು.

ಮೈಸೂರಿನ ವಿಶ್ವಮೈತ್ರಿ ಬುದ್ಧ ವಿಹಾರದ ಆವರಣದಲ್ಲಿ ಪೌರಕಾರ್ಮಿಕರು ಮಾಡಿದ ಅನ್ನ, ಸಂಬಾರು, ತಿಳಿ ಸಾರು, ಒಬ್ಬಟ್ಟು, ಪಾಯಸ, ಪಲ್ಯ, ಬಜ್ಜಿ, ಹಪ್ಪಳ ಒಳಗೊಂಡ ಹೋಳಿಗೆ ಊಟವನ್ನು ಸಾಹಿತಿಗಳು, ಪ್ರಗತಿಪರ ಚಿಂತಕರು, ಅಲ್ಪಸಂಖ್ಯಾತ ಮುಖಂಡರು, ಕಾಂಗ್ರೆಸ್ ಕಾರ್ಯಕರ್ತರು ಸವಿದು ಸಾಮರಸ್ಯದ ಸಂದೇಶ ಸಾರಿದರು.

ಈ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾತನಾಡಿ, ದೇಶದ ಪ್ರಮುಖರಿಗೆ ಅನೇಕರು ಪ್ರೇರಣೆಯಾಗಿದ್ದು, ಗಾಂಧೀಜಿಗೆ ಗೋಪಾಲಕೃಷ್ಣ ಗೋಕುಲೆ, ಡಾ.ಬಿ.ಆರ್.ಅಂಬೇಡ್ಕರ್‌ಗೆ ಬುದ್ಧ ಪ್ರಭಾವ ಬೀರಿದಂತೆ. ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಲೋಹಿಯಾ, ಜಯಪ್ರಕಾಶ್ ನಾರಾಯಣ, ನಂಜುಂಡಸ್ವಾಮಿ ಅವರ ಪ್ರಭಾವ ಬೀರಿದೆ. ಅವರನ್ನು ಓದುಕೊಂಡು ಸಿದ್ಧಾಂತಕ್ಕೆ ಬದ್ಧರಾದ ಅವರು ಎಂದಿಗೂ ಯಾವುದೇ ವಿಷಯದಲ್ಲಿಯೂ ರಾಜಿಯಾಗಿಲ್ಲ ಎಂದರು.

ನಮಗೆ ಹಾಗೂ ಮುಂದಿನ ಪೀಳಿಗೆಗೆ ಪ್ರೇರಣೆ ನೀಡುವ ನಾಯಕರು ಸಿದ್ದರಾಮಯ್ಯ. ಒಬ್ಬ ರಾಜಕಾರಣಿ ಹೇಗೆ ಶುದ್ಧವಾಗಿರಬೇಕು. ಯಾವ ರೀತಿ ವಸ್ತ್ರ ಧರಿಸಬೇಕು, ಭಾಷಾ ಹಿಡಿತ ಹೇಗಿರಬೇಕು ಎಂದು ಸಿದ್ದರಾಮಯ್ಯ ಅವರನ್ನು ಪಾಲಿಸಿದರೆ, ಒಬ್ಬ ಪರಿಪೂರ್ಣ ರಾಜಕಾರಣ ಆಗಬಹುದು. ಮೈಸೂರನಲ್ಲಿ ಎಲ್ಲಾ ರೀತಿಯ ಅಧ್ಯಯನ ಸಂಸ್ಥೆಗಳಿವೆ. ಹಾಗೇ ಒಬ್ಬ ರಾಜಕಾರಣಿ ಹೇಗಿರಬೇಕು ಎಂದು ಸಿದ್ದರಾಮಯ್ಯ ಹೆಸರಿನಲ್ಲಿ ಅಧ್ಯಯನ ಸಂಸ್ಥೆ ಆರಂಭಿಸಬೇಕಿದೆ ಎಂದು ತಿಳಿಸಿದರು.

ಪ್ರಗತಿಪರ ಚಿಂತಕ ಪ್ರೊ.ಕಾಳೇಗೌಡ ನಾಗವಾರ ಮಾತನಾಡಿ, ಬಸವಲಿಂಗಪ್ಪ ಅವರು ಮಲ ಹೊರುವ ಪದ್ಧತಿ ನಿರ್ಮೂಲನೆಗೆ ಕಾಯ್ದೆ ಜಾರಿಗೆ ತಂದರು. ಇಂದು ನಾವು ತಲೆಯಲ್ಲಿ ತುಂಬಿರುವ ಜಾತಿ ತಾರತಮ್ಯ, ಮೇಲು–ಕೀಳಿನ ಕಸವನ್ನು ಪದ್ಧತಿಯನ್ನು ಕೊನೆಗಾಣಿಸಲು ಪಣತೊಡಬೇಕು. ಸಾಮೂಹಿಕ ಹೊಣೆಗಾರಿಕೆಯಿಂದ ಈ ಕೆಲಸ ಮಾಡಬೇಕು ಎಂದರು.

ಶ್ರೀ ಆದಿ ಕರ್ನಾಟಕ ಮಹಾಸಂಸ್ಥಾನದ ಪೀಠಾಧ್ಯಕ್ಷ ಶ್ರೀ ಜ್ಞಾನ ಸ್ವರೂಪನಂದ ಸ್ವಾಮೀಜಿ ಮಾತನಾಡಿ, ಬುದ್ಧ, ಬಸವ ಅಂಬೇಡ್ಕರ್ ತತ್ವ ಸಿದ್ಧಾಂತಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಳವಡಿಸಿಕೊಂಡಿದ್ದಾರೆ. ಬಡವರ ಬಗ್ಗೆ ಕಾಳಜಿ, ಜಾತ್ಯತೀತ ನಿಲುವುಗಳು ಸಮರ್ಥ ರಾಜಕಾರಣಿಯಾಗಿ ಹೊರ ಹೊಮ್ಮಿಸಿದೆ. ರಾಜ್ಯದ ಆರ್ಥಿಕ ಹಿಂದುಳಿದ ಕುಟುಂಬಗಳ ಬದುಕಿಗೆ ಗ್ಯಾರಂಟಿ ಯೋಜನೆಗಳು ಬೆಳಕಾಗಿವೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಮಾತನಾಡಿ, ಶೋಷಿತ ಸಮುದಾಯಗಳ ಧ್ವನಿಯಾದ ಸಿದ್ದರಾಮಯ್ಯ ಅವರ ಹುಟ್ಟುಹಬ್ಬದ ಅಂಗವಾಗಿ ಅವರ ಚಿಂತನೆಗೆ ಅನುಗುಣವಾಗಿ ಸಹಪಂಕ್ತಿ ಭೋಜನೆ ಆಯೋಜಿಸಿದ್ದು, ವಿಶೇಷವಾಗಿ ಪೌರಕಾರ್ಮಿಕರು ಮಾಡಿದ ಅಡುಗೆಯ ಊಟವನ್ನು ಎಲ್ಲರೂ ಸೇವಿಸುವ ಮೂಲಕ ಸಮಾಜದಲ್ಲಿರುವ ಮೇಲು ಕೀಳು ಎಂಬ ಭೇದ ಭಾವವನ್ನು ತೊಡೆದು ಹಾಕುವ ಮುಖ್ಯ ಉದ್ದೇಶವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಪ್ರೊ.ಕೆ.ಎಸ್.ಭಗವಾನ್, ಸಂವಿಧಾನ ಸಂರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಸಮಾಜ ಸೇವಕ ಕೆ.ರಘುರಾಮ ವಾಜಪೇಯಿ, ಮಾಜಿ ಮೇಯರ್ ಪುರುಷೋತ್ತಮ್, ವಕೀಲ ಶಿವಪ್ರಸಾದ್, ದಲಿತ ನವ ನಿರ್ಮಾಣ ವೇದಿಕೆಯ ಹರಿಹರ ಆನಂದ ಸ್ವಾಮಿ, ಉಪ್ಪಾರ ಸಂಘದ ಯೋಗೇಶ್ ಉಪ್ಪಾರ್, ಮೊಗಣ್ಣಚಾರ್, ಲೋಕೇಶ್ ಮಹದೇವಪುರ, ನಗರಪಾಲಿಕೆ ಪೌರಕಾರ್ಮಿಕರ ಸಂಘದ ಎನ್.ಮಾರಾ, ಮಂಜುಳಾ ಮಂಜುನಾಥ, ಮಾನಸ, ಪೌರಕಾರ್ಮಿಕ ಮುಖಂಡ ಶ್ರೀನಿವಾಸ್, ರೆಸ್ಪಾನ್ಸಿಬಲ್ ಸಿಟಿಜನ್ಸ್ ವಾಯ್ಸ್‌ನ ಎಸ್.ಎಂ.ಕಲೀಂ, ಕದೀರ್, ಜಾವೀದ್, ಬಾಲಚಂದ್ರ, ಮಹೇಂದ್ರ ಕಾಗಿನೆಲೆ, ಪೌರಕಾರ್ಮಿಕರ ಸಂಘದ ನಾಗಮ್ಮ, ದೊರೆ, ವಿಶ್ವಕರ್ಮ ಚಂದ್ರು, ರಾಜಶೇಖರ್, ಪುಟ್ಟರಾಜು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಪ್ರತ್ಯೇಕ ಕೊಲೆ ಪ್ರಕರಣ: ಆರೋಪಿಗಳ ಬಂಧನ



ಸುದ್ದಿಗೋಷ್ಠಿಯಲ್ಲಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿದರು.

ಮಂಡ್ಯ, ಆ.12– ಎರಡ್ಮೂರು ದಿನಗಳ ಅಂತರದಲ್ಲಿ ಮದ್ದೂರು ಹಾಗೂ ಮಳವಳ್ಳಿಯಲ್ಲಿ ನಡೆದಿದ್ದ 2 ಪ್ರತ್ಯೇಕ ಕೊಲೆ ಪ್ರಕರಣಗಳ ಸಂಬಂಧ ಒಟ್ಟು 11 ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಆ.6ರಂದು ಮಳವಳ್ಳಿ ತಾಲೂಕಿನ ಮಾಗನೂರು ಗೇಟ್ ಬಳಿ ಶ್ರೀಸಿದ್ದೇಶ್ವರ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಯೋಗೇಶ್ ಎಂಬಾತನ ಕೊಲೆ ನಡೆದಿತ್ತು. ಈ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಮಳವಳ್ಳಿ ಟೌನ್ ಪೊಲೀಸರು ಬಂಧಿಸಿದ್ದಾರೆ. ಮಳವಳ್ಳಿ ತಾಲೂಕಿನ ವಡ್ಡರಹಳ್ಳಿ ಕಾಲೋನಿಯ ಮನೋಜ್ ಪಟೇಲ್, ಎನ್‌ಇಎಸ್ ಬಡಾವಣೆಯ ನಂದನ್.ಜೆ ಅಲಿಯಾಸ್ ಅಪ್ಪಿ, ಮೈಸೂರು ರಾಘವೇಂದ್ರ ನಗರದ ಜಿ.ಆರ್.ಗಿರೀಶ್ ಅಲಿಯಾಸ್ ಡಾಲಿ ಗುರು ಹಾಗೂ ಎನ್.ಪ್ರೀತಮ್ ಅಲಿಯಾಸ್ ಪ್ರೀತಿ ಬಂಧಿತ ಆರೋಪಿಗಳು ಎಂದರು.

ಆ.9ರಂದು ಮದ್ದೂರು ತಾಲೂಕಿನ ವಡ್ಡರದೊಡ್ಡಿ ಗ್ರಾಮದ ಅರುಣ.ಪಿ ಎಂಬಾತನ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ 7 ಮಂದಿ ಆರೋಪಿಗಳನ್ನು ಕೆಸ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ನಿಡಘಟ್ಟ ಗ್ರಾಮದ ಎನ್.ಎಸ್.ವಿಕಾಸ್, ಹನುಮಂತಪುರದ ಹೆಚ್.ಆರ್. ಭರತ್‌ಗೌಡ, ಹೆಚ್.ಆರ್.ನಿತ್ಯಾನಂದ, ಹೆಚ್.ಪಿ.ಹೇಮಂತ್, ಯರಗನಹಳ್ಳಿಯ ವೈ.ಕೆ. ಚಂದನ್, ಹೆಮ್ಮನಹಳ್ಳಿಯ ಹೆಚ್.ಎಸ್.ಕುಮಾರ, ಹೆಚ್.ಎಸ್. ಶ್ರೀನಿವಾಸ ಬಂಧಿತ ಆರೋಪಿಗಳು ಎಂದರು.

ಎರಡೂ ಪ್ರಕರಣಗಳು ಹಳೇ ದ್ವೇಷದಿಂದಲೇ ನಡೆದಿದೆ ಎಂದು ತನಿಖೆಯಿಂದ ತಿಳಿದು ಬಂದಿದೆ. ಕೊಲೆಯಾದ ಮದ್ದೂರಿನ ವಡ್ಡರಹಳ್ಳಿ ಅರುಣನನ್ನು ಹಳೆಯ ದ್ವೇಷದಿಂದ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದರು. ಅದರಂತೆ ಮಳವಳ್ಳಿಯ ಯೋಗೇಶನನ್ನು ಹಳೇಯ ದ್ವೇಷದಿಂದಲೇ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಮದ್ಯಪಾನ ಮಾಡುತ್ತಿದ್ದಾಗ ಹಾಡಹಗಲೇ ಆರೋಪಿಗಳು ದಾಳಿ ಮಾಡಿ ಕೊಲೆ ಮಾಡಿದ್ದರು ಎಂದರು.

ಪ್ರಕರಣಗಳನ್ನು ಪತ್ತೆ ಹಚ್ಚಲು ಎಎಸ್ಪಿಗಳಾದ ತಿಮ್ಮಯ್ಯ ಹಾಗೂ ಗಂಗಾಧರಸ್ವಾಮಿ ಅವರ ಮಾರ್ಗ ದರ್ಶನದಲ್ಲಿ 2 ಪ್ರತ್ಯೇಕ ತಂಡಗಳ ರಚನೆ ಮಾಡ ಲಾಗಿತ್ತು. ತನಿಖೆ ನಡೆಸಿ ಆರೋಪಿಗಳ ಬಂಧಿಸುವಲ್ಲಿ ತಂಡ ಯಶಸ್ವಿಯಾಗಿದೆ. ಕೊಲೆ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆರೋಪಿಗಳ ಪತ್ತೆ ಹಚ್ಚಿ ಬಂಧಿಸಿದ ತಂಡಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು.

ಆ.15, ಸ್ವಾತಂತ್ರ ದಿನಾಚರಣೆ



ಮಂಡ್ಯ, ಆ.12– ಜಿಲ್ಲಾಡಳಿತದಿಂದ 79ನೇ ಸ್ವಾತಂತ್ರ ದಿನಾಚರಣೆಯನ್ನು ಆ.15 ರಂದು ಬೆಳಗ್ಗೆ 9 ಗಂಟೆಗೆ ನಗರದ ಸರ್ ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಧ್ವಜಾರೋಹಣ ನೆರವೇರಿಸಿ ಸ್ವಾತಂತ್ರೋತ್ಸವ ಸಂದೇಶ ನೀಡಲಿದ್ದಾರೆ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಶಾಸಕರಾದ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರಸ್ವಾಮಿ ಉಪಸ್ಥಿತರಿರಲಿದ್ದು, ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಎಂಎಲ್‌ಸಿಗಳಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಕೆ.ವಿವೇಕಾನಂದ, ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ.ಮಂಜು, ಕೆ.ಎಂ. ಉದಯ, ನಗರಸಭೆ ಅಧ್ಯಕ್ಷ ಎಂ.ವಿ. ಪ್ರಕಾಶ್, ಮೈಷುಗರ್ ಅಧ್ಯಕ್ಷ ಸಿ.ಡಿ. ಗಂಗಾಧರ, ಕರ್ನಾಟಕ ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಹೆಚ್. ಕೃಷ್ಣ, ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ನಯೀಮ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಗಾಂಧೀಜಿ ತತ್ವ, ಮೌಲ್ಯಗಳು ಪ್ರಸ್ತುತ ಸಮಾಜಕ್ಕೆ ಅವಶ್ಯಕ

ಖ್ಯಾತ ವೈದ್ಯ, ಕವಿ ಡಾ.ಚಂದ್ರಶೇಖರ್ ಅಭಿಪ್ರಾಯ



ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು.

ಮಂಡ್ಯ, ಆ.12– ಸ್ವಾತಂತ್ರ್ಯ ದಿನಕ್ಕೆ ಕೆಲವು ದಿನಗಳು ಬಾಕಿ ಇದ್ದು, ಇಂತಹ ಸಂದರ್ಭ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ದೇಶಕ್ಕೆ ಅಹಿಂಸಾತ್ಮಕವಾಗಿ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧೀಜಿ ಅವರ ತತ್ವಗಳು ಎಲ್ಲಾ ಕಾಲಕ್ಕೂ ಮತ್ತು ದೇಶಕ್ಕೂ ಮಾದರಿಯಾಗಿವೆ. ಅವರ ಜೀವನದ ತತ್ವ ಮತ್ತು ಮೌಲ್ಯಗಳು ಪ್ರಸ್ತುತ ಸಮಾಜಕ್ಕೆ ಅವಶ್ಯಕವಾಗಿವೆ ಎಂದು ಖ್ಯಾತ ವೈದ್ಯ ಹಾಗೂ ಕವಿ ಡಾ.ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಡಾ.ಜೀಶಂಪ ಸಾಹಿತ್ಯ ವೇದಿಕೆ ವತಿಯಿಂದ ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಡೆದ 13ನೇ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಧಾನ ಭಾಷಣ ಮಾಡಿದರು.

ಬ್ರಿಟಿಷರಿಂದ ನಾವು ಸ್ವಾತಂತ್ರ್ಯ ಪಡೆಯಲು ಹಿಂಸಾ ಮಾರ್ಗ ಅನುಸರಿಸಿದ್ದರೆ ನಾವು ಭಾರತೀಯರಾಗುತ್ತಿರಲಿಲ್ಲ. ಬದಲಾಗಿ ಮಹಾತ್ಮಾ ಗಾಂಧಿ ಅವರ ನೇತೃತ್ವದಲ್ಲಿ ಅಹಿಂಸಾ ಮಾರ್ಗದ ಮೂಲಕ ನಾವು ಸ್ವಾತಂತ್ರ್ಯ ಪಡೆದೆವು. ಗಾಂಧೀಜಿ ಅವರು ಸ್ವಾತಂತ್ರ್ಯಕ್ಕಾಗಿ ಉಪ್ಪಿನ ಸತ್ಯಾಗ್ರಹ, ತೆರಿಗೆ ನಿರಾಕರಣೆ, ಕ್ವಿಟ್ ಇಂಡಿಯಾ ಚಳುವಳಿಗಳನ್ನು ಅಹಿಂಸಾತ್ಮಕವಾಗಿ ಮಾಡಿದರು. ಇವರ ಚಳುವಳಿ ಧಾರ್ಮಿಕ, ಆಧ್ಯಾತ್ಮಿಕವಾಗಿತ್ತು. ಸ್ವಾತಂತ್ರ್ಯ ಹೋರಾಟ ಹಿಂಸಾ ಮಾರ್ಗ ಪಡೆದಿದ್ದರೆ ಸತ್ತ ಹೆಣಗಳ ಮೇಲೆ ನಾವು ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬೇಕಿತ್ತು. ಇದನ್ನೆಲ್ಲಾ ಮನಗೊಂಡು ಗಾಂಧೀಜಿ ಅವರು ಅಹಿಂಸಾ ಮಾರ್ಗ ತುಳಿದು ಸ್ವಾತಂತ್ರ್ಯ ಕೊಡಿಸಿದರು ಎಂದು ಸ್ಮರಿಸಿದರು.

ಅಂತಾರಾಷ್ಟ್ರೀಯ ವಾಲಿಬಾಲ್ ಮಾಜಿ ಆಟಗಾರ ಹಾಗೂ ಸಮಾಜ ಸೇವಕ ಡಾ.ರೇವಣ್ಣ ಮಾತನಾಡಿ, ನಾನು ಅಂತಾರಾಷ್ಟ್ರೀಯ ಮಟ್ಟದ ವಾಲಿಬಾಲ್ ಪಂದ್ಯಾವಳಿಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದಕ್ಕೆ ಹೆಮ್ಮೆ ಇದೆ. ಅದರಲ್ಲೂ ಮಂಡ್ಯ ಜಿಲ್ಲೆಯಿಂದ ಅಂತಾರಾಷ್ಟ್ರೀಯ ಮಟ್ಟದ ವಾಲಿಬಾಲ್ ತಂಡಕ್ಕೆ ಆಯ್ಕೆಯಾಗಿದ್ದಕ್ಕೆ ನನ್ನ ಶ್ರಮದ ಜೊತೆಗೆ ನನಗೆ ಪ್ರೋತ್ಸಾಹಿಸಿದ ಹಲವರ ಕೊಡುಗೆ ಇದೆ. ವಾಲಿಬಾಲ್ ಆಟಗಾರ ಮಾದೇಗೌಡ ಎಂಬುವರು ನಾನು ವಾಲಿಬಾಲ್‌ನಲ್ಲಿ ದೇಸಿ, ರಾಜ್ಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಾಂಗ್ಲಾದೇಶದ ವಿರುದ್ಧ ಆಡಲು ಕಾರಣೀಭೂತರಾದವರು. ಚಂದ್ರಕುಮಾರ್ ಎಂಬುವರು ನನಗೆ ತರಬೇತಿ ನೀಡಿ ನಾನು ರಾಷ್ಟ್ರವನ್ನು ಪ್ರತಿನಿಧಿಸಲು ಸಹಾಯ ಮಾಡಿದವರು ಎಂದರು.

ಈ ವೇಳೆ ಮಂಡ್ಯದ ಖ್ಯಾತ ವೈದ್ಯ ಡಾ. ಮನೋಹರ್, ಶಂಕರ್ ಹೆಮ್ಮಿಗೆ, ಡಾ.ತನ್ಮಯಿ ಕೃಷ್ಣ ಪಾಲ ನೇತ್ರ, ಸೋಮಶೇಖರ ಮೂರ್ತಿ, ಸೌಭಾಗ್ಯ ಸಿದ್ದರಾಜು, ಮುನಿರಾ ಅನ್ವರ್, ಚೈತ್ರ ಪ್ರಸನ್ನ, ಎಂ.ಡಿ.ನಾಗೇಂದ್ರ, ಭಾರ್ಗವಿ ಅವರನ್ನು ಅಭಿನಂದಿಸಲಾಯಿತು.

ವೇದಿಕೆಯಲ್ಲಿ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ಹೆಚ್.ಎಸ್.ಮುದ್ದೇಗೌಡ, ಡಾ.ಜೀ.ಶಂಪ. ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣಸ್ವರ್ಣಸಂದ್ರ, ಪದಾಧಿಕಾರಿಗಳಾದ ನಾಗೇಶ್ ರಾಗಿಮುದ್ದನಹಳ್ಳಿ, ಮಾಡ್ಲ ಅರಸಯ್ಯ, ನಟ ದೀಪಕ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

> ಹಿರಿಯ ಸಾಹಿತಿಗಳು, ಲೇಖಕರು, ಕವಿಗಳು ಮೂಲೆ ಗುಂಪಾಗುತ್ತಿರುವುದು ನಿಜಕ್ಕೂ ವಿಷಾದನೀಯ. ಮಂಡ್ಯದವರೇ ಆದ ಮಹಿಳಾ ಸಾಹಿತಿಗಳಾದ ತ್ರಿವೇಣಿ, ಆರ್ಯಾಂಬ ಪಟ್ಟಾಭಿ, ವಾಣಿ, ಲತಾ ರಾಜಶೇಖರ್‌ರಂತಹ ಖ್ಯಾತ ಸಾಹಿತಿಗಳು ಯಾವ ಸಮಾರಂಭದಲ್ಲೂ ಕಾಣಿಸಿಕೊಳ್ಳುತ್ತಿಲ್ಲ. ಇದನ್ನು ನೋಡಿದರೆ ಜನ ಇವರನ್ನು ಮರೆತಿದ್ದಾರೆಯೇ ಎನಿಸುತ್ತದೆ. ಉದ್ದೇಶ ಪೂರ್ವಕವಾಗಿ ಅವರನ್ನು ಕರೆಯುತ್ತಿಲ್ಲವೋ ಎಂಬುದು ಗೊತ್ತಿಲ್ಲ – ಬಿ.ಆರ್. ಉಮಾ, ಸಾಹಿತಿ

ಶಿಷ್ಯನ ಅಭಿವೃದ್ಧಿ ಕಂಡು ಹೆಮ್ಮೆ ಪಡುವವರು ಗುರುಗಳು

ಗುರುವಂದನಾ ಕಾರ್ಯಕ್ರಮದಲ್ಲಿ ಬಿಇಒ ವೈ.ಕೆ.ತಿಮ್ಮೇಗೌಡ



ಬೀರುವಳ್ಳಿಯಲ್ಲಿ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ನಡೆಯಿತು.

ಕೆ.ಆರ್.ಪೇಟೆ, ಆ.12– ಅಜ್ಞಾನದ ಕತ್ತಲೆ ಹೊಗಲಾಡಿಸಿ ಜ್ಞಾನದ ಬೆಳಕು ನೀಡುವವರೇ ಗುರುಗಳು. ಹೀಗಾಗಿ ಶಿಷ್ಯನ ಅಭಿವೃದ್ಧಿ ಕಂಡು ಹೆಚ್ಚು ಸಂತೋಷ ಹಾಗೂ ಹೆಮ್ಮೆ ಪಡುವವರು ಗುರುಗಳ ಸ್ಥಾನ ತುಂಬಲು ಯಾರಿಂದಲೂ ಸಾಧ್ಯವಿಲ್ಲ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಕೆ. ತಿಮ್ಮೇಗೌಡ ತಿಳಿಸಿದರು.

ತಾಲೂಕಿನ ಬೀರುವಳ್ಳಿ ಗ್ರಾಮದ ಶ್ರೀಬಾಬು ರಾಜೇಂದ್ರ ಪ್ರಸಾದ್ ಅನುದಾನಿತ ಪ್ರೌಢ ಶಾಲೆಯಲ್ಲಿ 2009–2010ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಾಂಗ ಮಾಡಿದ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಗುರುವಂದನಾ, ಸ್ನೇಹ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಭವಿಷ್ಯ ರೂಪಿಸಿದ ಗುರುಗಳನ್ನು ಸ್ಮರಿಸುವ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ನನಗೆ ಹೆಚ್ಚಿನ ಸಂತೋಷ ನೀಡಿದೆ. ಗೈರು ಹಾಜರಾಗಿದ್ದರೆ ಉತ್ತಮ ವೇದಿಕೆ ಮಿಸ್ ಮಾಡಿಕೊಳ್ಳುತ್ತಿದ್ದೆ ಎಂದು ತಮ್ಮ ಮನದಾಳದ ಮಾತುಗಳನ್ನು ತಿಳಿಸಿದರು.

ಇದೇ ವೇಳೆ 2009–2010ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ವ್ಯಾಸಾಂಗ ಮಾಡಿದ ವಿದ್ಯಾರ್ಥಿಗಳು ಕಾರ್ಯಕ್ರಮ ಆಯೋಜಿಸಿದ್ದರು. ತಮ್ಮ ಆಹ್ವಾನದ ಮೇರೆಗೆ ಸಮಾರಂಭಕ್ಕೆ ಆಗಮಿಸಿದ್ದ ಶಿಕ್ಷಕರಾದ ಎಂ.ಕೆ. ರಂಗಸ್ವಾಮಯ್ಯ, ವೈ.ಕೆ.ಶ್ರೀಕಂಠಮೂರ್ತಿ, ಕೆ.ಆರ್.ಶ್ರೀನಿವಾಸ್, ಸಿ.ಎಂ.ಶಿವಪ್ಪ, ಡಿ.ನಿಂಗನಾಯಕ್, ಎಸ್.ಜಯೇಗೌಡ, ಟಿ.ಸಚ್ಚಿದಾನಂದ, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎನ್.ಶಿವರಾಮೇಗೌಡ, ಶಾಲೆಯ ಪ್ರಸ್ತುತ ಮುಖ್ಯಶಿಕ್ಷಕ ಕೆ.ಎನ್. ಅಣ್ಣಯ್ಯ, ಶಾಲೆ ಅಧ್ಯಕ್ಷ ತಿಮ್ಮೇಗೌಡ ಇತರರನ್ನು ವಿವಿಧ ಹೂವಿನ ಸುರಿಮಳೆ ಸುರಿಸುವ ಮೂಲಕ ಭವ್ಯ ಸ್ವಾಗತ ಕೋರಿ, ತಳಿರು ತೋರಣಗಳಿಂದ ಸಿಂಗರಿಸಿದ್ದ ವೇದಿಕೆಗೆ ಕರೆತಂದು ಎಲ್ಲರ ಪಾದ ಮುಟ್ಟಿ ವಿದ್ಯಾರ್ಥಿಗಳು ನಮಸ್ಕರಿಸಿ ಆಶೀರ್ವಾದ ಪಡೆದರು. ಬಳಿಕ ತಮ್ಮ ನೆಚ್ಚಿನ ಗುರುಗಳಿಗೆ ಮೈಸೂರು ಪೇಟ ತೊಡಿಸಿ, ಫಲ ತಾಂಬೂಲ, ನೆನಪಿನ ಕಾಣಿಕೆ ನೀಡಿ ಗೌರವಿಸುವ ಮೂಲಕ ಗುರುವಂದನೆ ಸಲ್ಲಿಸಿದರು. ಅಲ್ಲದೆ ತಾವೂ ಸಹ ಗುರುಗಳಿಂದ ನೆನಪಿನ ಕಾಣಿಕೆ ಸ್ವೀಕರಿಸಿದರು. ಗುರುಗಳು ಅಂದು ತಮ್ಮನ್ನು ಗುರುತಿಸುತ್ತಿದ್ದ ಬಗ್ಗೆ ವೇದಿಕೆಯಲ್ಲಿ ಅನಿಸಿಕೆಗಳನ್ನು ಹಂಚಿಕೊಂಡರು.

ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎನ್. ಶಿವರಾಮೇಗೌಡ ಮಾತನಾಡಿದರು. ಕಾರ್ಯಕ್ರಮದಲ್ಲಿ ಹಳೇ ವಿದ್ಯಾರ್ಥಿಗಳಾದ ಪ್ರಕಾಶ್, ಶ್ರುತಿ, ಗಗನ, ಗಿರೀಶ್, ಲೋಕೇಶ್, ಶ್ರೀಧರ್, ಸುಶ್ಮಿತ, ಶಿಲ್ಪ, ಸಚಿನ್, ಮಧು, ವಿನು, ಯೋಗೇಶ್, ಪುನೀತ್, ಅಭಿಲಾಷ್, ಉಮೇಶ್, ಶಿವಕುಮಾರ್ ಮತ್ತಿತರರಿದ್ದರು.

ಕುರುಬ ಸಮುದಾಯ, ಸಿಎಂ ಸಿದ್ದರಾಮಯ್ಯ ಬಗ್ಗೆ ಕೀಳುಮಟ್ಟದಲ್ಲಿ ಮಾತನಾಡಿರುವ

ಆರೋಪಿಗಳ ಬಂಧಿಸಿ, ಗಡಿಪಾರು ಮಾಡಲು ಆಗ್ರಹ

ಪಾಂಡವಪುರ, ಆ.12– ಕುರುಬ ಸಮುದಾಯ, ಸಿಎಂ ಸಿದ್ದರಾಮಯ್ಯ ಬಗ್ಗೆ ಕೀಳು ಮಟ್ಟದಲ್ಲಿ ಮಾತನಾಡಿರುವ ಬಸರಾಳು ಹೋಬಳಿ ಬೆನ್ನಹಟ್ಟಿ ಬಿ.ಎಸ್.ಕುಮಾರ್ ಹಾಗೂ ಶಾನಬೋಗನಹಳ್ಳಿ ಮಹೇಶ್ ಅವರನ್ನು ಬಂಧಿಸಿ ಸೂಕ್ತ ಕಾನೂನು ಕ್ರಮ ಜರುಗಿಸಿ ಗಡಿಪಾರು ಮಾಡಬೇಕೆಂದು ಆಗ್ರಹಿಸಿ ಪಟ್ಟಣದಲ್ಲಿ ಕುರುಬ ಸಮುದಾಯದ ಮುಖಂಡರು ಸಿಪಿಐ ಶರತ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ಪೊಲೀಸ್ ಠಾಣೆ ಎದುರು ಜಮಾಯಿಸಿದ ಕುರುಬ ಸಮುದಾಯದ ಮುಖಂಡರು ಘೋಷಣೆ ಕೂಗಿ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿದರು.

ಜಿಲ್ಲಾ ಕುರುಬರ ಸಂಘದ ನಿರ್ದೇಶಕ, ಪುರಸಭೆ ಸದಸ್ಯ ಹಾರೋಹಳ್ಳಿ ಕೃಷ್ಣ ಎ. ಅಣ್ಣಯ್ಯ ಮಾತನಾಡಿ, ಬೆನ್ನಹಟ್ಟಿ ಗ್ರಾಮದ ಬಿ.ಎನ್.ಕುಮಾರ್ ಹಾಗೂ ಶಾನಬೋಗನಹಳ್ಳಿ ಮಹೇಶ್ ಎಂಬುವರು ಕುಡಿದ ಅಮಲಿನಲ್ಲಿ ಕುರುಬ ಸಮುದಾಯ, ಸಿಎಂ ಸಿದ್ದರಾಮಯ್ಯ ಅವರನ್ನು ಅವಹೇಳನಕಾರಿಯಾಗಿ ನಿಂದಿಸಿದ್ದಾರೆ. ಈ ವಿಡಿಯೋ ಸಾಮಾಜಿಕ ಜಾಲತಾಣ ದಲ್ಲಿ ವೈರಲ್ ಆಗಿದ್ದು, ಸಾಕಷ್ಟು ಆಕ್ರೋಶ ವ್ಯಕ್ತವಾಗುತ್ತಿದೆ. ಆ ಮೂಲಕ ಸಮಾಜದಲ್ಲಿ ಅಶಾಂತಿ ಸೃಷ್ಟಿಸಿ, ಜಾತಿಗಳ ನಡುವೆ ವಿಷಬೀಜ ಬಿತ್ತುವ ಮೂಲಕ ಕೋಮು ಗಲಭೆ ಸೃಷ್ಟಿಸುವ ಕೆಲಸ ಮಾಡಿದ್ದಾರೆ ಎಂದು ಕಿಡಿಕಾರಿದರು.

ಯಾವುದೇ ವ್ಯಕ್ತಿ ಕುಡಿದ ಅಮಲಿನಲ್ಲಿ ಒಂದು ಸಮುದಾಯ ಹಾಗೂ ಸಿಎಂ ವಿರುದ್ಧ ಹಗುರವಾಗಿ ಮಾತನಾಡಬಾರದು. ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ವ್ಯಕ್ತಿಗಳನ್ನು ಪೊಲೀಸರು ಬಂಧಿಸಿ ಕಾನೂನು ಕ್ರಮ ಜರುಗಿಸಬೇಕು. ಜೊತೆಗೆ ಅಂತಹವರನ್ನು ಗಡಿಪಾರು ಮಾಡಬೇಕು. ಅಲ್ಲದೇ ಮತ್ತೆ ಇಂತಹ ಪ್ರಕರಣ ಮರುಕಳಿಸದಂತೆ ಪೊಲೀಸ್ ಇಲಾಖೆ ಎಚ್ಚರ ವಹಿಸಬೇಕು ಎಂದು ಒತ್ತಾಯಿಸಿದರು.

ಜಯಲಕ್ಷ್ಮಿ ನಿಧನ



ಕೆ.ಆರ್.ಪೇಟೆ, ಆ.12– ತಾಲೂಕಿನ ಹೆಚ್.ಕೋಡಿಹಳ್ಳಿ ಗ್ರಾಮದ ಹಿರಿಯ ಮುಖಂಡ ಲೇ. ಮುದ್ದೇಗೌಡರ ಪತ್ನಿ ಜಯಲಕ್ಷ್ಮಿ (70) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಶಾಸಕ ಹೆಚ್.ಟಿ. ಮಂಜು ಪತ್ನಿ ರಮಾಮಂಜು ಸೇರಿದಂತೆ ಮೂವರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಸ್ವಗ್ರಾಮದಲ್ಲಿ ನಡೆಯಿತು. ಮೃತರ ನಿಧನಕ್ಕೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಒಂದನೇ ಪುಟದಿಂದ

ಉಭಯ ಸದನಗಳಲ್ಲಿ ಮಾತಿನ ಚಕಮಕಿ

ರಾಜ್ಯಪಾಲರ ಕಾರ್ಯದರ್ಶಿ, ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಸಚಿವ ಸಂಪುಟದಿಂದ ರಾಜಣ್ಣ ಅವರನ್ನು ವಜಾಗೊಳಿಸಿರುವುದಾಗಿ ತಿಳಿಸಿದ್ದಾರೆ. ವಿಧಾನಮಂಡಲ ಅಧಿವೇಶನ ನಡೆಯುವಾಗ ಸಚಿವರನ್ನು ಕೈಬಿಟ್ಟಿರುವ ಕಾರಣವನ್ನು ಸದನಕ್ಕೆ ತಿಳಿಸುವುದು ಸರ್ಕಾರದ ಜವಾಬ್ದಾರಿ. ಸದನವನ್ನು ಕತ್ತಲಲ್ಲಿ ಇಡಲಾಗಿದೆ. ತಕ್ಷಣವೇ ಉತ್ತರ ನೀಡಬೇಕು. ಯಾವ ಕಾರಣಕ್ಕೆ ರಾಜಣ್ಣ ಅವರನ್ನು ವಜಾ ಮಾಡಲಾಗಿದೆ ಎಂದರು.

ಸಭಾಧ್ಯಕ್ಷ ಯು.ಟಿ.ಖಾದರ್ ಮಧ್ಯಪ್ರವೇಶಿಸಿ ಮಾತನಾಡಿ, ಪಕ್ಷದ ಆಂತರಿಕ ವಿಚಾರ ಸದನದಲ್ಲಿ ಚರ್ಚೆ ಮಾಡುವುದು ಅನಗತ್ಯ ಎಂದಾಗ, ವಿರೋಧ ಪಕ್ಷದ ಸುರೇಶ್‌ಕುಮಾರ್, ಸುನೀಲ್‌ಕುಮಾರ್ ಸೇರಿದಂತೆ ಎಲ್ಲರೂ ಒಮ್ಮೆಲೇ ಎದ್ದು ನಿಂತು ಆಕ್ಷೇಪಿಸಿ, ಇದು ಸರ್ಕಾರಕ್ಕೆ ಸಂಬಂಧಪಟ್ಟ ವಿಚಾರ, ಪಕ್ಷದ ಆಂತರಿಕ ವಿಚಾರವಲ್ಲ ಎಂದರು. ಅಶೋಕ್ ಮುಂದುವರೆದು, ರಾಜಣ್ಣ ಕುರಿತು ಸರ್ಕಾರ ನಿನ್ನೆಯೇ ಹೇಳಿಕೆ ನೀಡಬೇಕಿತ್ತು, ಮುಖ್ಯಮಂತ್ರಿಗೆ ನೀಡಿದ ರಾಜೀನಾಮೆ ಪತ್ರ ಅಂಗೀಕರಿಸದೆ ಸಂಪುಟದಿಂದ ವಜಾ ಮಾಡಲಾಗಿದೆ, ರಾಹುಲ್ ಗಾಂಧಿ ಮಾಡಿದ್ದ ಮತಗಳ್ಳತನ ಆರೋಪ ಕುರಿತು ಸತ್ಯ ಹೇಳಿದ್ದಕ್ಕೆ ಬಲಿಪಶು ಮಾಡಲಾಗಿದೆ. ಇದು ಆಂತರಿಕ ವಿಚಾರ ಅಲ್ಲ, ಸದನಕ್ಕೆ ವಿಷಯ ತಿಳಿಯಬೇಕು ಎಂದರು.

ಸುರೇಶ್‌ಕುಮಾರ್ ಮಾತನಾಡಿ, ಸದನ ನಡೆಯುವಾಗ ಮಹತ್ವದ ಘಟನೆ ಬಗ್ಗೆ ಮಾಧ್ಯಮದಿಂದ ತಿಳಿದುಕೊಳ್ಳುವುದು ಸಮಂಜಸ ಅಲ್ಲ, ಸರ್ಕಾರ ಮಾಹಿತಿ ನೀಡಬೇಕು ಎಂದರು. ಸಭಾಧ್ಯಕ್ಷರ ಸೂಚನೆಯಂತೆ ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಮಧ್ಯಪ್ರವೇಶಿಸಿ, ಮೊದಲು ಪ್ರಶ್ನೋತ್ತರ ಕಲಾಪ ನಡೆಯಲಿ, ಬಳಿಕ ಸರ್ಕಾರ ಉತ್ತರ ನೀಡಲಿದೆ ಎಂದಾಗ ಸದನ ಪ್ರಶ್ನೋತ್ತರ ಕಲಾಪಕ್ಕೆ ಮರಳಿತು.

ಪರಿಷತ್‌ನಲ್ಲೂ ಪಟ್ಟು: ವಿಧಾನ ಪರಿಷತ್‌ನಲ್ಲಿ ಸದನ ಆರಂಭವಾಗುತ್ತಿದ್ದಂತೆ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ವಿಷಯ ಪ್ರಸ್ತಾಪಿಸಿ, ಸಹಕಾರ ಸಚಿವ ಕೆ.ಎನ್.ರಾಜಣ್ಣ ಸಂಪುಟದಿಂದ ವಜಾಗೊಂಡಿರುವ ಕುರಿತ ರಾಜ್ಯಪಾಲರ ಪತ್ರ ಓದಲು ಮುಂದಾದಾಗ ಆಡಳಿತ ಪಕ್ಷದ ಸಚೇತಕ ಸಲೀಂ ಆಕ್ಷೇಪ ವ್ಯಕ್ತಪಡಿಸಿದರು. ಸಭಾಪತಿ ಬಸವರಾಜ ಹೊರಟ್ಟಿ ಮಧ್ಯಪ್ರವೇಶಿಸಿ, ಪ್ರಶ್ನೋತ್ತರ ಅವಧಿ ನಂತರ ಪ್ರಸ್ತಾಪಿಸಿ ಎಂದಾಗ, ಇದು ತುರ್ತು ವಿಷಯವಾಗಿದೆ, ರಾಜಣ್ಣ ಸಚಿವ ಸ್ಥಾನದಿಂದ ಏಕೆ ವಜಾ ಆದರು ಎಂಬುದನ್ನು ತಿಳಿಸಬೇಕು ಎಂದು ಪಟ್ಟು ಹಿಡಿದರು.

ರವಿಕುಮಾರ್, ಸಿ.ಟಿ.ರವಿ ಸೇರಿದಂತೆ ಇತರ ಸದಸ್ಯರು ಧ್ವನಿಗೂಡಿಸಿದಾಗ, ರಾಜಣ್ಣ ಅವರ ಮೇಲೆ ವಿರೋಧ ಪಕ್ಷದವರಿಗೆ ಯಾವಾಗಿನಿಂದ ಪ್ರೀತಿ ಬಂತು ಎಂದು ಆಡಳಿತ ಸದಸ್ಯರು ವ್ಯಂಗ್ಯವಾಡಿದಾಗ, ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಮಾತಿನ ಚಕಮಕಿ ನಡೆದು ಸದನ ಕಲಾಪವನ್ನು 10 ನಿಮಿಷ ಮುಂದೂಡಲಾಯಿತು.

ಸದನ ಮತ್ತೆ ಸಮಾವೇಶಗೊಳ್ಳುತ್ತಿದ್ದಂತೆ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಮಾತನಾಡಿ, ರಾಜಣ್ಣ ವಜಾಗೊಳಿಸಲು ಕಾರಣವೇನು, ಭ್ರಷ್ಟಾಚಾರದಲ್ಲಿ ತೊಡಗಿಸಿಕೊಂಡಿದ್ದರೆ, ಮುಖ್ಯಮಂತ್ರಿಗಳಿಂದ ಅಥವಾ ಸಭಾನಾಯಕರಿಂದ ಉತ್ತರ ಕೊಡಿಸಿ ಎಂದು ಪಟ್ಟು ಹಿಡಿದರು.

ಸಭಾಪತಿ ಹೊರಟ್ಟಿ ಸಮಜಾಯಿಷಿ ನೀಡಿ, ಸಭಾ ನಾಯಕರು ಸದನಕ್ಕೆ ಬಂದಿಲ್ಲ, ಬಂದ ಬಳಿಕ ಉತ್ತರ ಕೊಡಿಸಲಾಗುವುದು ಎಂಬ ಭರವಸೆಗೆ ವಿಪಕ್ಷ ಸದಸ್ಯರು ಸುಮ್ಮತಿಸಿದಾಗ ಪ್ರಶ್ನೋತ್ತರ ಕಲಾಪ ಕೈಗೆತ್ತಿಕೊಳ್ಳಲಾಯಿತು.

ಅಪರಾಧ ರಾಜಣ್ಣ ಏನು ಮಾಡಿದ್ದರು!

ಬಿಜೆಪಿ ಕೇಂದ್ರದಲ್ಲಿ ಅಕ್ರಮವಾಗಿ ಅಧಿಕಾರಕ್ಕೆ ಬಂದಿದೆ ಎಂಬಂತೆ ದೇಶದ ಜನರ ಮುಂದೆ ಬಿಂಬಿಸಿದರು.

ಮತಗಳ್ಳತನದ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ಕೊಡದೇ ರಾಹುಲ್ ಗಾಂಧಿ ಪಲಾಯನ ಮಾಡಿದ್ದಾರೆ, ಕೆ.ಎನ್.ರಾಜಣ್ಣ ಮತ ಕಳ್ಳತನದ ಸತ್ಯ ಬಹಿರಂಗ ಪಡಿಸಿದ್ದಕ್ಕೆ ಸಂಪುಟದಿಂದ ವಜಾ ಮಾಡಿದ್ದು ಖಂಡಿತ ಸರಿಯಲ್ಲ ಎಂದರು.

ಯಾವ ಯಾವ ಕಾರಣಕ್ಕೆ ಹಿರಿಯ ಸಚಿವ ರಾಜಣ್ಣ ರಾಜೀನಾಮೆ ಪಡೆದುಕೊಂಡಿರಿ ಎಂಬ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಸದನಕ್ಕೆ ತಿಳಿಸಬೇಕು. ತಮ್ಮ ವಿರುದ್ಧದ ಷಡ್ಯಂತ್ರ ಹಾಗೂ ಪಿತೂರಿ ಕುರಿತು ಸಂದರ್ಭ ಬಂದಾಗ ತಿಳಿಸುವುದಾಗಿ ರಾಜಣ್ಣ ಹೇಳಿದ್ದಾರೆ. ಸಂವಿಧಾನದ ಪುಸ್ತಕ ಕೈಯ್ಯಲ್ಲಿ ಹಿಡಿದು ದೇಶಾದ್ಯಂತ ತಿರುಗುವ ರಾಹುಲ್ ಗಾಂಧಿಗೆ ಸತ್ಯ ಅರಗಿಸಿಕೊಳ್ಳುವ, ಕೇಳಿಸಿಕೊಳ್ಳುವ ಧೈರ್ಯ ಇಲ್ಲ.

ಪರಿಶಿಷ್ಟ ಪಂಗಡಕ್ಕೆ ಸೇರಿದ ಸಚಿವರನ್ನು ಕಾಂಗ್ರೆಸ್ ನಡೆಸಿಕೊಳ್ಳುವ ರೀತಿ ಇದು, ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ಉದ್ದುದ್ದ ಭಾಷಣ ಬಿಗಿಯುವ ಕಾಂಗ್ರೆಸ್‌ನವರು, ರಾಜಣ್ಣ ಕುರಿತು ನಡೆದುಕೊಂಡಿರುವುದು ಸರಿಯೇ ಎಂದರು. ಅಲ್ಲದೆ ಧರ್ಮಸ್ಥಳ ವಿಷಯವನ್ನೂ ಸದನದಲ್ಲಿ ಚರ್ಚಿಸಿ ಸರ್ಕಾರದ ಉತ್ತರ ಬಯಸುತ್ತೇವೆ ಎಂದರು.

ಹೇಳಿಕೆ ನೀಡುವವರಿಗೆ 'ಹೈ' ಸಂದೇಶ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ಸಚಿವರುಗಳಿಗೆ ತೀಕ್ಷ್ಣವಾಗಿ ಎಚ್ಚರಿಸಿದ್ದರೂ ತಮ್ಮ ಧಾಟಿಯಿಂದ ಹಿಂದೆ ಸರಿದಿರಲಿಲ್ಲ. ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಯಲ್ಲೇ ಸುದ್ದಿಗೋಷ್ಠಿ ಕರೆದು ಐದು ವರ್ಷ ನಾನೇ ಮುಖ್ಯಮಂತ್ರಿ ಎಂಬುದಾಗಿ ಹೇಳಿಕೆ ನೀಡಿದ್ದರು. ಈ ಎಲ್ಲಾ ಬೆಳವಣಿಗೆಗಳು ಕಾಂಗ್ರೆಸ್ ವರಿಷ್ಠರನ್ನು ಮುಜುಗರಕ್ಕೆ ಸಿಲುಕಿಸಿತ್ತು.

ಮತಗಳ್ಳತನ ವಿಷಯದಲ್ಲಿ ರಾಹುಲ್ ಗಾಂಧಿ ವಿರುದ್ಧವೇ ರಾಜಣ್ಣ ನೀಡಿದ ಹೇಳಿಕೆಯನ್ನು ಬಿಜೆಪಿ ರಾಷ್ಟ್ರವ್ಯಾಪಿ ಅಸ್ತ್ರವಾಗಿ ಬಳಸಿಕೊಂಡಿತು. ಒಡಕು ಮೂಡಿದ್ದ ಇಂಡಿಯಾ ಒಕ್ಕೂಟವನ್ನು ಮತಗಳ್ಳತನ ವಿಷಯ ಪ್ರಸ್ತಾಪಿಸುವ ಮೂಲಕ ಒಗ್ಗೂಡಿಸಲು ರಾಹುಲ್ ಮುಂದಾಳತ್ವ ವಹಿಸಿ, ಸಂಸತ್ ಮುಂದೆ ಪ್ರತಿಭಟನೆ ಮಾಡಿ ಯಶಸ್ವಿಯಾಗಿದ್ದರು. ಈ ವೇಳೆಯೇ ತೃಣಮೂಲ ಕಾಂಗ್ರೆಸ್‌ನ ಕೆಲವು ಸಂಸದರು, ಕರ್ನಾಟಕ ಕಾಂಗ್ರೆಸ್ ಸರ್ಕಾರದ ಸಚಿವರೊಬ್ಬರು ನೀಡಿದ ಹೇಳಿಕೆಯನ್ನು ಬಿಜೆಪಿ ಹೇಗೆ ಬಳಸಿಕೊಳ್ಳುತ್ತಿದೆ ಎಂಬುದನ್ನು ರಾಹುಲ್ ಗಮನಕ್ಕೆ ತಂದರು.

ಅಷ್ಟರೊಳಗೆ ರಾಜಣ್ಣ ವಿರುದ್ಧ ಕ್ರಮಕ್ಕೆ ಖರ್ಗೆ ಹಾಗೂ ವೇಣುಗೋಪಾಲ್ ನಿರ್ಧರಿಸಿ, ರಾಹುಲ್ ಗಮನಕ್ಕೆ ತಂದಾಗ, ಮೊದಲು ಆ ಸಚಿವರನ್ನು ವಜಾ ಮಾಡಿಸಿ, ಕೆಪಿಸಿಸಿಗೂ ಎಚ್ಚರಿಕೆ ನೀಡಿ ಎಂಬ ಸಂದೇಶ ರವಾನಿಸಿದ್ದರು. ರಾಹುಲ್ ಸಂದೇಶ ಮತ್ತು ಎಐಸಿಸಿ ಪತ್ರ ಮುಖ್ಯಮಂತ್ರಿಗೆ ತಲುಪಿತಾದರೂ, ರಾಜಣ್ಣ ಅವರನ್ನು ಸಂಪುಟದಲ್ಲೇ ಉಳಿಸಿಕೊಳ್ಳಲು ವರಿಷ್ಠರ ಮನವೊಲಿಕೆಗೆ ಹರಸಾಹಸ ಮಾಡಿದರು.

ವೇಣುಗೋಪಾಲ್ ಅವರನ್ನು ಸಂಪರ್ಕಿಸಿದಾಗಲೂ ಮುಖ್ಯಮಂತ್ರಿ ಮಾತಿಗೆ ಬೆಲೆ ಸಿಗದೆ, ರಾಹುಲ್ ಜೊತೆಯೇ ದೂರವಾಣಿ ಮೂಲಕ ಮಾತನಾಡಿದಾಗಲೂ, ಸಚಿವರ ರಾಜೀನಾಮೆ ಪಡೆಯಬೇಡಿ, ಮೊದಲು ಸಂಪುಟದಿಂದ ಹೊರಹಾಕಿ ಎಂಬ ಕಠಿಣ ಆದೇಶ ಬಂದಿತು.

ಮುಂದೆ, ಪಕ್ಷ ಮತ್ತು ಸರ್ಕಾರದ ವಿರುದ್ಧ ಮಾತನಾಡುವವರ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಸಿದ್ದರಾಮಯ್ಯ ಅವರಿಗೆ ನೇರವಾಗಿ ಸೂಚಿಸಲಾಯಿತು. ಈ ಬೆಳವಣಿಗೆ ನಂತರ, ರಾಜಣ್ಣ ರಾಜೀನಾಮೆ ಪತ್ರ ನೀಡಿದ್ದರೂ ಅದನ್ನು ಸ್ವೀಕರಿಸದೆ, ಸಂಪುಟದಿಂದ ತಕ್ಷಣ ವಜಾಗೊಳಿಸುವಂತೆ ರಾಜ್ಯಪಾಲರಿಗೆ ಶಿಫಾರಸು ಮಾಡಲಾಯಿತು.

ಕಾರ್ಯ ಈ ವಾರವೇ ಶುರು

ಆವರಣದಲ್ಲಿಯೇ ಅನಾವರಣಗೊಂಡಿರುವ ಗ್ಲೋ ಗಾರ್ಡನ್ ಅನ್ನು ವಿದ್ಯುತ್ ಸೌಂದರ್ಯೀಕರಣದ ಅಡಿಯಲ್ಲಿ ಪ್ರಕಾಶಿಸಲಾಗುವುದು ಎಂದು ತಿಳಿಸಿದರು. ಹಗಲಿನಲ್ಲಿ ಪಾಲಿಕೆ ಕಟ್ಟಡವು ಹಸಿರಿನ ನಡುವೆ ಆಕರ್ಷಣೀಯವಾಗಿದ್ದರೆ, ರಾತ್ರಿ ವೇಳೆ ಪ್ರಜ್ವಲಿಸುವ ದೃಶ್ಯವಾಗಿ ರೂಪಾಂತರಗೊಳ್ಳುತ್ತದೆ. ಜೀವಂತವಾಗಿರುವಂತೆ ಕಾಣುವ ಆನೆಗಳು, ಜಿಂಕೆಗಳು, ಮೊಲಗಳು ಮತ್ತು ಅಳಿಲುಗಳ ಕಲರವ ನೋಡಬಹುದಾಗಿದೆ. ರೋಮಾಂಚಕ ಉದ್ಯಾನವು ಸಸ್ಯ ಮತ್ತು ಪ್ರಕಾಶಿತ ಪ್ರಾಣಿಗಳ ಬೆರಗುಗೊಳಿಸುವ ಮಿಶ್ರಣವನ್ನು ಮೆಚ್ಚಿಸಲು ವಿರಾಮಗೊಳಿಸುವ ಕುತೂಹಲಕಾರಿ ಸಂದರ್ಶಕರು, ಕುಟುಂಬಗಳು ಮತ್ತು ಪ್ರವಾಸಿಗರಿಗೆ ವೇಗವಾಗಿ ಮ್ಯಾಗ್ನೆಟ್ ಆಗುತ್ತಿದೆ. ಪ್ರವಾಸಿ ಆಕರ್ಷಣೆಯಾಗಲು ಕಟ್ಟಡಗಳನ್ನು ಶಾಶ್ವತವಾಗಿ ಬೆಳಗಿಸಲು ಪ್ರಯತ್ನಿಸಲಾಗುವುದು ಎಂದರು.

ದಸರಾ ಸಂದರ್ಭದಲ್ಲಿ ಪಾಲಿಕೆಯ 18 ಉದ್ಯಾನವನಗಳು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸಲಿವೆ. ಉದ್ಯಾನವನದಲ್ಲಿ ಮರುಬಳಕೆಯ ತ್ಯಾಜ್ಯವನ್ನು ಬಳಸಿಕೊಂಡು ದೈತ್ಯ ಸೈನ್‌ಬೋರ್ಡ್ 'ನಮ್ಮ ಮೈಸೂರು' ಅನ್ನು ಸಿದ್ಧಪಡಿಸಲಾಗುತ್ತದೆ. ತ್ಯಾಜ್ಯ ಮತ್ತು ಬಿಸಾಡಿದ ತ್ಯಾಜ್ಯವನ್ನು ಬಳಸಿ, ನಮ್ಮ ಮೈಸೂರು ಸೂಚನಾ ಫಲಕವನ್ನು ನಿರ್ಮಿಸಲಾಗುವುದು. ಜನ ಸಂದಣಿ ಸ್ಥಳಗಳಲ್ಲಿ ಈ ಸೈನ್ ಬೋರ್ಡ್‌ಗಳನ್ನು ಅಳವಡಿಸಲಾಗುವುದು. ಮೈಸೂರು ನಗರದಲ್ಲಿ ಸೈನ್ ಬೋರ್ಡ್ ಖಾಯಂ ಆಗಲಿದ್ದು, ದಸರಾ ನಂತರವೂ ಸಂದೇಶ ಸಾರುತ್ತಲೇ ಇರುತ್ತದೆ ಎಂದು ಹೇಳಿದರು

ಪಾಲಿಕೆ ಹಣ ಬಳಕೆ: ಪಾಲಿಕೆ ನಿಧಿಯಲ್ಲಿ 10 ಕೋಟಿ ರೂ.ಬಳಕೆ ಮಾಡಲಿದ್ದು, ಸರ್ಕಾರದ ಅನುದಾನ ಬಂದರೆ ಸರಿದೂಗಿಸಿಕೊಳ್ಳಲಾಗುವುದು. ಮೊದಲು ಎಂಸಿಸಿ ಹಣ ಬಳಸುತ್ತೇವೆ, ನಂತರ ಸರ್ಕಾರ ಅನುದಾನ ಬಿಡುಗಡೆ ಮಾಡಿದರೆ ಆ ಕೊರತೆ ತುಂಬಲಾಗುವುದು ಎಂದು ಆಯುಕ್ತರು ತಿಳಿಸಿದರು.

ನಿರ್ದಾಕ್ಷಿಣ್ಯ ತೆರವು

ತಡೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1960ರ ಕಲಂ 17(4)ರ ಅಡಿ ಅಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ. ಅಕ್ರಮ ನಿರ್ಮಾಣ ತಡೆಗಟ್ಟಲು ವಿಫಲರಾಗುವ ಅಧಿಕಾರಿಗಳಿಗೆ ದಂಡ ವಿಧಿಸುವ ಅಥವಾ ಅಮಾನತು ಮಾಡುವ ಇಲ್ಲವೇ ಕೆಲಸದಿಂದಲೇ ವಜಾ ಮಾಡುವ ಅಧಿಕಾರ ಸರ್ಕಾರಕ್ಕಿದೆ ಎಂದರು. ಹಲವು ನಗರ ಪ್ರದೇಶಗಳಲ್ಲಿ ಬಡವರಿಗೆ ನಿವೇಶನ ಹಂಚಿಕೆ ಕುರಿತು ಯೋಜನೆ ರೂಪಿಸಲಾಗುತ್ತಿದೆ. ಭೂಮಾಲೀಕರಿಗೆ ಶೇ.50 ಮತ್ತು ನಿವೇಶನಗಳಾಗಿ ಶೇ.50 ರಷ್ಟು ಪ್ರದೇಶ ಮೀಸಲಿಟ್ಟು ನಿವೇಶನಗಳ ಹಂಚಿಕೆ ಮಾಡಲಾಗುತ್ತದೆ ಎಂದರು.

ಮೈಸೂರನ್ನು ಮಾದಕ ವಸ್ತು ಮುಕ್ತ ನಗರವನ್ನಾಗಿಸಲು ಪೊಲೀಸರ ಪ್ರದೇಶವಾರು ಪ್ರಬಲ ಕಾರ್ಯಾಚರಣೆ

ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾಹಿತಿ

- 250 ಮಾದಕ ದ್ರವ್ಯ ಸೇವನೆ, 15 ನಿಯಮಿತ ಪ್ರಕರಣ ದಾಖಲು
- ಪಿ.ಜಿ., ಹಾಸ್ಟೆಲ್ ಸೇರಿ ಹಲವು ಸ್ಥಳಗಳಲ್ಲಿ ತಪಾಸಣೆ
- 11 ಕೆ.ಜಿ. ಗಾಂಜಾ, 49 ಸಿಂಥೆಟಿಕ್ಸ್ ಡ್ರಗ್ಸ್ ವಶಕ್ಕೆ
- 1,149 ಶಂಕಿತರ ವಿಚಾರಣೆ



ಮೈಸೂರನ್ನು ಮಾದಕ ವಸ್ತು ಮುಕ್ತ ನಗರವನ್ನಾಗಿಸಲು ಪೊಲೀಸರು ಪ್ರದೇಶವಾರು ಕಾರ್ಯಾಚರಣೆ ನಡೆಸುತ್ತಿರುವುದು.

ಮೈಸೂರು, ಆ.12(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರನ್ನು ಮಾದಕ ವಸ್ತು ಮುಕ್ತ ನಗರವನ್ನಾಗಿ ಮಾಡಲು ಪೊಲೀಸರು ನಗರದಲ್ಲಿ ಪ್ರದೇಶವಾರು ಪ್ರಬಲ ಕಾರ್ಯಾಚರಣೆ (ಏರಿಯಾ ಡಾಮಿನೇಷನ್ ಡ್ರೈವ್) ನಡೆಸುತ್ತಿದ್ದಾರೆ.

ಮೈಸೂರಿನ ಬೆಲವತ್ತ ರಿಂಗ್ ರಸ್ತೆಯಲ್ಲಿ ಡ್ರಗ್ಸ್ ತಯಾರಿಕಾ ಘಟಕ ಪತ್ತೆಯಾದ ನಂತರ ಮೈಸೂರು ಪೊಲೀಸರು ಡ್ರಗ್ಸ್ ವಿರುದ್ಧ ಸಮರ ಸಾರಿದ್ದಾರೆ. ಮೈಸೂರನ್ನು ಡ್ರಗ್ಸ್ ಮುಕ್ತ ನಗರವನ್ನಾಗಿಸಲು ಡ್ರಗ್ಸ್ ಮಾರಾಟಗಾರರು ಹಾಗೂ ಬಳಕೆದಾರರ ವಿರುದ್ಧ ನಿರಂತರ ಕಾರ್ಯಾಚರಣೆ ನಡೆಸಲಾಗುತ್ತಿದೆ. ಮಂಡಿ ಮೊಹಲ್ಲಾ, ಉದಯಗಿರಿ, ಸುನ್ನಿ ಚೌಕ, ಮಟನ್‌ಸ್ಟಾಲ್ ರಸ್ತೆ, ಕೆಸರೆ, ಹುಡ್ಕೊ ನಗರ ಹಾಗೂ ನರಸಿಂಹರಾಜ ಪೊಲೀಸ್ ಠಾಣೆ ವ್ಯಾಪ್ತಿಯ ಬಡಾವಣೆಗಳಲ್ಲಿ ಪ್ರದೇಶವಾರು ಕಾರ್ಯಾಚರಣೆ ನಡೆಸಿದ್ದಾರೆ. ಡ್ರಗ್ಸ್ ವಿರುದ್ಧ ಪೊಲೀಸ್ ಇಲಾಖೆ ಕೈಗೊಂಡಿರುವ ಕಾರ್ಯಾಚರಣೆ ಬಗ್ಗೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು, ಜುಲೈ 27ರಿಂದ 250 ಮಾದಕ ದ್ರವ್ಯ ಸೇವನೆ ಪ್ರಕರಣ ಹಾಗೂ 15 ನಿಯಮಿತ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದರು.

ಜೊತೆಗೆ 11 ಕೆ.ಜಿ. ಗಾಂಜಾ ಮತ್ತು 49 ಸಿಂಥೆಟಿಕ್ಸ್ ಡ್ರಗ್ಸ್ ವಶಪಡಿಸಿಕೊಳ್ಳಲಾಗಿದೆ. ಇಲ್ಲಿಯವರೆಗೆ 1,149 ಶಂಕಿತರನ್ನು ವಿಚಾರಣೆಗೊಳಪಡಿಸಲಾಗಿದೆ. ಪೇಯಿಂಗ್ ಗೆಸ್ಟ್ (ಪಿಜಿ) ಹೌಸ್, ಹಾಸ್ಟೆಲ್‌ಗಳು ಮತ್ತು ಹೊರ ರಾಜ್ಯದ ವಾಸ್ತವ್ಯ ಹೂಡಿರುವ ನಿವಾಸಗಳಲ್ಲಿ ತಪಾಸಣೆ ನಡೆಸಲಾಗುತ್ತಿದ್ದು, ಈ ಕಾರ್ಯಾಚರಣೆ ಮುಂದುವರೆದಿದೆ ಎಂದು ಅಂಕಿ ಅಂಶ ಸಹಿತ ಮಾಹಿತಿ ನೀಡಿದರು.

ಮಂಡಿ ಮೊಹಲ್ಲಾ ಹಾಗೂ ಮೈಸೂರಿನ ಉತ್ತರ ಭಾಗದ ವ್ಯಾಪ್ತಿಯಲ್ಲಿ ಶಂಕಿತರ ಮನೆಗಳು, ಟೀ ಅಂಗಡಿ, ಮೆಡಿಕಲ್ ಶಾಪ್ ಹಾಗೂ ಇತರೆ ಸ್ಥಳಗಳ ಮೇಲೆ ದಾಳಿಯನ್ನು ತೀವ್ರಗೊಳಿಸಲಾಗಿದೆ. ಈ ಮೂಲಕ ಮೈಸೂರನ್ನು ಮಾದಕ ವಸ್ತು ಮುಕ್ತ ನಗರವನ್ನಾಗಿ ಮಾಡುವವರೆಗೆ ಕಾರ್ಯಾಚರಣೆ ಮುಂದುವರೆಯಲಿದೆ ಎಂದು ಸೀಮಾ ಲಾಟ್ಕರ್ ತಿಳಿಸಿದರು.

ಡಿಸಿಪಿಗಳಾದ ಆರ್.ಎನ್. ಬಿಂದುಮಣಿ, ಎಸ್.ಸುಂದರ್ ರಾಜ್ ಹಾಗೂ ಎಲ್ಲಾ ಉಪ ವಿಭಾಗಗಳ ಎಸಿಪಿಗಳು ಕಾರ್ಯಾಚರಣೆಯ ನೇತೃತ್ವ ವಹಿಸಿದ್ದಾರೆ.

ಡಿಪ್ಲೊಮಾ ಮರು ಪರೀಕ್ಷೆಯಲ್ಲಿ ಪಾಸ್ ಆದವರಿಗೂ ಡಿಸಿಇಟಿಯಲ್ಲಿ ಸೀಟು

ಬೆಂಗಳೂರು, ಆ.12– ಪ್ರಸಕ್ತ ಸಾಲಿನ ಮರು ಪರೀಕ್ಷೆಯಲ್ಲಿ(ಮೇಕ್ ಅಪ್) ಅರ್ಹತೆ ಪಡೆದ ಡಿಪ್ಲೊಮಾ ಅಭ್ಯರ್ಥಿ ಗಳಿಗೆ ರ್‍ಯಾಂಕ್ ನೀಡಿ, ಡಿಸಿಇಟಿ ಅಂತಿಮ ಹಂತದ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್.ಪ್ರಸನ್ನ ತಿಳಿಸಿದ್ದಾರೆ.

ಮರು ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳ ಅಂಕಗಳ ವಿವರಗಳನ್ನು ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಪಡೆದು, ಆಗಸ್ಟ್ 13ರಂದು ರ್‍ಯಾಂಕ್ ನೀಡಲಾಗುವುದು ಎಂದಿದ್ದಾರೆ. ಇವರು ಸೇರಿದಂತೆ ಇದುವರೆಗೂ ದಾಖಲೆ ಪರಿಶೀಲನೆ ಮಾಡಿಕೊಳ್ಳದ ಅಭ್ಯರ್ಥಿಗಳು ಮೂಲ ದಾಖಲೆಗಳ ಸಮೇತ ಆ.14ರ ಮಧ್ಯಾಹ್ನ 2.30ರೊಳಗೆ ಕೆಇಎಯಲ್ಲಿ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಬ್ಯಾಂಕ್ ಆಫ್ ಬರೋಡಾ ಲಾಕರ್‌ನಲ್ಲಿಟ್ಟಿದ್ದ ಚಿನ್ನದ ನಾಣ್ಯಗಳಲ್ಲಿ ಅರ್ಧಕರ್ಧ ಮಂಗಮಾಯ!

ಪೊಲೀಸರಿಗೆ ಮಹಿಳೆ ದೂರು

ಮೈಸೂರು, ಆ.12– ಬ್ಯಾಂಕ್ ಲಾಕರ್‌ನಲ್ಲಿಟ್ಟಿದ್ದ ಲಕ್ಷಾಂತರ ರೂ. ಚಿನ್ನದ ನಾಣ್ಯಗಳು ನಾಪತ್ತೆಯಾಗಿರುವುದಾಗಿ ಮಹಿಳೆಯೊಬ್ಬರು ಪೊಲೀಸ್ ಠಾಣೆಗೆ ದೂರು ನೀಡಿರುವ ಪ್ರಕರಣ ಮೈಸೂರಿನಲ್ಲಿ ವರದಿಯಾಗಿದೆ.

ಮೈಸೂರಿನ ಲಿಂಗಾಂಬುದಿಪಾಳ್ಯ ನಿವಾಸಿ ರುಕ್ಮಿಣಿ ಅವರು ಲಾಕರ್‌ನಲ್ಲಿಟ್ಟಿದ್ದ ಒಂದು ಕೆಜಿ ಚಿನ್ನದ ನಾಣ್ಯಗಳಲ್ಲಿ ಅರ್ಧದಷ್ಟು ಕಡಿಮೆಯಾಗಿದೆ ಎಂದು ಕುವೆಂಪು ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಈ ಸಂಬಂಧ ಬ್ಯಾಂಕ್ ಆಫ್ ಬರೋಡಾ ಕುವೆಂಪುನಗರ ಶಾಖೆಯ ಮ್ಯಾನೇಜರ್ ಹಾಗೂ ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ದೂರಿನಲ್ಲಿರುವುದು: ಮೊದಲು ಬ್ಯಾಂಕ್ ಆಫ್ ಬರೋಡಾ ಕೊಯಮತ್ತೂರಿನ ಶಾಖೆಯ ಲಾಕರ್‌ನಲ್ಲಿ ಚಿನ್ನದ ಆಭರಣ ಹಾಗೂ ನಾಣ್ಯಗಳನ್ನು ಇಟ್ಟಿದ್ದೆ. ನಂತರ ಮೈಸೂರಿನ ಪಂಚಮಂತ್ರ ರಸ್ತೆಯಲ್ಲಿರುವ ಕುವೆಂಪು ನಗರ ಶಾಖೆಯ ಲಾಕರ್‌ಗೆ ವರ್ಗಾವಣೆ ಪಡೆದುಕೊಂಡೆ. ಆ ವೇಳೆ ಬ್ಯಾಂಕ್ ಮ್ಯಾನೇಜರ್ ನಿಮ್ಮ ಚಿನ್ನದ ನಾಣ್ಯಗಳನ್ನು ಸುರಕ್ಷಿತವಾಗಿ ಲಾಕರ್‌ನಲ್ಲಿ ಇಟ್ಟುಕೊಳ್ಳುವುದಾಗಿ ಹೇಳಿ ಅಗ್ರಿಮೆಂಟ್ ಮಾಡಿಕೊಂಡಿದ್ದರಿಂದ ಸುಮಾರು 1 ಕೆಜಿ ಚಿನ್ನದ ನಾಣ್ಯವನ್ನು 2023ರ ಏಪ್ರಿಲ್ 10ರಂದು ಲಾಕರ್‌ನಲ್ಲಿಟ್ಟಿದ್ದೆ. 2024ರ ಡಿಸೆಂಬರ್ 18ರಂದು ಲಾಕರ್ ಪರಿಶೀಲಿಸಿದಾಗ ಚಿನ್ನದ ನಾಣ್ಯ ಕಡಿಮೆಯಾಗಿರುವಂತೆ ಕಾಣಿಸಿತು. ಅನುಮಾನಗೊಂಡು ವಿಚಾರಿಸಿದಾಗ ಬ್ಯಾಂಕ್ ಸಿಬ್ಬಂದಿ ಸ್ಪಷ್ಟ ಮಾಹಿತಿ ನೀಡಲಿಲ್ಲ. ಪ್ರಸಕ್ತ ವರ್ಷದ ಮಾ.3ರಂದು ಲಾಕರ್‌ನಲ್ಲಿದ್ದ ನಾಣ್ಯಗಳ ತೂಕ ಮಾಡಿಸಿದಾಗ 550 ಗ್ರಾಂ 905 ಮಿಲಿ ಇತ್ತು. ಬಳಿಕ ಮೇ 9ರಂದು ಪರಿಶೀಲಿಸಿದಾಗ 492 ಗ್ರಾಂ 988 ಮಿಲಿ ಚಿನ್ನದ ನಾಣ್ಯಗಳಿದ್ದವು. ಬ್ಯಾಂಕ್ ಲಾಕರ್ ರಿಜಿಸ್ಟರ್‌ನಲ್ಲಿದ್ದ ನನ್ನ ಫೋಟೊ ಬದಲಾಯಿಸಿ, ಅದರ ಮೇಲೆ ಸೀಲ್ ಹಾಕಲಾಗಿದೆ. ಲಾಕರ್‌ನಲ್ಲಿದ್ದ ನಾಣ್ಯಗಳಲ್ಲಿ ಸುಮಾರು 500 ಗ್ರಾಂ ಚಿನ್ನದ ನಾಣ್ಯ ನಾಪತ್ತೆಯಾಗಿರುವ ಬಗ್ಗೆ ಈವರೆಗೂ ಮಾಹಿತಿ ನೀಡಿಲ್ಲ ಎಂದು ಮಹಿಳೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ

90 ದಿನದ ದಸರಾ ವಸ್ತುಪ್ರದರ್ಶನ ಟೆಂಡರ್ 11.54 ಕೋಟಿಗೆ ಫನ್‌ವರ್ಲ್ಡ್ ಪಾಲು

● ಸೆ.22ರಿಂದಲೇ ಪೂರ್ಣ ಪ್ರಮಾಣದ ವಸ್ತುಪ್ರದರ್ಶನ ಆರಂಭ ● ಅತ್ಯುತ್ತಮ ಮನರಂಜನಾ ಉಪಕರಣ ಅಳವಡಿಕೆಗೆ ಸೂಚನೆ

● ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಆ.12–ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ 90 ದಿನಗಳ ಕಾಲ ನಡೆಯುವ ಸುದೀರ್ಘ ಅವಧಿಯ ಮನರಂಜನಾ ಕಾರ್ಯಕ್ರಮವಾದ ದಸರಾ ವಸ್ತುಪ್ರದರ್ಶನದ ಆಯೋಜನೆಯ ಜವಾಬ್ದಾರಿ ಫನ್ ವರ್ಲ್ಡ್ ಸಂಸ್ಥೆ ಪಾಲಾಗಿದ್ದು, 11.54 ಕೋಟಿ ರೂ. ಮೊತ್ತಕ್ಕೆ ಈ ಬಾರಿ ಟೆಂಡರ್ ಬಿಕರಿಯಾಗಿದೆ.

ಪ್ರತಿ ವರ್ಷದಂತೆ ಈ ಬಾರಿಯೂ ಗ್ಲೋಬಲ್ ಟೆಂಡರ್ ಕರೆಯಲಾಗಿತ್ತು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದಿತ್ತು. ಈ ಬಾರಿ ಪ್ರಾಧಿಕಾರವು 11 ಕೋಟಿ 50 ಲಕ್ಷ ರೂ. ಮೊತ್ತವನ್ನು ಕೋಟ್ ಮಾಡಿತ್ತು. ಇದರಿಂದ ಟೆಂಡರ್ ಪ್ರಕ್ರಿಯೆಯಲ್ಲಿ ಎರಡು ಸಂಸ್ಥೆಗಳು ಮಾತ್ರ ಪಾಲ್ಗೊಂಡಿದ್ದವು. ಇಂದು ಸಂಜೆ ನಿಯಮಾನುಸಾರ ಫೈನಾನ್ಷಿಯಲ್ ಬಿಡ್ ತೆರೆದಾಗ 11.54 ಕೋಟಿ ರೂ.ಗೆ ಟೆಂಡರ್ ಮೊತ್ತ ದಾಖಲಿಸಿದ್ದ ಫನ್ ವರ್ಲ್ಡ್ ಸಂಸ್ಥೆಗೆ ಪ್ರಸಕ್ತ ಸಾಲಿನ ದಸರಾವಸ್ತು ಪ್ರದರ್ಶನದ ಟೆಂಡರ್ ಒಲಿದಿದೆ. ಟೆಂಡರ್‌ನಲ್ಲಿ ಪಾಲ್ಗೊಂಡಿದ್ದ ಮತ್ತೊಂದು ಸಂಸ್ಥೆ 11.50 ಕೋಟಿ ರೂ. ಮೊತ್ತಕ್ಕೆ ಅರ್ಜಿ ಸಲ್ಲಿಸಿತ್ತು.



ಒಂದೂವರೆ ಕೋಟಿ ಹೆಚ್ಚು: ಕಳೆದ ವರ್ಷ ವಸ್ತು ಪ್ರದರ್ಶನ ಪ್ರಾಧಿಕಾರವು 9.67 ಕೋಟಿ ರೂ ಟೆಂಡರ್ ಮೊತ್ತ ನಿಗದಿ ಮಾಡಿತ್ತು. ಆದರೆ, 10.03 ಕೋಟಿ ರೂ.ಗೆ ಫನ್ ವರ್ಲ್ಡ್ ಸಂಸ್ಥೆ ಟೆಂಡರ್ ಪಡೆದಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ದಸರಾ ವಸ್ತುಪ್ರದರ್ಶನದ ಟೆಂಡರ್ ಮೊತ್ತದಲ್ಲಿ 1.51 ಕೋಟಿ ರೂ. ಹೆಚ್ಚಾಗಿದೆ.

ಏನೇನು: 11.54 ಕೋಟಿ ರೂ ಮೊತ್ತಕ್ಕೆ ಟೆಂಡರ್ ಪಡೆದಿರುವ ಫನ್ ವರ್ಲ್ಡ್ ಸಂಸ್ಥೆಗೆ ವಸ್ತು ಪ್ರದರ್ಶನಕ್ಕೆ ಬರುವ ಪ್ರವಾಸಿಗರಿಂದ ಪ್ರವೇಶ ಶುಲ್ಕ, ವಾಹನ ನಿಲುಗಡೆ ಶುಲ್ಕ ಸಂಗ್ರಹದೊಂದಿಗೆ ದಸರಾ ವಸ್ತು ಪ್ರದರ್ಶನದ ಆವರಣದಲ್ಲಿರುವ ಎ ಬ್ಲಾಕ್ ವಾಣಿಜ್ಯ ಮಳಿಗೆ, ಅಮ್ಯೂಸ್‌ಮೆಂಟ್ ಪಾರ್ಕ್, ಆಹಾರ ಮಳಿಗೆಗಳ ಜವಾಬಾರಿ ನೀಡಲಾಗುತ್ತದೆ. ವಸ್ತು ಪ್ರದರ್ಶನದ ಒಳಗಿನ ಮಳಿಗೆಗಳ ಬಾಡಿಗೆ ಟೆಂಡರ್ ಪಡೆದ ಸಂಸ್ಥೆ ಪಡೆಯಲಿದೆ.

ಪ್ರಾಧಿಕಾರದ ವತಿಯಿಂದ ವಿವಿಧ ಜಿಲ್ಲಾ ಪಂಚಾಯ್ತಿ ವತಿಯಿಂದ ಸರ್ಕಾರಿ ಮಳಿಗೆಗಳು, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗುತ್ತದೆ. ಸೆಪ್ಟೆಂಬರ್ 22ರಿಂದ ಅಧಿಕೃತವಾಗಿ ಆರಂಭವಾಗುವ ದಸರಾ ವಸ್ತು ಪ್ರದರ್ಶನ 90 ದಿನ ನಡೆಯಲಿದ್ದು, ಡಿಸೆಂಬರ್ ಎರಡನೇ ವಾರದವರೆಗೂ ಮೈಸೂರಿಗೆ ಬರುವ ಪ್ರವಾಸಿಗರಿಗೆ ಮನರಂಜನೆ ನೀಡಲಿದೆ.

ಟೆಂಡರ್ ಅಪ್ರೂವಲ್ ನಂತರ ಒಪ್ಪಂದ: ಹಣಕಾಸು ವಿಭಾಗದ ಟೆಂಡರ್‌ನಲ್ಲಿ ದಸರಾ ವಸ್ತು ಪ್ರದರ್ಶನದ ಟೆಂಡರ್ ಫನ್‌ವರ್ಲ್ಡ್ ಸಂಸ್ಥೆ ಪಾಲಾಗಿದ್ದು, ಅದನ್ನು ಅಪ್ರೂವಲ್‌ಗಾಗಿ ಸರ್ಕಾರಕ್ಕೆ ಕಳುಹಿಸಲಾಗುತ್ತದೆ. ಸರ್ಕಾರದಿಂದ ಸಮ್ಮತಿ ಸಿಕ್ಕ ಬಳಿಕ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಹಾಗೂ ಟೆಂಡರ್ ಪಡೆದ ಸಂಸ್ಥೆ ನಡುವೆ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಆ ನಂತರವಷ್ಟೇ ವರ್ಕ್ ಆರ್ಡರ್ ನೀಡಲಾಗುತ್ತದೆ.

ಟೆಂಡರ್ ಪಡೆದ ಸಂಸ್ಥೆ ನಿಯಮಾವಳಿಯಂತೆ ಕೆಲವು ಷರತ್ತು ಪಾಲಿಸಬೇಕಾಗುತ್ತದೆ. ಅಮ್ಯೂಸ್‌ಮೆಂಟ್ ಪಾರ್ಕ್‌ನಲ್ಲಿ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಆಟಿಕೆಗಳ ಅಳವಡಿಕೆಯಲ್ಲಿ ಸುರಕ್ಷತೆಯ ಪ್ರಮಾಣ ಪತ್ರ ಇರಬೇಕು. ಆಹಾರ ಮಳಿಗೆಗಳ ವಿಭಾಗದಲ್ಲಿ ಸ್ವಚ್ಛತೆ ಕಾಪಾಡಬೇಕು. ಆಹಾರ ಪದಾರ್ಥಗಳು ಶುಚಿಯಾಗಿರುವಂತೆ ನೋಡಿಕೊಳ್ಳುವುದು. ಪ್ರವಾಸಿಗರಿಂದ ನಿಗದಿತ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕ ಸಂಗ್ರಹಿಸಬಾರದು. ಪಾರ್ಕಿಂಗ್ ಶುಲ್ಕವೂ ನಿಗದಿತ ದರದಲ್ಲಿಯೇ ಸಂಗ್ರಹಿಸುವುದು ಸೇರಿದಂತೆ ಇನ್ನಿತರ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚನೆ ನೀಡಲಾಗಿದೆ.

ಮನರಂಜನಾ ತಾಣವಾಗಲಿದೆ

“ದಸರಾ ವಸ್ತುಪ್ರದರ್ಶನ ಈ ಬಾರಿ ಪ್ರವಾಸಿಗರಿಗೆ ಆಕರ್ಷಕ ಅನುಭವ ನೀಡಲಿದೆ. ಈ ಬಾರಿ 11.54 ಕೋಟಿ ರೂ.ಗೆ ಟೆಂಡರ್ ನೀಡಲಾಗಿದೆ. ಈಗಾಗಲೇ ಬೇಲೂರು, ಹಳೆಬೀಡು ಶೈಲಿಯಲ್ಲಿ ಎ ಬ್ಲಾಕ್ ಮಳಿಗೆಗಳ ನಿರ್ಮಾಣ ಕಾರ್ಯ ಬಿರುಸಾಗಿ ನಡೆಯುತ್ತಿದೆ. ಸೆ.22ರಿಂದಲೇ ಪೂರ್ಣ ಪ್ರಮಾಣದಲ್ಲಿ ವಸ್ತುಪ್ರದರ್ಶನ ಆರಂಭಗೊಳ್ಳಲಿದೆ. ಸರ್ಕಾರಿ ಮಳಿಗೆಗಳನ್ನು ನಿಗದಿ ಅವಧಿಯಲ್ಲಿಯೇ ನಿರ್ಮಿಸುವಂತೆ ಎಲ್ಲಾ ಜಿ.ಪಂ.ಗಳಿಗೆ ಪತ್ರ ಬರೆಯಲಾಗಿದೆ.

–ಅಯೂಬ್ ಖಾನ್, ಅಧ್ಯಕ್ಷರು, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ

ಅಪ್ರೂವಲ್ ನಂತರ ವರ್ಕ್ ಆರ್ಡರ್

“ಪ್ರಸಕ್ತ ಸಾಲಿನ ದಸರಾ ವಸ್ತು ಪ್ರದರ್ಶನ ಟೆಂಡರ್ ಪ್ರಕ್ರಿಯೆಯಲ್ಲಿ ಫನ್‌ವರ್ಲ್ಡ್ ಸಂಸ್ಥೆ ಸೇರಿದಂತೆ ಎರಡು ಸಂಸ್ಥೆ ಪಾಲ್ಗೊಂಡಿತ್ತು. ಪ್ರಾಧಿಕಾರವು ಈ ಸಾಲಿನ ಟೆಂಡರ್ ಮೊತ್ತವನ್ನು 11.50 ಕೋಟಿಗೆ ನಿಗದಿ ಮಾಡಿತ್ತು. ಆದರೆ ಫನ್‌ವರ್ಲ್ಡ್ ಸಂಸ್ಥೆ 11.54 ಕೋಟಿ ರೂ. ನಮೂದು ಮಾಡಿ, ನಿಯಮಾನುಸಾರ ಟೆಂಡರ್ ಪಡೆದಿದೆ. ಟೆಂಡರ್ ಅಪ್ರೂವಲ್ ಆದ ಬಳಿಕ ವರ್ಕ್ ಆರ್ಡರ್ ನೀಡಲಾಗುತ್ತದೆ.

–ರುದ್ರೇಶ್, ಸಿಇಓ ವಸ್ತುಪ್ರದರ್ಶನ ಪ್ರಾಧಿಕಾರ

ಗರಡಿ ಮನೆಗಳಲ್ಲಿ ಅಂಬಾತಾಯಿ ಪೂಜೆ



ಮೈಸೂರಿನ ಶ್ರೀ ಜಯಚಾಮರಾಜ ಒಡೆಯರ್ ಕುಸ್ತಿ ಅಖಾಡದಲ್ಲಿ ಅಂಬಾತಾಯಿ ಪೂಜೆ ನೆರವೇರಿಸಲಾಯಿತು.

ಮೈಸೂರು, ಆ.12(ಎಂಕೆ)– ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ಗರಡಿ ಮನೆಗಳಲ್ಲಿ ಅಂಬಾತಾಯಿ ಪೂಜೆ ನೆರವೇರಿಸಿ, ಕಸರತ್ತಿಗೆ ಸಿದ್ಧತೆ ನಡೆಸಲಾಗುತ್ತಿದೆ.

ಪೈಲ್ವಾನರ ಕರ್ಮಸ್ಥಾನವಾದ ಗರಡಿ ಮನೆಗಳಲ್ಲಿರುವ ಅಖಾಡವನ್ನು ಅರಿಶಿನ–ಕುಂಕುಮ ಹಾಗೂ ಹೂವುಗಳಿಂದ ಅಲಂಕರಿಸಿ, ಕಸರತ್ತು ನಡೆಸುವ ಪರಿಕರಗಳನ್ನು ಶುಚಿಗೊಳಿಸಿ, ನೆರೆ–ಹೊರೆಯ ಗರಡಿ ಮನೆಗಳ ಪೈಲ್ವಾನರಿಗೂ ಆಹ್ವಾನ ನೀಡಿ ಅಂಬಾತಾಯಿ(ಅಖಾಡಕ್ಕೆ)ಗೆ ಶ್ರದ್ಧಾ–ಭಕ್ತಿಯಿಂದ ಪೂಜೆ ಸಲ್ಲಿಸಲಾಗುತ್ತಿದೆ.

ಜಟ್ಟಿಗಳ ಕಸರತ್ತಿಗೆ ಸಿದ್ಧತೆ

ನಗರದ ದೊಡ್ಡಕೆರೆ ಮೈದಾನದಲ್ಲಿರುವ ಶ್ರೀ ಜಯಚಾಮರಾಜ ಒಡೆಯರ್ ಕುಸ್ತಿ ಅಖಾಡದಲ್ಲಿ ಚಾಮುಂಡಿ ಬೆಟ್ಟದಿಂದ ತಂದಿದ್ದ ಮಟ್ಟಿಯನ್ನು ಅಲಂಕರಿಸಿ, ಹಿರಿಯ ಪೈಲ್ವಾನರ ಸಮ್ಮುಖದಲ್ಲಿ ಅಂಬಾತಾಯಿ ಪೂಜೆ ನೆರವೇರಿಸಿ, ಕುಸ್ತಿ ಅಭ್ಯಾಸಕ್ಕೆ ಚಾಲನೆ ನೀಡಲಾಯಿತು. ಹಾಗೆಯೇ ಮಂಚೇಗೌಡನ ಕೊಪ್ಪಲು, ಕೆಜಿ ಕೊಪ್ಪಲು, ಪಡುವಾರಹಳ್ಳಿ, ಕ್ಯಾತಮಾರನಹಳ್ಳಿ ಸೇರಿದಂತೆ ಹಲವು ಗರಡಿ ಮನೆಗಳಲ್ಲಿ ಅಂಬಾತಾಯಿ ಪೂಜೆ ನಡೆಸಲಾಗುತ್ತಿದೆ. ಮಂಚೇಗೌಡನ ಕೊಪ್ಪಲು ಗರಡಿ ಮನೆಯಲ್ಲಿ ನಡೆದ ಅಂಬಾತಾಯಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಾಸಕ ಜಿ.ಟಿ.ದೇವೇಗೌಡ, ಪೈಲ್ವಾನರಿಗೆ ಅಭಿನಂದಿಸಿದರು.

ಶ್ರೀ ಜಯಚಾಮರಾಜ ಒಡೆಯರ್ ಗರಡಿ ಸಂಘದ ಗೌರವಾಧ್ಯಕ್ಷ ಯಜಮಾನ್ ಪೈ.ಎಸ್.ಮಹದೇವ್, ಅಧ್ಯಕ್ಷ ಪಿ.ನಾಗೇಂದ್ರ, ಹಿರಿಯ ಕುಸ್ತಿ ತರಬೇತುದಾರಾದ ಸಿ.ಬಸವರಾಜ್, ಪ್ರಧಾನ ಕಾರ್ಯದರ್ಶಿ ಎಂ.ಸುಪುತ್ರ, ಕೋಶಾಧ್ಯಕ್ಷ ಎಂ.ಪ್ರವೀಣ್ ಕುಮಾರ್, ಜಂಟಿ ಕಾಯದರ್ಶಿ ಎನ್.ರವಿ, ಸದಸ್ಯರಾದ ದೇವರಾಜ್, ಸತೀಶ್ ಪರಂಶಿವ ಮತ್ತಿತರರು ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯರ ಹುಟ್ಟುಹಬ್ಬ: ವಿಶೇಷಚೇತನ ಮಕ್ಕಳಿಗೆ ಆರೋಗ್ಯ ತಪಾಸಣೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹುಟ್ಟುಹಬ್ಬದ ಅಂಗವಾಗಿ ಮಂಗಳವಾರ ವಿಶೇಷಚೇತನ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸಲಾಯಿತು.

ಮೈಸೂರು, ಆ.12(ಎಂಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ತಿಲಕ್ ನಗರದಲ್ಲಿರುವ ಸರ್ಕಾರಿ ಅಂಧ ಮತ್ತು ಮೂಕ ಶಾಲೆಯ ವಿಶೇಷಚೇತನ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಔಷಧಿ ವಿತರಣೆ ಕಾರ್ಯಕ್ರಮ ಮಂಗಳವಾರ ನಡೆಯಿತು.

ನಗರಪಾಲಿಕೆ ಮಾಜಿ ಸದಸ್ಯ ಎಂ.ಶಿವಣ್ಣ ನೇತೃತ್ವದಲ್ಲಿ ಚಾಮುಂಡಿಬೆಟ್ಟ ಹಾಗೂ ಮಲೆ ಮಹದೇಶ್ವರ ಬೆಟ್ಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಿನಲ್ಲಿ ಪೂಜೆ ಸಲ್ಲಿಸಿ, ನಂತರ ಸುಮಾರು 140 ವಿಶೇಷಚೇತನ ಮಕ್ಕಳಿಗೆ ಆರೋಗ್ಯ ತಪಾಸಣೆ ನಡೆಸಿ, ಸ್ಥಳದಲ್ಲಿಯೇ ಔಷಧಿಗಳನ್ನು ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಜಿಪಂ ಮಾಜಿ ಅಧ್ಯಕ್ಷ ಕೆ.ಮರಿಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್‌ಗಳಾದ ಅನಂತು, ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ನಗರಪಾಲಿಕೆ ಮಾಜಿ ಸದಸ್ಯರಾದ ರಾಜಲಕ್ಷ್ಮಿ, ಎಂ.ಶಿವಣ್ಣ, ಜಾಕೀರ್ ಪಾಷ, ಮುಖಂಡರಾದ ಸುರೇಶ್‌ಬಾಬು, ರಾಚಪ್ಪ, ಚೆಲುವರಾಜು, ರವಿಕುಮಾರ್, ಚಂದ್ರಶೇಖರ, ಮಾದೇಶ, ಆರ್.ಮಹದೇವು, ರವಿಚಂದ್ರ, ಭಾಸ್ಕರ್ ಎಲ್.ಗೌಡ, ಸುಂದರ್‌ಕುಮಾರ್, ಜಗದೀಶ್, ಎಂ.ನಾಗೇಂದ್ರ, ನಂಜಪ್ಪ, ಮಮತ, ಲೀಲಾ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ತಾಲೂಕು ಜಯಪುರ ಹೋಬಳಿಯ ಕಡಕೊಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರ ಹುಟ್ಟುಹಬ್ಬದ ಪ್ರಯುಕ್ತ ಕಾಂಗ್ರೆಸ್ ಮುಖಂಡರು ಶಾಲಾ ಮಕ್ಕಳಿಗೆ ಸಿಹಿ ಹಂಚಿದರು. ಮೈಸೂರು ಜಿಪಂ ಮಾಜಿ ಸದಸ್ಯ ಪಟೇಲ್ ಜವರೇಗೌಡ, ಜಿಪಂ ಮಾಜಿ ಅಧ್ಯಕ್ಷ ಕಡಕೊಳ ನಾಗರಾಜು, 33 ಹಳ್ಳಿ ಗಡಿ ಯಜಮಾನರಾದ ಸಿದ್ದರಾಮಯ್ಯಗೌಡ, ಗ್ರಾಪಂ ಮಾಜಿ ಸದಸ್ಯ ರವಿಗೌಡ, ಮಾಜಿ ಅಧ್ಯಕ್ಷ ಕಪನಿಗೌಡ, ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗ ಕಾರ್ಯಾಧ್ಯಕ್ಷ ಕಡಕೊಳ ಭರತ್, ಕಾರ್ಮಿಕ ವಿಭಾಗ ಮಾಜಿ ಅಧ್ಯಕ್ಷ ಕಡಕೊಳ ಶಿವಲಿಂಗ, ಮುಖ್ಯಶಿಕ್ಷಕ ದುಂಡಯ್ಯ ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

ಗಜಪಡೆ ಸಮ್ಮುಖದಲ್ಲಿ ವಿಶ್ವ ಆನೆ ದಿನ ಆಚರಣೆ



ಮೈಸೂರು ಅರಮನೆ ಆವರಣದಲ್ಲಿ ಗಜಪಡೆ ಸಮ್ಮುಖದಲ್ಲಿ ವಿಶೇಷಚೇತನ ಮಕ್ಕಳಿಂದ ‘ವಿಶ್ವ ಆನೆ ದಿನ’ ಆಚರಿಸಲಾಯಿತು.

ಮೈಸೂರು,ಆ.12(ಎಂಕೆ)– ಮೈಸೂರು ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ದಸರಾ ಆನೆಗಳ ಸಮ್ಮುಖದಲ್ಲಿ ‘ವಿಶ್ವ ಆನೆ ದಿನ’ ಆಚರಿಸಲಾಯಿತು.

ಮೈಸೂರು ವನ್ಯಜೀವಿ ವಲಯದ ವನ್ಯಜೀವಿ ವಿಭಾಗದ ವತಿಯಿಂದ ಕರುಣಾಮಯಿ ವಿಶೇಷಚೇತನ ಮಕ್ಕಳ ಶಾಲೆ ಸಹಯೋಗದೊಂದಿಗೆ ವಿಶೇಷ ಮಕ್ಕಳಿಗೆ ಆನೆ ಸೇರಿದಂತೆ ವನ್ಯಜೀವಿಗಳ ಪರಿಚಯ ಮಾಡಿಕೊಡುವ ಮೂಲಕ ವಿಶ್ವ ಆನೆ ದಿನಾಚರಣೆ ನಡೆಸಲಾಯಿತು.

ಈ ವೇಳೆ ರಂಗನತಿಟ್ಟು ಪಕ್ಷಿಧಾಮದ ಪರಿಸರ ಶಿಕ್ಷಣಾಧಿಕಾರಿ ಗಗನ, ಆನೆ ಸೇರಿದಂತೆ ಇನ್ನಿತರೆ ವನ್ಯಜೀವಿಗಳ ಚಲನವಲನ ಕುರಿತು ವಿಶೇಷ ಮಕ್ಕಳಿಗೆ ತಿಳಿಸಿಕೊಟ್ಟರಲ್ಲದೆ, ವನ್ಯಜೀವಿಗಳ ರಕ್ಷಣೆ ನಮ್ಮೆಲ್ಲರ ಕರ್ತವ್ಯ ಎಂಬುದರ ಕುರಿತು ಅರಿವು ಮೂಡಿಸಿದರು. ಈ ವೇಳೆ ವೈದ್ಯ ಡಾ.ಆದರ್ಶ್, ಮಾವುತರು, ಕಾವಾಡಿಗರು, ಕರುಣಾಮಯಿ ವಿಶೇಷಚೇತನ ಮಕ್ಕಳ ಶಾಲೆ ಶಿಕ್ಷಕರು ಉಪಸ್ಥಿತರಿದ್ದರು.

ಒಳಮೀಸಲಾತಿ ಜಾರಿ ಮಾಡದಂತೆ ಒತ್ತಾಯಿಸಿ ಮೈಸೂರಲ್ಲಿ ನಾಳೆ ಪ್ರತಿಭಟನಾ ಮೆರವಣಿಗೆ

ಮೈಸೂರು, ಆ.12(ಜಿಎ)–ಒಳ ಮೀಸಲಾತಿ ಕುರಿತ ನ್ಯಾ.ನಾಗಮೋಹನ ದಾಸ್ ವರದಿ ಬಗ್ಗೆ ಇರಿಸಿಕೊಂಡಿದ್ದ ನಿರೀಕ್ಷೆ ಹುಸಿಯಾಗಿದೆ. ವರದಿ ಅವೈಜ್ಞಾನಿಕವಾಗಿದ್ದು, ಸರ್ಕಾರ ಅಂಗೀಕರಿಸಬಾರದು ಎಂದು ಒತ್ತಾಯಿಸಿ ಆ.14ರಂದು ನಗರದಲ್ಲಿ ಬಲಗೈ ಮೀಸಲಾತಿ ಹೋರಾಟ ಸಮಿತಿ ಹಾಗೂ ಸಂವಿಧಾನ ರಕ್ಷಣಾ ಹೋರಾಟ ಸಮಿತಿ ಸಂಯುಕ್ತಾಶ್ರಯದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ದಲಿತ ನವನಿರ್ಮಾಣ ವೇದಿಕೆ ಮುಖಂಡ ಹರಿಹರ ಆನಂದಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಪುರಭವನದಿಂದ ಡಿಸಿ ಕಚೇರಿಗೆ ಮೆರವಣಿಗೆ ಮಾಡಿ ನಂತರ ಪ್ರತಿಭಟನೆ ನಡೆಸಲಾಗುತ್ತದೆ. ನ್ಯಾ.ನಾಗಮೋಹನದಾಸ್ ಅವರಿಗೆ ಜಾತಿಗಳ ಬಗ್ಗೆ ಅರಿವೇ ಇಲ್ಲದಂತಿದೆ. ಅಲ್ಲಿದ್ದವರನ್ನು ಇಲ್ಲಿಗೆ, ಇಲ್ಲಿದ್ದವರನ್ನು ಅಲ್ಲಿಗೆ ಬದಲಾಯಿಸಿದ್ದಾರೆ. ಬಹುಸಂಖ್ಯಾತರನ್ನು ಅಲ್ಪ ಸಂಖ್ಯಾತರನ್ನಾಗಿಸಿ, ಅಲ್ಪಸಂಖ್ಯಾತರನ್ನು ಬಹು ಸಂಖ್ಯಾತರನ್ನಾಗಿಸಿದ್ದಾರೆ. ಆದ್ದರಿಂದ ಸರ್ಕಾರ ವರದಿ ಜಾರಿ ತಡೆ ಹಿಡಿಯಬೇಕು. ಎಡಗೈನವರಿಗೆ ಹೆಚ್ಚು ಮೀಸಲು ಸ್ವಾಗತಾರ್ಹ. ಆದರೆ ಸುಳ್ಳು ಹೇಳಿ ಕೊಡಬಾರದು ಎಂದರು.

ಒಟ್ಟಾರೆ ಈ ವರದಿ ಅವೈಜ್ಞಾನಿಕವಾಗಿದೆ. ಹೀಗಾಗಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ನಿಗದಿಗೊಳಿಸಬೇಕು. ವಿಶ್ವಾಸಾರ್ಹ ಸಂಸ್ಥೆಯಿಂದ ಸಮೀಕ್ಷೆ ನಡೆಯಬೇಕೆಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ಸಿ.ಹರಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಲಕ್ಷ್ಮಿಹಯಗ್ರೀವರ ವಿಶೇಷ ದರ್ಶನ



ಶ್ರೀ ಹಯಗ್ರೀವರ ಜಯಂತಿ ಪ್ರಯುಕ್ತ ಪರಕಾಲ ಮಠದ ಶ್ರೀ ಲಕ್ಷ್ಮಿಹಯಗ್ರೀವರ ವಿಶೇಷ ದರ್ಶನ ಪಡೆದು, ರಾಜಗುರುಗಳಾದ ಶ್ರೀ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಪದಾಧಿಕಾರಿಗಳು ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಎಂ.ಆರ್.ಬಾಲಕೃಷ್ಣ, ಮೈಸೂರು ಜಿಲ್ಲಾ ಬ್ರಾಹ್ಮಣ ಪ್ರತಿನಿಧಿ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ.ಕೆ.ವಿ.ಲಕ್ಷ್ಮೀದೇವಿ, ಜಿ.ಆರ್.ಮೋಹನ್, ರಾಜ್ಯ ಜಂಟಿ ಕಾರ್ಯದರ್ಶಿ ಶಂಕರನಾರಾಯಣ್, ಕಲ್ಕೆರೆ ನಾಗರಾಜ್, ಟಿ.ಎಸ್.ಅರುಣ್, ಎಂ.ಶ್ರೀನಿವಾಸ್ ಪ್ರಸಾದ್, ವಿಜಯಲಕ್ಷ್ಮಿ ಉಪಸ್ಥಿತರಿದ್ದರು.

ಮಾವುತರು, ಕಾವಾಡಿಗರಿಗೆ ರಕ್ಷಾ ಬಂಧನ ಸಂಭ್ರಮ

ಮೈಸೂರು, ಆ.12(ಎಂಕೆ)– ಮೈಸೂರು ದಸರಾ ಆನೆಗಳೊಂದಿಗೆ ಆಗಮಿಸಿರುವ ಮಾವುತರು ಹಾಗೂ ಕಾವಾಡಿಗರಿಗೆ ರಾಕಿ ಕಟ್ಟಿ ಸಿಹಿ ಹಂಚಿ ಶ್ರೀ ದುರ್ಗಾ ಫೌಂಡೇಶನ್‌ನ ಮಹಿಳೆಯರು ರಕ್ಷಾ ಬಂಧನ ಆಚರಿಸಿದರು.

ಸದಾ ಆನೆಗಳೊಂದಿಗೆ ವಾಸಿಸುವ ಮಾವುತರು ಹಾಗೂ ಕಾವಾಡಿಗರಿಗೆ ರಾಕಿ ಕಟ್ಟುವ ಸೌಭಾಗ್ಯ ನಮ್ಮದಾಗಿರುವುದೇ ಸಂತಸ ತಂದಿದೆ. ಭಾರತೀಯ ಪರಂಪರೆಯಲ್ಲಿ ರಕ್ಷಾ ಬಂಧನ ಹಬ್ಬಕ್ಕೆ ಬಹಳ ಮಹತ್ವವಿದ್ದು, ಮಾವುತರು ಹಾಗೂ ಕಾವಾಡಿಗರಿಗೆ ರಾಕಿ ಕಟ್ಟಿ ಈ ವರ್ಷದ ದಸರಾ ಉತ್ಸವವನ್ನು ಯಶಸ್ವಿಗೊಳಿಸಲಿ ಎಂದು ಪಾರ್ಥಿಸಿದ್ದೇವೆ ಎಂದು ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ತಿಳಿಸಿದರು. ಮಹಿಳಾ ಉದ್ಯಮಿ ಖುಷಿ ವಿನು, ಕಾವ್ಯ, ಮುಖಂಡರಾದ ಜಿ.ರಾಘವೇಂದ್ರ, ಎಸ್.ಎನ್.ರಾಜೇಶ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಶ್ರೀ ದುರ್ಗಾ ಫೌಂಡೇಶನ್ ವತಿಯಿಂದ ಮೈಸೂರು ದಸರಾ ಗಜಪಡೆಯ ಮಾವುತರು ಹಾಗೂ ಕಾವಾಡಿಗರೊಂದಿಗೆ ರಕ್ಷಾ ಬಂಧನ ಆಚರಿಸಲಾಯಿತು.



ಆರ್ಥಿಕ ಸಹಾಯಧನ

ಆನೆ ದಾಳಿಗೊಳಗಾಗಿ ಅಪೋಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಎಚ್.ಡಿ.ಕೋಟೆ ತಾಲೂಕಿನ ಎನ್.ಬೆಳತ್ತೂರಿನ ರಾಜು ಅವರನ್ನು ಭೇಟಿ ಮಾಡಿ, ಆರೋಗ್ಯ ವಿಚಾರಿಸಿದ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡರು ಆರ್ಥಿಕ ಸಹಾಯ ಮಾಡಿದರು. ಈ ವೇಳೆ ರೈತ ಮುಖಂಡರಾದ ಹರೀಶ್‌ಗೌಡ, ಮಾದೇಗೌಡ ಇದ್ದರು.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಬೇಕಿದ್ದರೆ ‘ವೇಳಾಪಟ್ಟಿ’ ಬಹಳ ಮುಖ್ಯ

ಯುಜಿಸಿ–ನೆಟ್, ಕೆ–ಸೆಟ್ ತರಬೇತಿ ಶಿಬಿರದಲ್ಲಿ ಡಿಐಜಿ ರವಿ ಡಿ.ಚನ್ನಣ್ಣನವರ್ ಕಿವಿಮಾತು

ಮೈಸೂರು,ಆ.12(ಎಂಕೆ)– ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಅಭ್ಯರ್ಥಿಗಳಿಗೆ ವೇಳಾಪಟ್ಟಿ ಅತ್ಯಗತ್ಯ. ಇಲ್ಲದಿದ್ದರೆ ಯಶಸ್ಸು ಅಸಾಧ್ಯ ಎಂದು ಬೆಂಗಳೂರಿನ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಐಜಿ ರವಿ ಡಿ.ಚನ್ನಣ್ಣನವರ್ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವು ಆಯೋಜಿಸಿರುವ ಯುಜಿಸಿ–ನೆಟ್, ಕೆ–ಸೆಟ್ ತರಬೇತಿ ಶಿಬಿರದಲ್ಲಿ ಮಾತನಾಡಿದ ಅವರು, ಪ್ರತಿ ವ್ಯಕ್ತಿಯ ಬದುಕಿನಲ್ಲಿ ಎರಡು ರೀತಿಯ ಸೋಂಕುಗಳಿರುತ್ತವೆ. ಒಂದು ನಕಾರಾತ್ಮಕ ಸೋಂಕು. ಮತ್ತೊಂದು ಸಕಾರಾತ್ಮಕ ಸೋಂಕು. ದುಶ್ಚಟ, ಸಮಯ ವ್ಯರ್ಥ ಸಕಾರಾತ್ಮಕ ಸೋಂಕಾದರೆ, ಪುಸ್ತಕ ಹಿಡಿಯುವುದು, ಒಳ್ಳೆಯ ಸ್ನೇಹಿತರ ಒಡನಾಟ ಸಕಾರಾತ್ಮಕ ಅಂಶವಾಗಿದೆ ಎಂದರು.



ಕೆಎಸ್‌ಒಯು ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದಲ್ಲಿ ಮಂಗಳವಾರ ನಡೆದ ಯುಜಿಸಿ–ನೆಟ್, ಕೆ–ಸೆಟ್ ತರಬೇತಿ ಶಿಬಿರದಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಐಜಿ ರವಿ ಡಿ.ಚನ್ನಣ್ಣನವರ್ ಮಾತನಾಡಿದರು.

ಸ್ಪರ್ಧಾತ್ಮಕ ಪರೀಕ್ಷೆ ಬರೆಯುವುದಾದರೆ, 10 ವರ್ಷಗಳ ಪ್ರಶ್ನೆ ಪತ್ರಿಕೆ ಅಭ್ಯಾಸ ಮಾಡುವುದು, ಅನಂತರ ಸಾಮಾನ್ಯ ಜ್ಞಾನ ಪತ್ರಿಕೆಯತ್ತ ಗಮನಹರಿಸುವುದು, ಕೊನೆಗೆ ಪುನರ್ ಅಧ್ಯಯನ ಮಾಡುವುದು ಪರೀಕ್ಷಾರ್ಥಿಗಳು ಪಾಲಿಸಬೇಕಾದ ಸೂತ್ರಗಳಾಗಿವೆ ಎಂದು ತಿಳಿಸಿದರು.

ಸ್ವಾಮಿ ವಿವೇಕಾನಂದರು ಸ್ವರ್ಗಕ್ಕೆ ದಾರಿಯಿದ್ದರೆ ನರಕದ ಮೂಲಕವೇ ಎಂದು ಹೇಳಿದ್ದಾರೆ. ಸಣ್ಣ ಹುದ್ದೆಗೆ ಸಣ್ಣ ಸಿದ್ಧತೆ, ದೊಡ್ಡ ಹುದ್ದೆಗೆ ದೊಡ್ಡ ಸಿದ್ಧತೆ ಬೇಕು. ಉತ್ತಮ ಸಮಾಜ ನಿರ್ಮಿಸುವ ಕನಸು ಹೊಂದಿದವರು ಉನ್ನತ ಹುದ್ದೆ ಪಡೆಯುವ ಗುರಿ ಹೊಂದಿರಬೇಕು ಎಂದು ಹುರಿದುಂಬಿಸಿದರು.


ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಸಾಧನೆಗೆ ಅನೇಕ ಏಳು–ಬೀಳು ಇರುತ್ತವೆ. ಅವುಗಳನ್ನು ಧೈರ್ಯದಿಂದ ಎದುರಿಸಿದರೆ ಏನನ್ನಾದರೂ ಸಾಧಿಸಬಹುದು. ಹಾಗಾಗಿ ಯಾರು ಬೇಕಾದರೂ ಯಶಸ್ಸು ಗಳಿಸಬಹುದು ಎಂದರು.

ನಿರಂತರ ಪ್ರಯತ್ನ, ಗಟ್ಟಿ ಮನಸ್ಸು ಮಾಡಿ ಅಧ್ಯಯನ ನಡೆಸಿದರೆ ಶ್ರಮಕ್ಕೆ ತಕ್ಕ ಫಲಿತಾಂಶ ಲಭಿಸುತ್ತದೆ. ಪೂರ್ವ ತಯಾರಿ ಆಧಾರದ ಮೇಲೆ ತಮ್ಮ ಅಧಿಕಾರ, ಸ್ಥಾನಮಾನಗಳು ದೊರೆಯುತ್ತದೆ ಎಂಬುದನ್ನು ಶಿಬಿರಾರ್ಥಿಗಳು ತಿಳಿಯಬೇಕು ಎಂದು ಹೇಳಿದರು.

ಶಿಬಿರದಲ್ಲಿ ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ, ಸಿದ್ದೇಶ್ ಹೊನ್ನೂರ್, ಗಣೇಶ ಕೆ.ಜಿ. ಕೊಪ್ಪಲು ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಬುಧವಾರ 13 ಆಗಸ್ಟ್ 2025

ಸರ್ವೇ ನಿಲ್ಲಿಸುವಂತೆ ಆಗ್ರಹಿಸಿ
ಸೋಮವಾರಪೇಟೆ ಬಂದ್ ಯಶಸ್ವಿ



ಸರ್ವೇ ನಡೆಸುತ್ತಿರುವುದನ್ನು ತಕ್ಷಣವೇ ನಿಲ್ಲಿಸಬೇಕೆಂದು ಒತ್ತಾಯಿಸಿ ರೈತ ಹೋರಾಟ ಸಮಿತಿ ಹಾಗೂ ರೈತ ಸಂಘ ಸೋಮವಾರಪೇಟೆಯಲ್ಲಿ ಮೆರವಣಿಗೆ ನಡೆಸಿದರು.

ಮಡಿಕೇರಿ, ಆ.12– ಕಂದಾಯ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಕೃಷಿ ಭೂಮಿಯನ್ನು 'ಸಿ ಆ್ಯಂಡ್ ಡಿ' ಭೂಮಿ(ಕೃಷಿಗೆ ಯೋಗ್ಯವಲ್ಲದ ಭೂಮಿ) ಎಂದು ಸರ್ವೇ ನಡೆಸುತ್ತಿರುವುದನ್ನು ತಕ್ಷಣವೇ ನಿಲ್ಲಿಸಬೇಕೆಂದು ಒತ್ತಾಯಿಸಿ ಸೋಮವಾರಪೇಟೆ ತಾಲೂಕು ರೈತ ಹೋರಾಟ ಸಮಿತಿ ಹಾಗೂ ಕೊಡಗು ರೈತ ಸಂಘ ಕರೆ ನೀಡಿದ್ದ ಸೋಮವಾರಪೇಟೆ ತಾಲೂಕು ಬಂದ್‌ಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು.

ಸೋಮವಾರಪೇಟೆ, ಕೊಡ್ಲಿಪೇಟೆ, ಶನಿವಾರಸಂತೆ ಮುಖ್ಯ ಪಟ್ಟಣಗಳಲ್ಲಿ ಪಟ್ಟಣದಲ್ಲಿ ವರ್ತಕರು ಅಂಗಡಿ ಮುಂಗಟ್ಟು ಮುಚ್ಚಿದ್ದರೆ, ಖಾಸಗಿ ಬಸ್‌ಗಳು, ಆಟೋ, ಬಾಡಿಗೆ ವಾಹನಗಳು ರಸ್ತೆಗೆ ಇಳಿಯದೆ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿದ್ದು ಕಂಡು ಬಂತು. ಕೆಲವು ಕಡೆಗಳಲ್ಲಿ ಮರಗಳನ್ನು ಕಡಿದು ರಸ್ತೆ ಹಾಕಲಾಗಿತ್ತು. ಬಂದ್ ಹಿನ್ನೆಲೆಯಲ್ಲಿ ಖಾಸಗಿ ಶಾಲಾ–ಕಾಲೇಜುಗಳಿಗೆ ರಜೆ ನೀಡಲಾಗಿತ್ತು. ಬಂದ್‌ಗೆ ಖಾಸಗಿ ಬಸ್‌ಗಳು ಕೈ ಜೋಡಿಸಿದ್ದರೆ, ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರಕ್ಕೆ ಬಂದ್ ಬಿಸಿ ಮುಟ್ಟಿದ್ದು ಕಂಡು ಬಂತು.

ಹೋರಾಟ ಸಮಿತಿ ಅಧ್ಯಕ್ಷ ಕೆ.ಬಿ.ಸುರೇಶ್, ಸಂಚಾಲಕ ಬಿ.ಜೆ.ದೀಪಕ್, ಪ್ರಮುಖರಾದ ಎಸ್.ಜಿ.ಮೇದಪ್ಪ, ಕೆ.ಎಂ.ಲೋಕೇಶ್ ಕುಮಾರ್, ಬಿ.ಪಿ.ಅನಿಲ್, ಹರಗ ಮಿಥುನ್, ಕೂತಿ ದಿವಾಕರ್, ಕೆ.ಎಂ.ದಿನೇಶ್ ನೇತೃತ್ವದಲ್ಲಿ ವಿವೇಕಾನಂದ ಸರ್ಕಲ್‌ನಲ್ಲಿ ರಸ್ತೆ ತಡೆ ನಡೆಸಿದರೆ, ಬೀಟಿಕಟ್ಟೆ ಜಂಕ್ಷನ್‌ನಲ್ಲಿ ರೈತ ಹೋರಾಟ ಸಮಿತಿ ಹಾಗೂ ರೈತ ಸಂಘದ ಎಸ್.ಬಿ.ಭರತ್‌ಕುಮಾರ್, ಜಿ.ಎಂ. ಹೂವಯ್ಯ, ಬಿ.ಪಿ.ಮೊಗಪ್ಪ, ಗೋಪಾಲ್‌ಕೃಷ್ಣ ಅವರ ನೇತೃತ್ವದಲ್ಲಿ ರಸ್ತೆ ತಡೆ ನಡೆಸಿ ಆಕ್ರೋಶ ಹೊರಗೆಡವಿದರು.

ಪಟ್ಟಣದ ವಿವೇಕಾನಂದ ಸರ್ಕಲ್ ಬಳಿ ಜಮಾಯಿಸಿದ ಪ್ರತಿಭಟನಾಕಾರರು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕೃಷಿ ಭೂಮಿಯನ್ನು ಸಿ ಆ್ಯಂಡ್ ಡಿ ಭೂಮಿ ಎಂದು ಸರ್ವೇ ಮಾಡುವ ಮೂಲಕ ರೈತರಿಗೆ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಇದೇ ವೇಳೆ ಸ್ಥಳಕ್ಕಾಗಮಿಸಿದ ತಹಶೀಲ್ದಾರ್ ಕೃಷ್ಣಮೂರ್ತಿ ಹಾಗೂ ಆರ್‌ಎಫ್‌ಒ ಶೈಲೇಂದ್ರ ಕುಮಾರ್ ಅವರೊಂದಿಗೆ ಪ್ರತಿಭಟನಾಕಾರರು ಮಾತಿನ ಚಕಮಕಿ ನಡೆಸಿದರು. ಸ್ಥಳಕ್ಕೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಆಗಮಿಸಬೇಕೆಂದು ಪಟ್ಟು ಹಿಡಿದರು.

ರೈತ ಹೋರಾಟ ಸಮಿತಿ ಅಧ್ಯಕ್ಷ ಕೆ.ಬಿ.ಸುರೇಶ್ ಮಾತನಾಡಿ ಕೃಷಿ ಭೂಮಿಯನ್ನು ಅರಣ್ಯ ಇಲಾಖೆಗೆ ಸೇರಿಸಿದರೆ ರೈತರು ಗುಳೇ ಹೋಗಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಎ.ಎಸ್.ಪಿ ಬಿ.ಪಿ.ದಿನೇಶ್ ಕುಮಾರ್, ಎಸಿಎಫ್ ಗೋಪಾಲ್‌ರೊಂದಿಗೆ ಸ್ಥಳಕ್ಕೆ ಆಗಮಿಸಿ ಪ್ರತಿಭಟನಾಕಾರರ ಅಹವಾಲು ಆಲಿಸಿದ ಜಿಲ್ಲಾಧಿಕಾರಿ ವೆಂಕಟರಾಜ, ಸಿ ಆ್ಯಂಡ್ ಡಿ ಭೂಮಿ ವಿಷಯದಲ್ಲಿ ಎಲ್ಲಾ ಮಾಹಿತಿ ಸಂಗ್ರಹಿಸಲಾಗಿದೆ. ಸಿ ಆ್ಯಂಡ್ ಡಿ ಭೂಮಿಯಲ್ಲಿ ಕೃಷಿ ಮಾಡಿರುವುದು, ವಾಸದ ಮನೆಗಳಿರುವ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ರೈತಾಪಿ ವರ್ಗಕ್ಕೆ ತೊಂದರೆಯಾಗಬಾರದು ಎಂಬುದು ಜಿಲ್ಲಾಡಳಿತದ ಆಶಯವೂ ಆಗಿದೆ. ಜಂಟಿ ಸರ್ವೆಯ ಸಂದರ್ಭ ಗ್ರಾಮಸ್ಥರಿಗೆ ಮಾಹಿತಿ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ
ಪ್ರಾಥಮಿಕ ಶಾಲಾ ಶಿಕ್ಷಕರ ಪ್ರತಿಭಟನೆ



ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಡಿಕೇರಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಆ.12– ಪ್ರಾಥಮಿಕ ಶಾಲಾ ಸೇವಾ ನಿರತ ಪದವೀಧರ ಶಿಕ್ಷಕರಿಗೆ ಸಂಬಂಧಿಸಿದಂತೆ 'ವೃಂದ ಮತ್ತು ನೇಮಕಾತಿ' ಆದೇಶದ ತಿದ್ದುಪಡಿಯಿಂದ ಉಂಟಾಗಿರುವ ಸಮಸ್ಯೆಗಳನ್ನು ತಕ್ಷಣ ಬಗೆಹರಿಸುವ ಮೂಲಕ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನ್ಯಾಯ ಒದಗಿಸಿಕೊಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ವತಿಯಿಂದ ಪ್ರತಿಭಟನೆ ನಡೆಯಿತು.

ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಸಮಾವೇಶಗೊಂಡ ನೂರಾರು ಶಿಕ್ಷಕರು ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ತಿದ್ದುಪಡಿ ಕಡತಕ್ಕೆ ಸಾಕಷ್ಟು ಬಾರಿ ಹೋರಾಟಗಳನ್ನು ನಡೆಸಿದರೂ ಸರ್ಕಾರ ಅನುಮೋದನೆ ನೀಡದಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಆ.25ರ ಗಡುವು: ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ಚೇತನ್ ಮಾತನಾಡಿ, ನಮ್ಮ ಬೇಡಿಕೆ ಈಡೇರಿಕೆಗಾಗಿ ಇದೇ ಆ.25ರ ಗಡುವನ್ನು ರಾಜ್ಯ ಸರ್ಕಾರಕ್ಕೆ ನೀಡಲಾಗುತ್ತಿದೆ. ಈ ಅವಧಿಯಲ್ಲಿಯೂ ಬೇಡಿಕೆ ಈಡೇರದಿದ್ದಲ್ಲಿ ಸೆ.3ರಂದು 'ಫ್ರೀಡಂ ಪಾರ್ಕ್ ಚಲೋ' ಬೃಹತ್ ಪ್ರತಿಭಟನೆಯನ್ನು ಸಂಘಟಿಸಲಾಗುತ್ತದೆ. ಇದಕ್ಕೂ ಸರ್ಕಾರ ಸ್ಪಂದಿಸದಿದ್ದಲ್ಲಿ ಸಂಘದ ಪದಾಧಿಕಾರಿಗಳಿಂದ ಅಹೋರಾತ್ರಿ ಪ್ರತಿಭಟನೆ ನಡೆಯಲಿದೆ. ಮಾತ್ರವಲ್ಲದೇ ಈ ಸಾಲಿನ ಸೆ.14ರ 'ಮಕ್ಕಳ ದಿನಾಚರಣೆ'ಯನ್ನು ಪ್ರಾಥಮಿಕ ಶಿಕ್ಷಕರು ಕರಾಳ ದಿನವನ್ನಾಗಿ ಆಚರಿಸಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರಾಜ್ಯ ವ್ಯಾಪಿ ಶಿಕ್ಷಕರು ಫ್ರೀಡಂ ಪಾರ್ಕ್‌ನಲ್ಲಿ ನಡೆಸಿದ ಪ್ರತಿಭಟನೆ ನಡೆಸಿದಾಗ ಶಿಕ್ಷಣ ಸಚಿವರು ಮತ್ತು ಮುಖ್ಯಮಂತ್ರಿಗಳು ಸಂಘದೊಂದಿಗೆ ಚರ್ಚಿಸಿ, ಸಮಸ್ಯೆ ಬಗೆಹರಿಕೆಗೆ ಸಮಿತಿಯೊಂದನ್ನು ರಚಿಸಿ ಶೀಘ್ರ ಪರಿಹಾರ ನೀಡುವುದಾಗಿ ತಿಳಿಸಿದ್ದರು. ಆದರೆ ಭರವಸೆ ನೀಡಿ ವರ್ಷ ಕಳೆದರೂ ಸಮಸ್ಯೆ ಹಾಗೆಯೇ ಇದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಸ್ಯೆಗಳ ಬಗೆಹರಿಕೆಗೆ ಸಂಘ ಇದೀಗ ಸರ್ಕಾರಕ್ಕೆ ಅಂತಿಮವಾದ ಎಚ್ಚರಿಕೆಯನ್ನು ನೀಡುತ್ತಿದೆ. ಇನ್ನು ಮುಂದೆ ಇದೇ ಸಮಸ್ಯೆಗೆ ಸಂಬಂಧಿಸಿದಂತೆ ಯಾವುದೇ ಮನವಿಗಳನ್ನು ಸಲ್ಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ ಚೇತನ್, ಮುಂಬರುವ ದಿನಗಳಲ್ಲಿ ಈಗಾಗಲೆ ಮಾಡಿರುವ ಆದೇಶದಂತೆ ಪ್ರಾಥಮಿಕ ಶಾಲಾ ಶಿಕ್ಷಕರು 1ರಿಂದ 5ನೇ ತರಗತಿಯವರೆಗೆ ಮಾತ್ರ ಪಾಠ ಪ್ರವಚನ ಮಾಡುತ್ತಾರೆ. 6 ಮತ್ತು 7ನೇ ತರಗತಿಗಳಿಗೆ ಪಾಠ ಪ್ರವಚನ ಮಾಡುವುದನ್ನು ಸ್ಥಗಿತಗೊಳಿಸಲಿದ್ದಾರೆ ಎಂದು ಸ್ಪಷ್ಟಪಡಿಸಿದರು. ಪ್ರತಿಭಟನೆಯ ಬಳಿಕ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಕೆ.ಎಸ್. ಪ್ರಸನ್ನ ಕುಮಾರ್ ಉಪಾಧ್ಯಕ್ಷ ಹೆಚ್.ಎನ್. ಮಂಜುನಾಥ್, ನೇತೃತ್ವದಲ್ಲಿ ಸಂಘದ ಸೋಮವಾರಪೇಟೆ ತಾಲೂಕು ಅಧ್ಯಕ್ಷ ಟಿ.ಕೆ.ಬಸವರಾಜು, ಕಾರ್ಯದರ್ಶಿ ಕವಿತಾ, ಮಡಿಕೇರಿ ತಾಲೂಕು ಅಧ್ಯಕ್ಷ ಮೋಹನ್ ಪೆರಾಜೆ, ಕಾರ್ಯದರ್ಶಿ ಆಕಾಶ್, ವಿರಾಜಪೇಟೆ ತಾಲೂಕು ಅಧ್ಯಕ್ಷ ಸುರೇಂದ್ರ ಕಾರ್ಯದರ್ಶಿ ಅಶ್ವತ್ಥ್ ಸೇರಿದಂತೆ ಜಿಲ್ಲಾ ವ್ಯಾಪ್ತಿಯ ಹಲವು ಶಿಕ್ಷಕರು ಪಾಲ್ಗೊಂಡಿದ್ದರು.

ಕಾರುಗುಂದ ಗೌಡ ಸಮಾಜದಲ್ಲಿ ಆಟಿ ಜಂಬರ 2025



ಕಾರುಗುಂದ ಗೌಡ ಸಮಾಜದಲ್ಲಿ ಆಯೋಜಿಸಿದ್ದ ಆಟಿ ಜಂಬರ 2025. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಮಹಿಳಾ ಸದಸ್ಯರು

ನಾಪೋಕ್ಲು , ಆ.12–ಆಟಿ ಜಂಬರ ಹಬ್ಬದ ಆಚರಣೆಗಳ ಬಗ್ಗೆ ಮುಂದೊಂದು ದಿನ ಇಂತಹ ಸಾಂಪ್ರದಾಯಿಕ ವಸ್ತುಗಳನ್ನು ಸಂಶೋಧನಾ ರೂಪದಲ್ಲಿ ಹೊರ ತರುವಂತೆ ನಿವೃತ್ತ ಪ್ರಾಂಶುಪಾಲ ಆನೇರ ಜಾನಕಿ ಮೋಹನ್ ಆಶಯ ವ್ಯಕ್ತಪಡಿಸಿದ್ದಾರೆ.

ಚೇರಂಬಾಣೆಯ ಗೌಡ ಸಮಾಜ ಮತ್ತು ಗೌಡ ಮಹಿಳಾ ಒಕ್ಕೂಟಗಳ ಸಂಯುಕ್ತ ಆಶ್ರಯದಲ್ಲಿ ಕಾರುಗುಂದ ಗೌಡ ಸಮಾಜದಲ್ಲಿ ಆಯೋಜಿಸಿದ್ದ ಆಟಿ ಜಂಬರ ಸಭಾ ಕಾರ್ಯಕ್ರಮದಲ್ಲಿ ಸಾಂಪ್ರದಾಯಿಕ ಹಾಗೂ ಪಾರಂಪರಿಕ ವಸ್ತುಗಳ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಘಾತ ಸಂಖ್ಯೆಯಲ್ಲಿ ಸಮಯೋಚಿತವಾಗಿ ಸಾಂದರ್ಭಿಕವಾಗಿ ಈ ಭಾಗದ ಜನರನ್ನು ಒಂದುಗೂಡಿಸಲು ಆಯೋಜಿಸಿರುವ ಈ ಮಹೋತ್ಸವದ ಆಚ ರಣೆಯು ಪುಸ್ತಕ ರೂಪದಲ್ಲಿ ಹೊರಬಂದು ಶಾಶ್ವತವಾಗಿ ಜನ ಮಾನಸದಲ್ಲಿ ಉಳಿಯುವಂತಾಗಬೇಕು ಎಂದು ಅಭಿಪ್ರಾಯಪಟ್ಟರು.

ಸಾಂಪ್ರದಾಯಿಕ ತಿಂಡಿ ತಿನಿಸುಗಳ ಪ್ರದರ್ಶನವನ್ನು ಉದ್ಘಾಟಿಸಿದ ಕೊಡಗು ದಕ್ಷಿಣ ಕನ್ನಡ ಒಕ್ಕಲಿಗ ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಮೂಟೇರ ಪುಷ್ಪಾವತಿ ರಮೇಶ್ ಮಾತನಾಡಿ, ಈ ಬಗೆಯ ತಿಂಡಿ ತಿನಿಸುಗಳನ್ನು ಕಣ್ಣಿಂದ ನೋಡಿರಲು ಕಿವಿಯಿಂದ ಕೇಳಿರಲು ಸಾಧ್ಯವೇ ಇಲ್ಲ ಇಂತಹ ಸಾಂಪ್ರದಾಯಿಕ ತಿಂಡಿ ತಿನಿಸುಗಳನ್ನು ಪ್ರದರ್ಶನಕ್ಕೆ ಇರಿಸಿ ಮುಂದಿನ ಪೀಳಿಗೆಗೆ ಪರಿಚಯಿಸುವ ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಪ್ರಶಂಸನೀಯ ಎಂದರು. ಮುಖ್ಯ ಭಾಷಣಕಾರರಾಗಿ ಮಾತನಾಡಿದ ಪ್ರಾಂಶುಪಾಲ ಕೆಜಿ ದಿವಾಕರ ಮಾತನಾಡಿ, ಸುಮಾರು 170 ತಿಂಡಿ ತಿನಿಸುಗಳ ಪ್ರದರ್ಶನ ಮತ್ತು ನೂರಕ್ಕೂ ಹೆಚ್ಚು ಪಾರಂಪರಿಕ ವಸ್ತುಗಳ ಪ್ರದರ್ಶನ ಆಯೋಜಿಸುವುದು ಎಂದರೆ ಸುಲಭದ ಮಾತಲ್ಲ ಎಂದು ನುಡಿದರು. ಮುಖ್ಯ ಅತಿಥಿಗಳನ್ನು ಸಂಪ್ರದಾಯದಂತೆ ಸ್ವಾಗತಿಸಿ ಕಂಚಿಮಿಯ ಸ್ವಾಗತ ನೀಡಲಾಯಿತು. ಆಟಿ ಜಂಬರವನ್ನು ಸಮಾಜದ ಅಧ್ಯಕ್ಷ ಕೊಡಪಾಲು ಗಣಪತಿ ಮಹಿಳಾ ಒಕ್ಕೂಟದ ಕಾರ್ಯವೈಖರಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಹಿಳಾ ಒಕ್ಕೂಟದ ಅಧ್ಯಕ್ಷೆ ಕಲ್ಲೇರ ತುಳಸಿ ಮೋಹನ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕೊಡಗು ಗೌಡ ಸಮಾಜಗಳ ಒಕ್ಕೂಟದ ನಿರ್ದೇಶಕರಾದ ಪೇರಿಯನ ಉದಯ, ಪುದಿಯ ನೆರವನ ರೇವತಿ ರಮೇಶ್, ತಲಕಾವೇರಿ ದೇವತಕ್ಕರಾದ ಕೋಡಿ ಮೋಟಯ್ಯ ಭಾಗಮಂಡಲ ಪ್ರಗತಿಪರ ಜೇನು ಕೃಷಿಕರ ಸಂಘದ ಅಧ್ಯಕ್ಷ ಹೊಸೂರು ಸತೀಶ್ ಕುಮಾರ್, ತುಮ್ಮಜಿ ಗಣೇಶ್, ಸಮಾಜದ ಉಪಾಧ್ಯಕ್ಷ ಕೆಕ್ಕಡ ದಿನೇಶ್, ಮಹಿಳಾ ಒಕ್ಕೂಟದ ಉಪಾಧ್ಯಕ್ಷ ಹೊಸೊಕ್ಲು ಲತಾ ಮೊಣ್ಣಪ್ಪ, ಕೂರನ ಸುಶೀಲ ಅಪ್ಪಾಜಿ, ಚೊಕ್ಕಾಡಿ ಪ್ರೇಮ ರಾಘವಯ್ಯ ಮೊದಲಾದವರಿದ್ದರು.

ಆರೋಪಿ ಬಂಧನ: 1.50 ಲಕ್ಷ ರೂ. ಮೌಲ್ಯದ ಗಾಂಜಾ ವಶ

ಮಡಿಕೇರಿ, ಆ.12–ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಿಷೇಧಿತ ಮಾದಕ ವಸ್ತು ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಮಾಲು ಸಹಿತ ಬಂಧಿಸಲಾಗಿದೆ. ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆ ಹೋಬಳಿ ನಿವಾಸಿ ಡ್ರೈವರ್ ವೃತ್ತಿಯ ಜಿ.ಅಕ್ರಂ(48) ಎಂಬಾತನೇ ಬಂಧಿತ ಆರೋಪಿಯಾಗಿದ್ದಾನೆ.



ಈತನ ಬಳಿಯಿದ್ದ 1.50 ಲಕ್ಷ ರೂ. ಮೌಲ್ಯದ 4 ಕೆ.ಜಿ 710 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ. ವಿರಾಜಪೇಟೆ ಬಿಟ್ಟಂಗಾಲ ಗ್ರಾಮದ ಪೆಗ್ಗರಿ ಕಾಡು ಪೈಸಾರಿಗೆ ಹೋಗುವ ಜಂಕ್ಷನ್‌ನಲ್ಲಿರುವ ಬಸ್ಸು ತಂಗುದಾಣದಲ್ಲಿ ನಿಷೇಧಿತ ಗಾಂಜಾವನ್ನು ಗಿರಾಕಿಗಳಿಗೆ ಮಾರಾಟ ಮಾಡಲು ಆರೋಪಿ ಯತ್ನಿಸುತ್ತಿದ್ದ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ವಿರಾಜಪೇಟೆ ಡಿವೈಎಸ್‌ಪಿ ಮಹೇಶ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಗ್ರಾಮಾಂತರ ಠಾಣಾಧಿಕಾರಿ ಲತಾ, ಅಪರಾಧ ಪತ್ತೆ ಸಿಬ್ಬಂದಿಗಳಾದ ಎ.ಎಸ್.ಐ ಮಂಜುನಾಥ್, ಟಿ.ಪಿ.ಧರ್ಮ, ಕೆ.ಎಂ.ಜೋಶ್, ನಿಶಾಂತ್, ಗಿರೀಶ್, ಮಲ್ಲಪ್ಪ ಮುಶಿಗೇರಿ ಅವರುಗಳು ಕಾರ್ಯಾಚರಣೆ ನಡೆಸಿದ್ದಾರೆ.

ಕಾವೇರಿ ನದಿಗೆ ಬಿದ್ದು ಮಹಿಳೆ ಆತ್ಮಹತ್ಯೆ

ಕೊಳ್ಳೇಗಾಲ, ಆ.12– ತಾಲೂಕಿನ ಶಿವನಸಮುದ್ರ ಕಾವೇರಿ ನದಿಯಲ್ಲಿ ಮಹಿಳೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಜರುಗಿದೆ.

ತಾಲೂಕಿನ ಮಧುವನಹಳ್ಳಿ ಗ್ರಾಮದ ಲಕ್ಷ್ಮಮ್ಮ (55) ಎಂಬಾಕೆ ಮೃತ ದುರ್ದೈವಿ. ಈಕೆ ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದು ಗುಣವಾಗದೇ ಇದ್ದುದರಿಂದ ಚಿಕಿತ್ಸೆಗಾಗಿ ಹಣ ಖರ್ಚು ಮಾಡಲು ಮಗನಿಗೆ ಸಾಲ ಮಾಡಿಸಬೇಕಾಗುತ್ತದೆ, ಆತನಿಗೆ ತೊಂದರೆ ಆಗುತ್ತದೆ ಎಂದು ಬೇಸತ್ತು ಸೋಮವಾರ ಶಿವನಸಮುದ್ರ ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮಂಗಳವಾರ ಮೃತ ದೇಹ ಪಯನಿಯರ್ ಪವರ್ ಸ್ಟೇಷನ್ ಚಾನಲ್‌ನಲ್ಲಿ ದೊರೆತಿದೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಎಂ, ಕುರುಬ ಸಮುದಾಯ ಅವಹೇಳನ: ಎಸ್ಪಿಗೆ ದೂರು



ಕುರುಬ ಸಮುದಾಯ ಮತ್ತು ಸಿದ್ದರಾಮಯ್ಯ ಅವರನ್ನು ಅವಹೇಳನ ಮಾಡಿದ ವ್ಯಕ್ತಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ ಒತ್ತಾಯಿಸಿ ಜಿಲ್ಲಾ ಕುರುಬರ ಸಂಘ ಜಿಲ್ಲಾ ವರಿಷ್ಠಾಧಿಕಾರಿಕಾರಿ ಡಾ.ಬಿ.ಟಿ.ಕವಿತಾ ಅವರಿಗೆ ದೂರು ನೀಡಿದೆ.

ಚಾಮರಾಜನಗರ, ಆ. 12– ಕುರುಬ ಸಮುದಾಯ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವಹೇಳನ ಮಾಡಿದ ವ್ಯಕ್ತಿಗಳ ವಿರುದ್ದ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿ ಜಿಲ್ಲಾ ಕುರುಬರ ಸಂಘ ನಗರದ ಜಿಲ್ಲಾ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತರವರಿಗೆ ದೂರು ನೀಡಿತು.

ಮಂಡ್ಯ ಜಿಲ್ಲೆಯ ಬಸರಾಳು ಗ್ರಾಮದ ಬಸವರಾಜು, ಮಹೇಶ್ ಕುರುಬ ಸಮಾಜ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅವಹೇಳನವಾಗಿ ಮಾತನಾಡಿರುವುದು ನಮ್ಮ ಸಮುದಾಯಕ್ಕೆ ಧಕ್ಕೆ ಉಂಟು ಮಾಡಿದೆ. ಸಮಾಜದಲ್ಲಿ ಶಾಂತಿ, ಸಹ ಬಾಳ್ವೆಯಿಂದ ಬದುಕುತ್ತಿರುವ ಜಾತಿಜಾತಿಗಳ ಮೇಲೆ ಸಮಾಜ ಹಾಗೂ ಸಿದ್ದರಾಮಯ್ಯ ವಿರುದ್ಧ ಅವಾಚ್ಯ ಶಬ್ದ ಬಳಸಿದ್ದಾರೆ, ಅವರನ್ನು ಬಂಧಿಸಿ ಗಡಿಪಾರು ಮಾಡುವ ಮೂಲಕ ಮುಂದಿನ ದಿನಗಳಲ್ಲಿ ಇಂತಹ ಘಟನೆ ಮರುಕಳಿಸದಂತೆ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಹೆಚ್.ವಿ.ಚಂದ್ರು, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷ ನಂಜೇಗೌಡ, ಪ್ರಧಾನ ಕಾರ್ಯದರ್ಶಿ ಶಿವಲಿಂಗೇಗೌಡ, ಜಿಲ್ಲಾ ಉಪಾಧ್ಯಕ್ಷ ಬಸಪ್ಪನಪಾಳ್ಯ ನಟರಾಜು, ತಾಲೂಕು ಅಧ್ಯಕ್ಷ ಉಮೇಶ್ ಆರ್, ಕೊಂಡೇಗೌಡ, ಶಿವಪ್ಪ, ಸಿದ್ದರಾಮಯ್ಯ ಅಭಿಮಾನಿ ಬಳಗದ ಬೆಳ್ಳೇಗೌಡ, ಕುದೇರು ಲಿಂಗಣ್ಣ, ಸೊತ್ತನ ಹುಂಡಿ ಸೋಮಣ್ಣ, ರಾಷ್ಟ್ರೀಯ ಅಹಿಂದ ಅಧ್ಯಕ್ಷ ರೇವಣ್ಣ, ಮುಖಂಡರಾದ ಸ್ವಾಮಿ, ವಿ.ಸಿ.ಬಸವಣ್ಣ, ಮಾಲತಿ ಮಹದೇವಪ್ರಸಾದ್ ಇತರರು ಭಾಗವಹಿಸಿದ್ದರು.



ತಿಮ್ಮರಾಜಿಪುರ ವಸತಿ ಶಾಲೆಯಲ್ಲಿ ವಿಶ್ವ ಆನೆ ದಿನಾಚರಣೆ



ತಿಮ್ಮರಾಜಿಪುರದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ವಿಶ್ವ ಆನೆಗಳ ದಿನಾಚರಣೆ ಕಾರ್ಯಕ್ರಮವನ್ನು ನಡೆಸಲಾಯಿತು.

ಕೊಳ್ಳೇಗಾಲ, ಆ.12–ಪರಿಸರ ವ್ಯವಸ್ಥೆಯಲ್ಲಿ ಸಮತೋಲನ ಕಾಯ್ದುಕೊಳ್ಳಬೇಕಾದರೆ ಎಲ್ಲಾ ಪ್ರಾಣಿಗಳು ನಿರ್ದಿಷ್ಟ ಸಂಖ್ಯೆಯಲ್ಲಿರಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಪತಿ. ಹೇಳಿದ್ದಾರೆ.

ತಾಲೂಕಿನ ತಿಮ್ಮರಾಜಿಪುರದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಬಿ ಆರ್ ಟಿ ಹುಲಿ ಸಂರಕ್ಷಿತ ವನ್ಯಜೀವಿ ವಲಯ ಆಯೋಜಿಸಿದ್ದ ವಿಶ್ವ ಆನೆಗಳ ದಿನಾಚರಣೆ ಕಾರ್ಯ ಕ್ರಮದಲ್ಲಿ ಮಾತನಾಡಿದ ಅವರು, ಆನೆಗಳು ಸಾಂಘಿಕ ಜೀವಿಯಾಗಿದ್ದು ಮಾನವ ರಂತೆ ಬದುಕು, ಕುಟುಂಬ ನಿರ್ವಹಣೆ ಮಾಡುತ್ತದೆ ಮರಿಗಳ ಆರೈಕೆ, ಆಹಾರ, ಸಂರಕ್ಷಣೆಯ ಬಗ್ಗೆ ಅತಿ ಕಾಳಜಿ ವಹಿಸುತ್ತದೆ, ಹಾಗಾಗಿ ಆನೆಗಳ ಬಗ್ಗೆ ಅರಿತು ಅವುಗಳನ್ನು ಸಂರಕ್ಷಿಸುವ ಕೆಲಸವನ್ನು ನಾವೆಲ್ಲರೂ ಸೇರಿ ಮಾಡೋಣ. ಪರಿಸರ ವ್ಯವಸ್ಥೆಯಲ್ಲಿ ಆನೆಗಳ ಮಹತ್ವವನ್ನು ಸಾರಲು, ಅವುಗಳ ಬಗ್ಗೆ ಜಾಗೃತಿ ಮೂಡಿಸುವ ಮತ್ತು ಆವಾಸ ಸ್ಥಾನವಾದ ಕಾಡುಗಳನ್ನು ರಕ್ಷಿಸುವ ಉದ್ದೇಶದಿಂದ ಪ್ರತಿ ವರ್ಷ ಆ. 12ರಂದು ವಿಶ್ವ ಆನೆ ದಿನಾಚರಣೆಯನ್ನು ಆಚರಿಸಲಾಗುತ್ತಿದೆ ಎಂದು ಹೇಳಿದರು.

ಮುರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಶೋಯಬ್ ಪಾಷಾ ಮಾತನಾಡಿ, ಆನೆ ನಡೆದಿದ್ದೆ ದಾರಿ ಅದರ ಜೊತೆಗೆ ಆನೆಯ ತಿಂದಂತ ಹಣ್ಣು ಬೀಜಗಳನ್ನು ಇಡೀ ಅರಣ್ಯದಲ್ಲಿ ತಿರುಗುತ್ತಾ ಅರಣ್ಯ ಅಭಿವೃದ್ಧಿಗೆ ತನ್ನದೇ ಆದ ಮಹತ್ತರ ಕೊಡುಗೆಯನ್ನು ನೀಡುತ್ತದೆ, ವಿದ್ಯಾರ್ಥಿಗಳು ಅರಣ್ಯ ಮತ್ತು ವನ್ಯಜೀವಿಗಳ ಪ್ರಾಮುಖ್ಯತೆಯನ್ನು ತಿಳಿದುಕೊಂಡು ಪೋಷಕರಲ್ಲಿ ಅರಿವು ಮೂಡಿಸಬೇಕು, ವನ್ಯಜೀವಿಗಳನ್ನು ಸಂರಕ್ಷಿಸುವ ಕೆಲಸ ಎಲ್ಲರೂ ಮಾಡಬೇಕು, ವನ್ಯಜೀವಿಗಳು ನಮ್ಮೆಲ್ಲರ ಸಂಪತ್ತಾಗಿವೆ ಎಂದರು

ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಂಶುಪಾಲ ಮಹೇಶ್ ಮಾತನಾಡಿ ವಸತಿ ಶಾಲೆಯಲ್ಲಿ ಇಂತಹ ಕಾರ್ಯಕ್ರಮಗಳು ಆಯೋಜಿಸುತ್ತಿರುವುದರಿಂದ ವಿದ್ಯಾರ್ಥಿಗಳು ಮುಂದೆ ಭವಿಷ್ಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೊಡಗಿಸಿಕೊಂಡು ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು ಎಂದರು. ಕಾಡಂಚಿನ ವಿದ್ಯಾರ್ಥಿಗಳಿಗೆ ಸಮವಸ್ತ್ರ ಲೇಖನ ಸಾಮಗ್ರಿಗಳ ವಿತರಣೆ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ಆಯೋಜಿಸುವುದರ ಮೂಲಕ ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೂ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಆನೆಗಳ ಬಗ್ಗೆ ಸಾಕ್ಷ್ಯಚಿತ್ರವನ್ನು ತೋರಿಸಲಾಯಿತು. ಕಾರ್ಯಕ್ರಮದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಪ್ರಕಾಸ್ಕರ ಅಕ್ಷಯ್ ಅಶೋಕ್ ಮತ್ತು ಮಂಜುನಾಥ್, ವಲಯ ಅರಣ್ಯ ಅಧಿಕಾರಿಯಾದ ವಾಸು ಬಿ.ಎಸ್, ಉಪವಲಯ ಅಧಿಕಾರಿಗಳಾದ, ಭಾನು ಪ್ರಕಾಶ್, ರಘುರಾಮ್, ಗಸ್ತು ಅರಣ್ಯ ಪಾಲಕರಾದ ಸುನಿಲ್ ಬಸಪ್ಪ ಬೆಳವಿ, ಸಂಜುನಾಥ್ ಆಯಟ್ಟಿ, ಮಹೇಶ, ಕಚೇರಿಯ ಮಹೇಶ್ ಕುಮಾರ, ಅರಣ್ಯ ವೀಕ್ಷಕರಾದ ಶಿವಮ್ಮ, ಆಕಾಶ್ ಇದ್ದರು.

10 ವರ್ಷದ ಆಧಾರ್ ನವೀಕರಣಕ್ಕೆ ಮನವಿ

ಚಾಮರಾಜನಗರ, ಆಗಸ್ಟ್ 12– ಜಿಲ್ಲೆಯಾದ್ಯಂತ 10 ವರ್ಷಗಳ ಪೂರ್ವದಲ್ಲಿ ಪಡೆದಿರುವ ಆಧಾರ್ ಸಂಖ್ಯೆಯನ್ನು ಆಧಾರ್ ನೋಂದಣಿದಾರರು ಸದ್ಯದ ದಾಖಲೆಗಳಿಗೆ ಅನುಗುಣವಾಗಿ ನವೀಕರಣ ಮಾಡಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ತಿಳಿಸಿದ್ದಾರೆ.

ಆಧಾರ್ ನೊಂದಣಿ ಕಾರ್ಯವು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು ಕಳೆದ 10 ವರ್ಷಗಳ ಪೂರ್ವದಲ್ಲಿ ಪಡೆದಿ ರುವ ವಿಶಿಷ್ಟ ಗುರುತಿನ ಸಂಖ್ಯೆಯ ಆಧಾರ್ ನವೀಕರಣ ಮಾಡಿಸಿಕೊಳ್ಳುವಂತೆ ನವದೆಹಲಿಯ ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರ (ಯು.ಐ.ಡಿ.ಐ.ಎ) ನಿರ್ದೇಶನ ನೀಡಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ 10 ವರ್ಷಗಳ ಪೂರ್ವದಲ್ಲಿ ಪಡೆದಿರುವ ಆಧಾರ್ ಸಂಖ್ಯೆಯನ್ನು ಆಧಾರ್ ನೋಂದಣಿದಾರರು ಭಾರತೀಯ ವಿಶಿಷ್ಟ ಗುರುತು ಪ್ರಾಧಿಕಾರ (ಯು.ಐ.ಡಿ.ಐ.ಎ) ಹೊರಡಿಸಿರುವ ಪ್ರಮುಖ ದಾಖಲೆಗಳಾದ ವಿಳಾಸ ಪುರಾವೆ, ವ್ಯಕ್ತಿಯ ಗುರುತಿನ ಪುರಾವೆಗಳ ಜೊತೆಗೆ ಪ್ರಮುಖ ಮಾಹಿತಿಗಳನ್ನು ಸದ್ಯದ ದಾಖಲೆಗಳಿಗೆ ಅನುಗುಣವಾಗಿ ಉಚಿತವಾಗಿ 2026ರ ಜೂನ್ 14ರವರೆಗೆ https://myaadhaar.uidai.gov.in ರಲ್ಲಿ ನವೀಕರಣ ಮಾಡಿಸಿಕೊಳ್ಳುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಂಗಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ಉದ್ಘಾಟನೆ



ಹೊಂಗಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡವನ್ನು ಚಾಮುಲ್ ಅಧ್ಯಕ್ಷ ಎಂ ನಂಜುಂಡಸ್ವಾಮಿ ಉದ್ಘಾಟಿಸಿದರು.

ಗುಂಡ್ಲುಪೇಟೆ, ಆ.12(ಸೋಮ್.ಜಿ)– ತಾಲೂಕಿನ ಹೊಂಗಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಸಭಾ ಭವನ ಕಟ್ಟಡವನ್ನು ಚಾಮುಲ್ ಅಧ್ಯಕ್ಷ ಎಂ.ನಂಜುಂಡಸ್ವಾಮಿ ಉದ್ಘಾಟಿಸಿದರು.

ಚಾಮುಲ್ ವತಿಯಿಂದ ನೂತನ ಕಟ್ಟಡ, ದುರಸ್ತಿ ಹಾಗೂ ಸಭಾಭವನ ಕಟ್ಟಡಗಳಿಗೆ ಅನುದಾನ ನೀಡುತ್ತಿದ್ದು, ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು. ಶಿಲಾನ್ಯಾಸ ಅನಾವರಣ ಮಾಡಿದ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ಎಸ್. ನಂಜುಂಡ ಪ್ರಸಾದ್ ಮಾತನಾಡುತ್ತಾ ಚಾಮುಲ್ ವತಿಯಿಂದ ಸಾಕಷ್ಟು ಸೌಲಭ್ಯಗಳನ್ನು ನೀಡುತ್ತಿದ್ದು ರಾಸುವಿಮೆ, ಉತ್ಪಾದಕರಿಗೆ ಮರಣ ಪರಿಹಾರ, ಶೇಕಡ 50ರ ಅನುದಾನದಲ್ಲಿ ಮೇವು ತುಂಡರಿಸುವ ಯಂತ್ರ ಹಾಗೂ ಹಾಲು ಕರೆಯುವ ಯಂತ್ರ, ರಾಸುಗಳಿಗೆ ತುರ್ತು ಚಿಕಿತ್ಸೆಗೆ ವೈದ್ಯರ ಸೇವೆ ನೀಡುತ್ತಿದ್ದು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ತಿಳಿಸಿದರು

ಸಹಕಾರ ಸಂಘಗಳು ಸಹಕಾರ ತತ್ವದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು ಸಂಘದಲ್ಲಿ ಪರಸ್ಪರ ಸಹಕಾರದಿಂದ ಕಾರ್ಯ ನಿರ್ವಹಿಸಿದರೆ ಮಾತ್ರ ಸಂಘದ ಅಭಿವೃದ್ಧಿ ಸಾಧ್ಯ ಎಂದು ಎಮ್‌ಸಿಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಎಂ.ಪಿ.ಸುನಿಲ್ ತಿಳಿಸಿದರು. ವಿಸ್ತರಣಾಧಿಕಾರಿ ಪ್ರಕಾಶ್.ಹೆಚ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಚಂದ್ರಶೇಖರ್ ಸಂಘದ ಅಧ್ಯಕ್ಷ ಮಂಜಪ್ಪ ಉಪಾಧ್ಯಕ್ಷ ಲೋಕೇಶ್ ಸಂಘದ ನಿರ್ದೇಶಕ ಮಹದೇವಪ್ಪ, ಎಚ್‌ಎನ್ ಶಿವಪ್ಪ, ಎಚ್.ಎಸ್.ಮಹದೇವಪ್ಪ, ಶಂಭುಲಿಂಗಪ್ಪ, ಮಹದೇವಪ್ಪ, ನಾಗರಾಜಶೆಟ್ಟಿ, ಅನ್ನಪೂರ್ಣಮ್ಮ, ಶಿವಮ್ಮ, ಗೌರಮ್ಮ, ಮುಖ್ಯ ಕಾರ್ಯ ನಿರ್ವಾಹಕ ಎಚ್.ಬಿ ನಾಗಮಲ್ಲಪ್ಪ ಸಿಬ್ಬಂದಿ ಮಹದೇವಪ್ಪ, ಶಿವಮಲಪ್ಪ, ಬೀರೇಗೌಡ ಹಾಗೂ ಸಂಘದ ಸದಸ್ಯರು ಹಾಗೂ ಗ್ರಾಮಸ್ಥರು ಹಾಜರಿದ್ದರು

ಗುಂಡ್ಲುಪೇಟೆಗೆ ಇಂದು ಲೋಕಾಯುಕ್ತ ಭೇಟಿ

ಚಾಮರಾಜನಗರ, ಆ. 12– ಜಿಲ್ಲೆಯ ಲೋಕಾಯುಕ್ತ ಕಚೇರಿಯ ಅಧಿಕಾರಿಗಳು ಗುಂಡುಪೇಟೆ ಪ್ರವಾಸಿ ಮಂದಿರಕ್ಕೆ (ಐ.ಬಿ) ಆ.13 ರ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ರವರೆಗೆ ಭೇಟಿ ನೀಡಿ ಸಾರ್ವಜನಿಕರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಭರ್ತಿ ಮಾಡಿದ ದೂರು ಅರ್ಜಿಗಳನ್ನು ಸ್ವೀಕರಿಸಿ, ವಿಚಾರಣೆ ಮಾಡುವರು. ಸರ್ಕಾರಿ ಕಚೇರಿಗಳಲ್ಲಿ ಕೆಲಸದ ಅನಗತ್ಯ ವಿಳಂಬ ಹಾಗೂ ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ ಅಥವಾ ನೌಕರರ ವಿರುದ್ಧ ಸಾರ್ವಜನಿಕರು ದೂರುಗಳನ್ನು ನಿಗದಿತ ನಮೂನೆ–1 ಮತ್ತು 2 ರಲ್ಲಿ ಭರ್ತಿ ಮಾಡಿ ನೀಡಬಹುದಾಗಿದೆ. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ರಾಜ್ಯ ಲೋಕಾಯುಕ್ತ ಉಪಾಧೀಕ್ಷಕ ಜಿ.ಎಸ್ ಗಜೇಂದ್ರ ಪ್ರಸಾದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕರಿಂದ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ



ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ಸಮವಸ್ತ್ರ ನೋಟು ಬುಕ್‌ಗಳನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ವಿತರಿಸಿದರು.

ಕೊಳ್ಳೇಗಾಲ, ಆ.12– ಪಟ್ಟಣದ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ಸಮವಸ್ತ್ರ ಹಾಗೂ ನೋಟು ಬುಕ್‌ಗಳನ್ನು ಶಾಸಕ ಎ.ಆರ್. ಕೃಷ್ಣಮೂರ್ತಿ ವಿತರಣೆ ಮಾಡಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 70 ಬಾಲಕರು ಹಾಗೂ 50 ಬಾಲಕಿಯರಿಗೆ ಟ್ರಾಕ್ ಶೂಟ್, ಟೀ ಶರ್ಟ್, ನೋಟುಬುಕ್ ವಿತರಿಸಿ ಸರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದವರ್ಗ ಹಾಗೂ ಅಲ್ಪ ಸಂಖ್ಯಾತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅನೇಕ ಸೌಲಭ್ಯಗಳನ್ನು ಜಾರಿಗೆ ತಂದಿದೆ. ಇದರ ಪ್ರಯೋಜನವನ್ನು ಮಕ್ಕಳು ಸದುಪಯೋಗಪಡಿಸಿಕೊಂಡು ಉತ್ತಮ ವಿದ್ಯಾರ್ಥಿಯಾಗಿ ಹೊರಹೊಮ್ಮುವ ಮೂಲಕ ಉನ್ನತ ಹುದ್ದೆಯನ್ನು ಅಲಂಕರಿಸುವ ಗುರಿ ಹೊಂದಬೇಕೆಂದರು.

ನಗರಸಭೆ ಅಧ್ಯಕ್ಷೆ ರೇಖಾ, ಸದಸ್ಯರಾದ ಸುಮಾ ಸುಬ್ಬಣ್ಣ, ಶಾಂತರಾಜು, ಡಿವೈಎಸ್ಪಿ ಧರ್ಮೇಂದ್ರ, ಸರ್ಕಲ್ ಇನ್ಸ್‌ಪೆಕ್ಟರ್ ಶಿವಮಾದಯ್ಯ, ಪಿಎಸ್‌ಐ ಉಮಾವತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ವಿಶ್ವನಾಥ್ ಎನ್, ತಾಲೂಕು ಅಧಿಕಾರಿ ಶಿವರಾಜು, ಎಂ, ನಿಲಯ ಮೇಲ್ವಿಚಾರಕರು ಲೋಹಿತ್. ಆರ್, ನೇತ್ರಕಲಾ, ಪ್ರವೀಣ್ ಕುಮಾರ್ ಇತರರು ಇದ್ದರು.

ಮೈಸೂರು ಕೋ-ಆಪರೇಟಿವ್ ಬ್ಯಾಂಕ್‌ನಿಂದ ಆರೋಗ್ಯ, ಕಣ್ಣಿನ ತಪಾಸಣಾ ಶಿಬಿರ



ಸುಯೋಗ್ ಆಸ್ಪತ್ರೆ (ಹೃದ್ರೋಗ ತಪಾಸಣೆ), ನ್ಯೂ ಪ್ರಿಯದರ್ಶಿನಿ ಆಸ್ಪತ್ರೆ (ಕ್ಯಾನ್ಸರ್ ತಪಾಸಣಾ), ನಿರ್ಮಲಾ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ (ಮೂಳೆ ಮತ್ತು ಕೀಲು), ಕೆ.ಆರ್.ಆಸ್ಪತ್ರೆ ಜಿಲ್ಲಾ ಸಂಚಾರಿ ನೇತ್ರಾ ಚಿಕಿತ್ಸಾ ಘಟಕ, ASG ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ಮೈಸೂರಿನ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ಆವರಣದಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಮೈಸೂರು, ಆ.12– ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ವತಿಯಿಂದ ಆಯೋಜಿಸಿರುವ ಎರಡು ದಿನಗಳ ಆರೋಗ್ಯ ಹಾಗೂ ಕಣ್ಣಿನ ತಪಾಸಣಾ ಶಿಬಿರಕ್ಕೆ ಮಂಗಳವಾರ ಚಾಲನೆ ದೊರಕಿತು.

ಶಿಬಿರಕ್ಕೆ ಚಾಲನೆ ನೀಡಿದ ಬ್ಯಾಂಕ್‌ನ ಜೆ.ಯೋಗೇಶ್ ಮಾತನಾಡಿ, ಬ್ಯಾಂಕಿನ ಸದಸ್ಯರ ಅನುಕೂಲಕ್ಕಾಗಿ ಈ ವರ್ಷವೂ ಆರೋಗ್ಯ ಶಿಬಿರ ಆಯೋಜಿಸಿದ್ದು, ಎಲ್ಲಾ ಸದಸ್ಯರೂ ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಈ ವೇಳೆ ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪಿ.ರಾಜೇಶ್ವರಿ, ಎನ್.ಯೋಗಾನಂದ, ಎಸ್‌ಬಿಎಂ ಮಂಜು, ಜಿ.ನಿರಂಜನ್, ಸಿ.ಚಂದ್ರಶೇಖರ್, ಹೆಚ್.ಹರೀಶ್ ಕುಮಾರ್, ಸೋಮಣ್ಣ, ಆರ್.ರವಿಕುಮಾರ್(ರಾಜಕೀಯ), ಎಂ.ಪ್ರಮೀಳ, ವೃತ್ತಿಪರ ನಿರ್ದೇಶಕರಾದ ಎಂ.ವೈ. ರಮೇಶ್ ಗೌಡ, ಸಿ.ಎಸ್.ರಾಮಕೃಷ್ಣಯ್ಯ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಹರ್ಷಿತ್ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಶಿಬಿರದಲ್ಲಿ ಸುಯೋಗ್ ಆಸ್ಪತ್ರೆಯಿಂದ ಹೃದ್ರೋಗ ತಪಾಸಣೆ, ನ್ಯೂ ಪ್ರಿಯದರ್ಶಿನಿ ಆಸ್ಪತ್ರೆಯಿಂದ ಕ್ಯಾನ್ಸರ್ ತಪಾಸಣೆ, ನಿರ್ಮಲಾ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಿಂದ ಮೂಳೆ ಮತ್ತು ಕೀಲು ತಪಾಸಣೆ, ಕೆ.ಆರ್.ಆಸ್ಪತ್ರೆ ಜಿಲ್ಲಾ ಸಂಚಾರಿ ನೇತ್ರ ಘಟಕದಿಂದ ನೇತ್ರ ತಪಾಸಣೆ ಹಾಗೂ ಎಎಸ್‌ಜಿ ಆಸ್ಪತ್ರೆಯಿಂದ ಕಣ್ಣಿನ ತಪಾಸಣೆ ಸೇವೆ ಕಲ್ಪಿಸಿದ್ದು, ಮೊದಲ ದಿನ 200ಕ್ಕೂ ಹೆಚ್ಚು ಸದಸ್ಯರು ಪ್ರಯೋಜನ ಪಡೆದರು. ಇನ್ನೊಂದು ದಿನ ಆರೋಗ್ಯ ತಪಾಸಣೆ ಶಿಬಿರ ಇರಲಿದೆ.

ಅಂತೂ ಸಂಗೀತ ವಿವಿಗೆ ಸಿಕ್ತು ಸ್ವಂತ ನೆಲೆ!

●ಮೈಸೂರು ಹೊರವಲಯದಲ್ಲಿ ಇನ್ನು ಮುಂದೆ ಸಂಗೀತ ನಿನಾದ ●ನಾನಾ ಸಮಸ್ಯೆಗಳ ನಡುವೆಯೂ ಸಾಧನೆಯತ್ತ ತವಕ



ನಾಡನಹಳ್ಳಿ ಸಮೀಪ ಐದೂವರೆ ಎಕರೆ ಜಾಗದಲ್ಲಿ ನಿರ್ಮಿಸಲಾಗುತ್ತಿರುವ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ-ಪ್ರದರ್ಶಕ ಕಲೆಗಳ ವಿವಿ ಕಟ್ಟಡ.

●ಮೋಹನ್ ಕಾಯಕ

ಮೈಸೂರು,ಆ.12–ವಿಶ್ವ ಪ್ರಸಿದ್ಧ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ, ಸಂಗೀತವೇ ಸ್ವಾಸ್ಥ್ಯ ಸಮಾಜದ ಮೂಲ ಎಂಬುದನ್ನು ನಾಡಿನೆಲ್ಲೆಡೆ ಪಸರಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾನಿಲಯ ತನ್ನ ಬೇರನ್ನು ಇನ್ನಷ್ಟು ಗಟ್ಟಿಗೊಳಿಸಿಕೊಂಡಿದೆ...!

ಸಂಗೀತ ಮತ್ತು ಪ್ರದರ್ಶಕ ಕಲಾ ಪ್ರಕಾರಗಳಲ್ಲಿ ಅಭ್ಯಾಸ, ಅಧ್ಯಯನ ನಡೆಸುವ ವಿದ್ಯಾರ್ಥಿಗಳಿಗೆ ವಿದ್ವತ್ ನೀಡುವ ಮೂಲಕ ಸಂಗೀತ, ನೃತ್ಯ ಕಲಾ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡುತ್ತಿರುವ ಸಂಗೀತ ವಿವಿಗೆ ಕಡೆಗೂ ಅಧಿಕೃತ ಹಾಗೂ ಶಾಶ್ವತ ನೆಲೆ ದಕ್ಕಿದ್ದು, ಆರ್ಥಿಕ ಸಂಕಷ್ಟದ ನಡುವೆಯೂ ತನ್ನ ಕಾರ್ಯವ್ಯಾಪ್ತಿಯನ್ನು ಇನ್ನಷ್ಟು ವಿಸ್ತಾರಗೊಳಿಸಲು ಉತ್ಸುಕವಾಗಿದೆ.

ಅರಮನೆ ನಗರಿಯಲ್ಲಿ ಅರಳಲು ಸ್ವಂತ ಸೂರಿಲ್ಲದೆ ವಿದ್ಯಾರ್ಥಿಗಳನ್ನು ಅತ್ತಿತ್ತ ಅಲೆದಾಡಿಸಿ, ಪೇಚಿಗೆ ಸಿಲುಕಿದ್ದ ರಾಜ್ಯದ ಏಕೈಕ ಸಂಗೀತ ವಿವಿಗೆ 15 ವರ್ಷಗಳ ಬಳಿಕ ಮೈಸೂರಿನ ನಾಡನಹಳ್ಳಿ ಸಮೀಪ ಐದೂವರೆ ಎಕರೆ ಜಾಗದಲ್ಲಿ ಸ್ವಂತ ಸೂರಿನ ಆಸರೆ ಲಭಿಸಿದ್ದು, ಕಲಾ ಪ್ರಕಾರಗಳ ಕಲಿಕಾಭ್ಯಾಸಕ್ಕೆ ನಿರ್ಮಾಣಗೊಂಡಿರುವ ಆಧುನಿಕ ಗುರುಕುಲ ಮಾದರಿಯ ಕುಟೀರಗಳು ಕಣ್ಮನ ಸೆಳೆಯುತ್ತಿವೆ.

ದಕ್ಷಿಣ ಭಾರತದಲ್ಲಿ ಸಂಗೀತ ಕ್ಷೇತ್ರಕ್ಕೆ ಮೀಸಲಾಗಿರುವ ಪೂರ್ಣ ಪ್ರಮಾಣದ ಏಕೈಕ ವಿಶ್ವವಿದ್ಯಾನಿಲಯವಾದ ಸಂಗೀತ ವಿವಿ ಮೈಸೂರಿನಲ್ಲಿ 2009ರಲ್ಲಿ ಆರಂಭವಾಯಿತು. ಅಂದಿನಿಂದ ಸಂಗೀತ ಮತ್ತು ಪ್ರದರ್ಶಕ ಕಲಾ ಪ್ರಕಾರಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಡಿಪ್ಲೊಮಾ, ಸ್ನಾತಕ, ಸ್ನಾತಕೋತ್ತರ ಹಾಗೂ ಡಿ.ಲಿಟ್ ಸೇರಿದಂತೆ ಉನ್ನತ ಶಿಕ್ಷಣ ನೀಡುತ್ತಿರುವ ಸಂಗೀತ ವಿವಿಯು ಸ್ವಂತ ಕಟ್ಟಡ, ಹಾಸ್ಟೆಲ್ ಸೌಲಭ್ಯ, ಕಾಯಂ ನೌಕರರು ಹಾಗೂ ಮೂಲ ಸೌಲಭ್ಯವಿಲ್ಲದೆ ಹಿನ್ನಡೆ ಅನುಭವಿಸಿತ್ತು. ಸಾಲು ಸಾಲು ಅಡೆ-ತಡೆಗಳ ನಡುವೆ ತನ್ನ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಬಂದಿರುವ ಸಂಗೀತ ವಿವಿಗೆ ಶಾಶ್ವತ ನೆಲೆ ಸಿಕ್ಕಿರುವುದು ವಿದ್ಯಾರ್ಥಿಗಳಲ್ಲಿ, ಕಲಾಭಿಮಾನಿಗಳಲ್ಲಿ, ಮೈಸೂರಿಗರಲ್ಲಿ ಸಂತಸ ಮೂಡಿಸಿದೆ.

ಅದರಲ್ಲೂ ನಾಡಅಧಿದೇವತೆ ಚಾಮುಂಡೇಶ್ವರಿ ತಾಯಿಯ ಚಾಮುಂಡಿ ಬೆಟ್ಟದ ತಪ್ಪಲಿನ ಸುಂದರ ತಾಣದಲ್ಲಿ, ಗಿಡ-ಮರಗಳ ನಡುವೆ ಸಂಗೀತ ಹಾಗೂ ನೃತ್ಯಾಭ್ಯಾಸಗಳನ್ನು ನಡೆಸಲು ಸಂಗೀತ ವಿವಿ ವಿದ್ಯಾರ್ಥಿಗಳ ಮನಸ್ಸು ಹಾತೊರೆಯುತ್ತಿದೆ. ಹಾಗೆಯೇ ಹಳೇ ಕಾಲದ ಗುರುಕುಲ ಮಾದರಿಯಲ್ಲಿ ನಿರ್ಮಾಣಗೊಂಡಿರುವ ಆಧುನಿಕ ಕುಟೀರಗಳು, ವಿಶಾಲ ಪ್ರದೇಶ, ಸುತ್ತಲಿನ ಕಾಂಪೌಂಡ್ ನಡುವೆ ನೆರಳಾಗಲು ಸಿದ್ಧವಾಗುತ್ತಿರುವ 500ಕ್ಕೂ ಹೆಚ್ಚು ವಿವಿಧ ಬಗೆಯ ಗಿಡಗಳ ಸಾಲು ನಯನ ಮನೋಹರವಾಗಿವೆ.

ಮೊದಲ ಹಂತದ ಕಾಮಗಾರಿ ಪೂರ್ಣ: ಮೈಸೂರಿನ ರಿಂಗ್‌ರಸ್ತೆ ಹೊರಗಿರುವ ನಾಡನಹಳ್ಳಿ (ಸರ್ದಾರ್ ವಲ್ಲಭಾಯಿ ಪಟೇಲ್) ಸಮೀಪ ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಐದೂವರೆ ಎಕರೆ ಜಾಗ ಜಾಗವನ್ನು 2020ರಲ್ಲಿ ಸಂಗೀತ ವಿವಿ ಹೆಸರಿಗೆ ನೋಂದಣಿಯಾಯಿತು. ಆದರೆ, ವಿವಿಗೆ ಯಾವುದೇ ಅನುದಾನವಿಲ್ಲದ ಕಾರಣ ಕಟ್ಟಡ ಕಾಮಗಾರಿ ವಿಳಂಬವಾಯಿತು. ಈ ವೇಳೆ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ ಅವರ ಆಸ್ಥೆಯಿಂದ ಸಂಗೀತ ವಿವಿ ಹೊಸ ಕಟ್ಟಡಕ್ಕೆ ಇತ್ತೀಚಿಗೆ ಗುದ್ದಲಿಪೂಜೆ ನಡೆಯಿತು. ಸರಕಾರದ ನೆರವಿಲ್ಲದೆ ವಿವಿ ಆಂತರಿಕ ಸಂಪನ್ಮೂಲವನ್ನೇ ಬಳಸಿಕೊಂಡು ಸುಮಾರು 4.5 ಕೋಟಿ ರೂ. ವೆಚ್ಚದಲ್ಲಿ ಮೊದಲ ಹಂತದ ಕಾಮಗಾರಿ ಪೂರ್ಣಗೊಂಡಿದೆ.

ಗುರುಕುಲ ಮಾದರಿಯಲ್ಲಿ ಸಂಗೀತ, ಪ್ರದರ್ಶಕ ಕಲೆಗಳ ಅಧ್ಯಯನ: ಸಂಗೀತ ವಿವಿಯ ಹೊಸ ಸ್ಥಳದಲ್ಲಿ ಗುರುಕುಲ ಮಾದರಿಯಲ್ಲಿ 8 ಕುಟೀರ ಸಿದ್ಧಗೊಂಡಿದ್ದು, 4 ತರಗತಿಗಳನ್ನು ನಡೆಸಬಹುದಾದ ಸೆಮಿನಾರ್ ಹಾಲ್‌ಗಳನ್ನು ನಿರ್ಮಾಣ ಮಾಡಲಾಗಿದೆ. ವಿವಿಯ ಹೊಸ ಕಟ್ಟಡದ ಮೊದಲ ಹಂತದ ಕಾಮಗಾರಿ ಮುಕ್ತಾಯಗೊಂಡಿದ್ದು, ವಿವಿ ಸುತ್ತಲಿನ ತಡೆಗೋಡೆ ನಿರ್ಮಾಣ ಮಾಡಲಾಗುತ್ತಿದೆ.

ಪ್ರಸಕ್ತ ಸಾಲಿನ ತರಗತಿಗಳು ಕಾರ್ಯಾರಂಭ: ಸಂಗೀತ ವಿಶ್ವ ವಿದ್ಯಾನಿಲಯದ ಹೊಸ ಸ್ಥಳದಲ್ಲಿ ಪ್ರಸಕ್ತ ವರ್ಷದಿಂದಲೇ ಶೈಕ್ಷಣಿಕ ಚಟುವಟಿಕೆಗಳ ಕಾರ್ಯಾರಂಭ ಮಾಡಲಾಗುವುದು. ಈಗಾಗಲೇ ಮೊದಲ ಹಂತದ ಕಾಮಗಾರಿ ಮುಗಿದಿದ್ದು, 2ನೇ ಹಂತದ ಕಾಮಗಾರಿಯಲ್ಲಿ ಆಡಳಿತ ವಿಭಾಗಕ್ಕೆ ಸಂಬಂಧಿಸಿದ ಕುಲಪತಿ, ಕುಲಸಚಿವರ ಕೊಠಡಿಗಳು ನಿರ್ಮಾಣಗೊಳ್ಳಲಿವೆ. ಬಳಿಕ ಹಾಸ್ಟೆಲ್ ಕಟ್ಟಡವೂ ನಿರ್ಮಾಣಗೊಳ್ಳಲಿದೆ ಎಂದು ಸಂಗೀತ ವಿವಿ ಕುಲಪತಿ ಡಾ.ನಾಗೇಶ್ ವಿ.ಬೆಟ್ಟಕೋಟೆ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ: ಸಂಗೀತ ಮತ್ತು ಪ್ರದರ್ಶಕ ಕಲೆಗಳ ಅಧ್ಯಯನಕ್ಕಾಗಿಯೇ ಪ್ರತ್ಯೇಕವಾಗಿರುವ ರಾಜ್ಯದ ಏಕೈಕ ಸಂಗೀತ ವಿಶ್ವವಿದ್ಯಾನಿಲಯ ಇದಾಗಿದ್ದು, ಕಳೆದ 15 ವರ್ಷದಲ್ಲಿ ಸಾವಿರಾರು ವಿದ್ಯಾರ್ಥಿಗಳನ್ನು ಸಂಗೀತ ಲೋಕಕ್ಕೆ ಪರಿಚಯಿಸಿದೆ. ಖ್ಯಾತ ಮಾಗಜೀನ್ ನಡೆಸಿದ ಸರ್ವೆಯಲ್ಲಿಯೂ ಟಾಪ್ 10ರೊಳಗೆ ಸ್ಥಾನ ಪಡೆಯುವ ಮೂಲಕ ದೇಶ-ವಿದೇಶಗಳಿಗೆ ಪರಿಚಿತವಾಗಿರುವ ಸಂಗೀತ ವಿವಿ ಮುಂದಿನ ದಿನಗಳಲ್ಲಿ ದೊಡ್ಡಮಟ್ಟದಲ್ಲಿ ತನ್ನ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ವಿಸ್ತಾರಗೊಳಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈಗಾಗಲೇ 80ಕ್ಕೂ ಹೆಚ್ಚು ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಪ್ರೋತ್ಸಾಹ ನೀಡುತ್ತಿರುವ ಸಂಸ್ಥೆಗಳು ವಿವಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ವಿವಿಯ ಇತಿ-ಮಿತಿಯೊಳಗೆ ಹೊಸ ಸ್ಥಳದಲ್ಲಿ ಅಭಿವೃದ್ಧಿ ಹಾಗೂ ತನ್ನ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಿದೆ. ಭರತನಾಟ್ಯ, ಡ್ರಾಮಾ, ಹಿಂದೂಸ್ತಾನಿ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ, ಕೂಚಿಪುಡಿ, ಕಥಕ್, ವೀಣೆ, ಜಾನಪದ ಅಧ್ಯಯನ ಮತ್ತು ಅಭ್ಯಾಸವನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ ಎಂದರು.

ಎಲ್ಲಾ ಅಡೆತಡೆ ನಿವಾರಣೆ: ಈ ಮೊದಲು ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ಸಂಗೀತ ವಿವಿಗೆ ಜಾಗ ನೀಡಲಾಗಿತ್ತು. ಆದರೆ, ಇದು ಮೈಸೂರಿನಿಂದ 43 ಕಿ. ಮೀ. ದೂರದಲ್ಲಿತ್ತು. ನಿಯಮದ ಪ್ರಕಾರ ಕೇಂದ್ರ ಸ್ಥಾನದ 20 ಕಿ.ಮೀ. ಒಳಗಡೆ ವಿವಿ ಇರಬೇಕೆಂಬ ನಿಯಮವಿದೆ. ಹಾಗಾಗಿ ಪ್ರಸ್ತಾಪವನ್ನು ಕೈಬಿಡಲಾಯಿತು. ಆದರೆ, ನಂತರ ನಗರದ ಸಾತಗಳ್ಳಿಯಲ್ಲಿ ನಿವೇಶನ ನೀಡಿದರೂ ಅದರ ಮೇಲೆ ಹೈಟೆನ್ಷನ್ ತಂತಿ ಹಾದು ಹೋಗಿದ್ದು, ಯಾವುದೇ ಕಟ್ಟಡ ಕಟ್ಟಲು ಸಾಧ್ಯವಿಲ್ಲದಂತಿತ್ತು. ಮಂಡಕಳ್ಳಿಯಲ್ಲಿ ಮುಕ್ತ ವಿವಿ ಕಟ್ಟಡ ನೀಡಿದರೂ ಅಲ್ಲಿ ಬಾಡಿಗೆ 50 ಸಾವಿರ ರೂ. ನೀಡಿದರೆ ವಿದ್ಯುತ್ ವೆಚ್ಚವೇ 1.5 ಲಕ್ಷ ರೂ. ಬರುವ ಕಾರಣ ಅಲ್ಲಿಯೂ ಶಾಶ್ವತ ನೆಲೆ ಸಿಗಲಿಲ್ಲ. ವರುಣಾ ಬಳಿ 100 ಎಕರೆ ನೀಡಿದರೂ ಅದು ಅರಣ್ಯ ಇಲಾಖೆಗೆ ಸೇರಿದ ಕಾರಣ ಅದು ಕೈಗೂಡಲಿಲ್ಲ. ಅಂತಿಮವಾಗಿ ಇದೀಗ ಸಿಎ ಸೈಟ್ ಸರ್ದಾರ್ ವಲ್ಲಭ ಭಾಯಿ ನಗರದ ಬಳಿ ಸಿಕ್ಕಿದ್ದು, ಎಲ್ಲಾ ಅಡೆ ತಡೆ ನಿವಾರಣೆಯಾದಂತಾಗಿದೆ. ಹಾಗೆಯೇ ವಿವಿಯ ರಾಜ್ಯಮಟ್ಟದ ಸಂಗೀತ, ನೃತ್ಯ ಪರೀಕ್ಷೆಯ ಎಲ್ಲಾ ಕೆಲಸಗಳು ಬಲ್ಲಾಳ್ ಸರ್ಕಲ್ ಬಳಿ ಇರುವ ಕಟ್ಟಡದಲ್ಲೇ ನಡೆಯಲಿದೆ ಎಂದು ಡಾ.ನಾಗೇಶ್ ಬೆಟ್ಟಕೋಟೆ ಮಾಹಿತಿ ನೀಡಿದರು.

ಸಂಗೀತ ವಿವಿ ಆವರಣದಲ್ಲಿ ದಸರಾ ಸಾಂಸ್ಕೃತಿಕ ವೇದಿಕೆ...!

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಸಂದರ್ಭದಲ್ಲಿ ಕಲಾಮಂದಿರ, ಚಿಕ್ಕ ಗಡಿಯಾರ ಸೇರಿದಂತೆ ವಿವಿಧ ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಅದೇ ರೀತಿ ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಮೀಸಲಾಗಿರುವ ಸಂಗೀತ ವಿವಿ ಆವರಣದಲ್ಲಿಯೂ ಸಾಂಸ್ಕೃತಿಕ ವೇದಿಕೆಯೊಂದನ್ನು ನಿರ್ಮಿಸುವುದರಿಂದ ವಿದ್ಯಾರ್ಥಿಗಳು ಮಾತ್ರವಲ್ಲದೆ ಅಪಾರ ಜನರಿಗೆ ವಿವಿಯ ಪರಿಚಯದ ಜೊತೆಗೆ ಸಾಂಸ್ಕೃತಿಕ ವೇದಿಕೆ ಕಾರ್ಯಕ್ರಮ ಯಶಸ್ವಿಯಾಗಲಿದೆ. ಈ ಬಗ್ಗೆ ಜಿಲ್ಲಾಡಳಿತ ಗಮನಿಸಬೇಕು. ಅಲ್ಲದೆ ಮುಂದಿನ ದಿನಗಳಲ್ಲಿ ಮೈಸೂರು ಸುತ್ತಲೂ ಮತ್ತೊಂದು ರಿಂಗ್ ರಸ್ತೆ(ಪೆರಿಫೆರಲ್ ರಸ್ತೆ) ಬರುವುದರಿಂದ ಹೊಸ ಸ್ಥಳದಲ್ಲಿಯೂ ಸಂಗೀತ ವಿವಿ ನಗರದ ಹೃದಯ ಭಾಗವಾಗಲಿದೆ.



–ಡಾ.ನಾಗೇಶ್ ವಿ. ಬೆಟ್ಟಕೋಟೆ, ಕುಲಪತಿ, ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ-ಪ್ರದರ್ಶಕ ಕಲೆಗಳ ವಿವಿ.

ಕಾಯಂ ನೌಕರರ ಕೊರತೆ...

ಸಂಗೀತ ವಿಶ್ವವಿದ್ಯಾನಿಲಯ ಆರಂಭವಾದಾಗಿನಿಂದಲೂ ಕಾಯಂ ನೌಕರರ ಕೊರತೆ ಇದ್ದು, ರಾಜ್ಯ ಸರ್ಕಾರ ಸದ್ಯದಲ್ಲಿಯೇ ಕಾಯಂ ನೌಕರರ ನೇಮಕಕ್ಕೆ ಆದೇಶ ಹೊರಡಿಸುವ ಸಾಧ್ಯತೆ ಇದೆ. ಸರ್ಕಾರ ಸಂಬಳ ನೀಡಲು ಮಾತ್ರವೇ ಅನುದಾನ ನೀಡುತ್ತಿದ್ದು, ಉಳಿದೆಲ್ಲಾ ಚಟುವಟಿಕೆಗಳನ್ನು ವಿವಿಯ ಆಂತರಿಕ ಸಂಪನ್ಮೂಲವನ್ನು ಬಳಸಿಕೊಂಡು ನಡೆಸಲಾಗುತ್ತಿದೆ. ಅತಿಥಿ ಉಪನ್ಯಾಸಕರು ಹೆಚ್ಚಾಗಿರುವುದರಿಂದ ಅಭಿವೃದ್ಧಿಗೆ 1 ಕೋಟಿ ರೂ. ಅನುದಾನ ನೀಡಲಾಗಿದೆ. ಶೈಕ್ಷಣಿಕ ಗುಣಮಟ್ಟ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಪ್ರತೀ ವರ್ಷ ಹೊಸದಾಗಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ.

–ಡಾ.ನಾಗೇಶ್ ವಿ.ಬೆಟ್ಟಕೋಟೆ

ಆ.15ಕ್ಕೆ ಕುವೆಂಪು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್ ಉದ್ಘಾಟನೆ

ಮೈಸೂರು,ಆ.12(ಎಂಟಿವೈ)– ಮೈಸೂರಿನ ಕುವೆಂಪುನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಆ.15ರಂದು ಸಂಜೆ 4.30ಕ್ಕೆ ನೂತನವಾಗಿ ಅಸ್ತಿತ್ವಕ್ಕೆ ತಂದಿರುವ ಕುವೆಂಪು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್ ಉದ್ಘಾಟನಾ ಸಮಾರಂಭ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಆರ್.ಎಸ್. ರಘುರಾಮೇಗೌಡ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿಚುಂಚನಗಿರಿ ಮಠದ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಶಾಖಾ ಮಠದ ಸ್ವಾಮೀಜಿಗಳಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಡಾ. ನಿಶ್ಚಲಾನಂದನಾಥ ಸ್ವಾಮೀಜಿ, ಕಾಗಿನೆಲೆ ಶಿವಾನಂದಪುರಿ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನೂತನ ಟ್ರಸ್ಟ್ ಅನ್ನು ಸಚಿವ ಕೆ. ವೆಂಕಟೇಶ್ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ. ದೇವೇಗೌಡರು ನಿವೃತ್ತ ನ್ಯಾಯಮೂರ್ತಿ ಎನ್. ಗೋಪಾಲಗೌಡ, ಸಾಹಿತಿಗಳಾದ ಟಿ.ತಿಮ್ಮೇಗೌಡ, ಡಾ.ಸಿ.ಪಿ.ಕೃಷ್ಣಕುಮಾರ್, ವಿಶ್ರಾಂತ ಕುಲಪತಿ ಡಾ.ಕೆ.ಚಿದಾ ನಂದಗೌಡ, ನಿವೃತ್ತ ಅಧೀನ ಕಾರ್ಯದರ್ಶಿ ಎಂ.ಕೆ.ವೆಂಕಟರಾಮು ಅವರಿಗೆ ಕುವೆಂಪು ಸಾಂಸ್ಕೃತಿಕ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ್ ಒಡೆಯರ್ ಅವರು ಡಾ. ಬಾಲಗಂಗಾಧರನಾಥ ಸ್ವಾಮೀಜಿ ಸಮಾಜ ಸೇವಾ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ವಿಶ್ವ ಒಕ್ಕಲಿಗರ ಮಹಾಸಂಸ್ಥಾನದ ಪೀಠಾಧಿಪತಿ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ವೈದ್ಯರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವೀಧರರಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಗುತ್ತದೆ. ಶಾಸಕ ಕೆ. ಹರೀಶ್ ಗೌಡ ಅವರು ಪೌರ ಕಾರ್ಮಿಕರನ್ನು ಸನ್ಮಾನಿಸುವರು, ಮಾಜಿ ಶಾಸಕ ಕೆಂಪೀರೇಗೌಡರ ಸ್ಮರಣಾರ್ಥ ಕ್ರೀಡಾ ವಿಜೇತರಿಗೆ ಬಹುಮಾನ ವಿತರಿಸಲಾಗುವುದು. ಟ್ರಸ್ಟ್ ಅಧ್ಯಕ್ಷ ಹೆಚ್.ಕೆ. ರಾಮು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನೂತನ ಟ್ರಸ್ಟ್ ಪದಾಧಿಕಾರಿಗಳಾದ ಮೋದಾಮಣಿ, ಕೆ. ಉಮಾಶಂಕರ್, ಪಿ.ಬಿ. ಅನಿಲ್, ಬೂಕನಕೆರೆ ಎಸ್. ವಿಜೇಂದ್ರ, ಪಿ. ಗಂಗಾಧರ್ ಗೌಡ, ಕೆ.ಟಿ. ವೀರಪ್ಪ, ಪೂರ್ಣಿಮಾ, ಸುಮಿತ್ರ ರಮೇಶ್ ಹಾಗೂ ಇನ್ನಿತರರು ಇದ್ದರು.

ಆ.15ರಿಂದ ಮೂರು ದಿನ ಪ್ರಭು ಪುರಿ ಜಗನ್ನಾಥ ದೇವಾಲಯದ ವಾರ್ಷಿಕೋತ್ಸವ

ಮೈಸೂರು, ಆ.12(ಎಂಟಿವೈ)– ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಪ್ರಭು ಪುರಿ ಜಗನ್ನಾಥ ದೇವಾಲಯದ ಆವರಣದಲ್ಲಿ ಆ. 15ರಿಂದ 17ರವರೆಗೆ ದೇವಾಲಯದ ನಾಲ್ಕನೆ ವಾರ್ಷಿಕೋತ್ಸವ ಸಮಾರಂಭ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಟ್ರಸ್ಟ್ ಟ್ರಸ್ಟಿ ಘನಶ್ಯಾಮ್ ಪ್ರಧಾನ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರಣ್ಯಪುರಂ ಮೇನ್ ರೋಡ್‌ನಲ್ಲಿ ನಿರ್ಮಿಸಿರುವ ಪ್ರಭು ಪುರಿ ಜಗನ್ನಾಥ ದೇವಾಲಯ ನಿರ್ಮಿಸಿ ನಾಲ್ಕು ವರ್ಷ ಸಂದಿದೆ. ಈ ಹಿನ್ನೆಲೆಯಲ್ಲಿ ಆ.15ರಿಂದ 17 ವರೆಗೆ ಮೂರು ದಿನ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಲಿದೆ. ಪ್ರತಿ ದಿನ ಬೆಳಗ್ಗೆ 9ಕ್ಕೆ ಧಾರ್ಮಿಕ ಕಾರ್ಯಕ್ರಮ ಆರಂಭವಾಗಲಿವೆ. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ಇರಲಿದೆ ಎಂದು ತಿಳಿಸಿದರು.

ಧರ್ಮಸ್ಥಳ ವಿರುದ್ಧ ಅಪಪ್ರಚಾರ ಖಂಡಿಸಿ ಸಹಿ ಸಂಗ್ರಹ

ಅಪಪ್ರಚಾರಿಗಳ ವಿರುದ್ಧ ಸೂಕ್ತ ಕ್ರಮಕ್ಕೆ ಆಗ್ರಹ

ಮೈಸೂರು, ಆ.12(ಎಸ್‌ಪಿಎನ್)– ಶ್ರೀ ಕ್ಷೇತ್ರ ಧರ್ಮಸ್ಥಳ ದೇವಸ್ಥಾನ ಮತ್ತು ಅಲ್ಲಿನ ಧರ್ಮಾಧಿಕಾರಿಗಳ ಕುಟುಂಬದ ವಿರುದ್ಧ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಅಪಪ್ರಚಾರ ಮಾಡುತ್ತಿರುವ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸುವಂತೆ ಒತ್ತಾಯಿಸಿ ಹಿಂದೂ ಪುಣ್ಯಕ್ಷೇತ್ರಗಳ ಸಂರಕ್ಷಣಾ ಸಮಿತಿ ಸದಸ್ಯರು ಸೋಮವಾರ ಸಹಿಸಂಗ್ರಹ ಚಳವಳಿ ನಡೆಸಿದರು.

ಮೈಸೂರು ನ್ಯೂ ಸಯ್ಯಾಜಿರಾವ್ ರಸ್ತೆಯ ಚಿಕ್ಕಗಡಿಯಾರ ಮುಂಭಾಗ ಹಿಂದೂ ಪುಣ್ಯಕ್ಷೇತ್ರಗಳ ಸಂರಕ್ಷಣಾ ಸಮಿತಿ ಸಂಚಾಲಕ ಮೈ.ಕಾ.ಪ್ರೇಮ್ ಕುಮಾರ್ ನೇತೃತ್ವದಲ್ಲಿ ನಡೆದ ಸಹಿ ಸಂಗ್ರಹ ಚಳವಳಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ದೇವಸ್ಥಾನದ ವಿರುದ್ಧ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಸಾವಿರಕ್ಕೂ ಅಧಿಕ ಮಂದಿ ಭಕ್ತಾದಿಗಳು ಸಹಿ ಹಾಕಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.



ಶ್ರೀ ಕ್ಷೇತ್ರ ಧರ್ಮಸ್ಥಳದ ಕುರಿತು ಅಪಪ್ರಚಾರ ಮಾಡುವವರ ವಿರುದ್ಧ ಪ್ರಕರಣ ದಾಖಲಿಸುವಂತೆ ಹಿರಿಯ ವಕೀಲ ಸಿ.ವಿ.ಕೇಶವಮೂರ್ತಿ ಸಹಿ ಮಾಡಿ ಒತ್ತಾಯಿಸಿದರು.

ಬಳಿಕ ಸಂಚಾಲಕ ಮೈಕಾ.ಪ್ರೇಮ್ ಕುಮಾರ್ ಮಾಧ್ಯಮಗಳೊಂದಿಗೆ ಮಾತನಾಡಿ, ಶ್ರೀ ಕ್ಷೇತ್ರ ಧರ್ಮಸ್ಥಳ, ಅಲ್ಲಿನ ಧರ್ಮಾಧಿಕಾರಿ ವೀರೇಂದ್ರಹೆಗ್ಗಡೆ ಮತ್ತು ಅವರ ಕುಟುಂಬದ ವಿರುದ್ಧ ಅವಹೇಳನಾಕಾರಿಯಾಗಿ ಕೆಲವ್ಯಕ್ತಿಗಳು ಸಾಮಾಜಿಕ ಜಾಲತಾಣದ ಮೂಲಕ ಹಾಗೂ ಮಾಧ್ಯಮಗಳ ಮೂಲಕ ಅಪಪ್ರಚಾರ ಮಾಡುತ್ತಿದ್ದಾರೆ. ಇವರ ವಿರುದ್ಧ ರಾಜ್ಯಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ನೋಡಿದರೆ, ಸರ್ಕಾರ ಈ ಸಂಚಿನ ಭಾಗವಾಗಿದೆಯೇ ಎಂಬ ಅನುಮಾನ ಭಕ್ತರಲ್ಲಿ ಕಾಡುತ್ತಿದೆ ಎಂದರು.

ಶ್ರೀ ಕ್ಷೇತ್ರಕ್ಕೆ ಸಂಬಂಧಪಡದ ವ್ಯಕ್ತಿಗಳೆಲ್ಲಾ ಮಾಧ್ಯಮದ ಹೆಸರಿನಲ್ಲಿ ಸಾಮಾಜಿಕ ಜಾಲತಾಣದ ಮೂಲಕ ಹಿಟ್ ಅಂಡ್ ರನ್ ರೀತಿ ಅಜ್ಞಾತ ಸ್ಥಳದಲ್ಲಿ ಕುಳಿತು ಆಪಾದನೆ ಮಾಡುತ್ತಿದ್ದಾರೆ. ಇಂತಹ ವ್ಯಕ್ತಿಗಳ ವಿರುದ್ಧ ರಾಜ್ಯ ಸರ್ಕಾರ ಮತ್ತು ಪೊಲೀಸ್ ಇಲಾಖೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಅಲ್ಲದೆ, ಇದರ ಹಿಂದೆ ಮತೀಯ ಸಂಘಟನೆಯಾದ ಎಸ್‌ಡಿಪಿಐ ತೆರೆಮರೆಯಲ್ಲಿ ನಿಂತು ಷಡ್ಯಂತ್ರ ರೂಪಿಸಿ ಕೆಲಸ ಮಾಡುತ್ತಿದೆ. ಈ ಷಡ್ಯಂತ್ರ ನಿಲ್ಲಬೇಕು. ಇಲ್ಲದಿದ್ದರೆ, ದೇಶಾದ್ಯಂತ ಪ್ರತಿಭಟನೆ ಆರಂಭಿಸಲಾಗುವುದು ಎಂದು ಎಚ್ಚರಿಸಿದರು.

ಸಹಿ ಸಂಗ್ರಹ ಚಳವಳಿಯಲ್ಲಿ ಹಿಂದೂ ಮುಖಂಡರಾದ ಸಂಜಯ್, ರಾಕೇಶ್ ಭಟ್, ಸಚಿನ್ ನಾಯಕ್, ಶ್ರೀಧರ್, ಚಿಕ್ಕವೆಂಕಟು, ಕುಮಾರ್, ಅನಿಲ್, ಪ್ರಮೋದ್, ಮಾಜಿ ಮೇಯರ್ ಶಿವಕುಮಾರ್, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಹಿರಿಯ ವಕೀಲ ಸಿ.ವಿ.ಕೇಶವಮೂರ್ತಿ, ಚಂದನ್, ನಿತೇಶ್, ಸ್ವರೂಪ್, ಮೋಯಿತ್, ವಿಕ್ರಂಅಯ್ಯಂಗಾರ್, ಪ್ರಮೀಣ್ ಕುಮಾರ್, ಮಹದೇವ್ ಸೇರಿದಂತೆ ಸಾವಿರಾರು ಮಂದಿ ಸಹಿ ಹಾಕಿ ಚಳುವಳಿಗೆ ಬೆಂಬಲ ಸೂಚಿಸಿದರು.

ಎರಡು ಹುಲಿ ಮರಿಗಳು ಸಾವು, ಪ್ರಾಣಿ ಪ್ರಿಯರಲ್ಲಿ ಆಘಾತ



ಹನೂರು, ಆ.12– ತಾಲೂಕಿನ ಕಾವೇರಿ ವನ್ಯಧಾಮ ವ್ಯಾಪ್ತಿಯ ಶಾಗ್ಯ ಶಾಖೆಯ ಹೊಳೆಮೂರ್ದಟ್ಟಿ ಗಸ್ತಿನ ಕಿರಬನಕಲ್ಲು ಗುಡ್ಡ ಅರಣ್ಯ ಪ್ರದೇಶದ ಗುಡ್ಡದಲ್ಲಿ ಎರಡು ಹುಲಿ ಮರಿಗಳು ಮೃತಪಟ್ಟಿವೆ.

ಸೋಮವಾರ ಸಿಬ್ಬಂದಿ ಗಸ್ತು ತಿರುಗುವಾಗ ಗಂಡು ಹುಲಿಮರಿ ಕಳೇಬರ ಸಿಕ್ಕಿದೆ. ಮಂಗಳವಾರ ಬೆಳಿಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಪಶು ವೈದ್ಯಾಧಿಕಾರಿಗಳ ತಂಡ ಹುಲಿಮರಿ ಮೃತಪಟ್ಟ ಜಾಗದ ಆಸುಪಾಸಿನಲ್ಲಿ ಕೂಂಬಿಂಗ್ ನಡೆಸಿದಾಗ 50 ಮೀಟರ್ ದೂರದ ಗುಹೆಯೊಂದರ ಬಳಿ ಮತ್ತೊಂದು ಹೆಣ್ಣು ಹುಲಿ ಮರಿಯ ಕಳೇಬರ ದೊರೆತಿದೆ.

ಸುಮಾರು 15 ದಿನಗಳ ಹಿಂದೆ ಹುಟ್ಟಿದ್ದ ಹೆಣ್ಣು ಮತ್ತು ಗಂಡು ಮರಿಗಳು ತಾಯಿಯಿಂದ ಬೇರ್ಪಟ್ಟಿದ್ದು, ಆಹಾರ ಹಾಗೂ ಪೋಷಣೆ ಕೊರತೆಯಿಂದಾಗಿ ಎರಡು-ಮೂರು ದಿನಗಳ ವ್ಯತ್ಯಾಸದಲ್ಲಿ ಸಾವನ್ನಪ್ಪಿರುವ ಸಾಧ್ಯತೆಯಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ಇನ್ನೂ ಇತ್ತೀಚೆಗೆ ಹನೂರು ತಾಲೂಕಿನ ಮಲೆ ಮಹದೇಶ್ವರ ವನ್ಯಧಾಮದ ಹೂಗ್ಯಂ ವನ್ಯಜೀವಿ ವಲಯದ ಮೀಣ್ಯಂನಲ್ಲಿ ತಾಯಿ ಹುಲಿ ಹಾಗೂ ಮರಿ ಹುಲಿಗಳು ಸೇರಿ ಒಟ್ಟು 5 ಹುಲಿಗಳು ವಿಷಪ್ರಾಶನದಿಂದ ಸಾವನ್ನಪ್ಪಿದ್ದು, 50 ದಿನಗಳ ಅವಧಿಯಲ್ಲಿ ಜಿಲ್ಲೆಯಲ್ಲಿ 7 ಹುಲಿಗಳು ಸಾವನ್ನಪ್ಪಿದಂತಾಗಿದ್ದು, ಪರಿಸರ ಪ್ರೇಮಿ

ಮೈಸೂರಲ್ಲಿ ಮೂರು ದಿನಗಳ ಭಾರತೀಯ ಸಂಗೀತ ಶಾಸ್ತ್ರೋತ್ಸವ

ಮೈಸೂರು, ಆ.12(ಪಿಎಂ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಶ್ರೀವಾಸುದೇವಾಚಾರ್ಯ ಭವನದಲ್ಲಿ (ನಾದಬ್ರಹ್ಮ ಸಂಗೀತ ಸಭಾ) ಬ್ರಹ್ಮವಿದ್ಯಾ ಸಂಸ್ಥೆ ಹಾಗೂ ಡಿವಿಜಿ ಬಳಗ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ಮೂರು ದಿನಗಳ ಕಾಲ ಹಮ್ಮಿಕೊಂಡಿರುವ ಭಾರತೀಯ ಸಂಗೀತ ಶಾಸ್ತ್ರೋತ್ಸವಕ್ಕೆ ಸೋಮವಾರ ಚಾಲನೆ ದೊರೆಯಿತು.

ಪದ್ಮಶ್ರೀ ಪುರಸ್ಕೃತ ಡಾ.ರಾ.ಸತ್ಯನಾರಾಯಣ ಸಂಸ್ಮರಣ ಉತ್ಸವ-2025 ಹಾಗೂ ಭಾರತೀಯ ಸಂಗೀತಶಾಸ್ತ್ರ ದಿನಾಚರಣೆ ಪ್ರಯುಕ್ತ ಹಮ್ಮಿಕೊಂಡಿರುವ ಈ ಸಂಗೀತ ಶಾಸ್ತ್ರೋತ್ಸವದಲ್ಲಿ ಸಂಗೀತದೊಂದಿಗೆ ಸಾಹಿತ್ಯ, ಆರೋಗ್ಯದ ಅರಿವು ಅನಾವರಣಗೊಂಡಿತು.

ಡಾ.ರಾ.ಸತ್ಯನಾರಾಯಣ ಅವರ ಭಾವಚಿತ್ರದ ಎದುರು ದೀಪ ಬೆಳಗಿಸುವ ಮೂಲಕ ಉದ್ಘಾಟನೆ ನೆರವೇರಿಸಲಾಯಿತು. ಬಳಿಕ ಬ್ರಹ್ಮವಿದ್ಯಾ ಸಂಸ್ಥೆ ನಿರ್ದೇಶಕರೂ ಆದ ಡಾ.ರಾ.ಸತ್ಯನಾರಾಯಣರ ಪುತ್ರ ಡಾ.ರಾ.ಸ.ನಂದಕುಮಾರ್ ಮಾತನಾಡಿ, ಸಂಗೀತವನ್ನು ಕಿವಿಯಿಂದ ಕೇಳುವುದಕ್ಕೆ ಸೀಮಿತಗೊಳಿಸಬಾರದು. ಅದು ಆತ್ಮ ಪ್ರವೇಶ ಮಾಡಬೇಕು. ಸಂಸ್ಕೃತಿಗೆ ಪ್ರತಿನಿಧಿತ್ವ ಬರಬೇಕೆಂದರೆ ಸಂಗೀತಕ್ಕೆ ಶಾಸ್ತ್ರ ಅಗತ್ಯ. ಸಂಗೀತ ಶಾಸ್ತ್ರ ಎಂಬುದು ಸಂಗೀತ ಪ್ರಯೋಗದ ನೆರಳಾಗಿದೆ. ಸ್ವಾತಂತ್ರ್ಯ ನಂತರ ಶಾಸ್ತ್ರವು ಹಿಂದೆ ಹೋಗಿ, ಪ್ರಯೋಗಗಳು ಮುಂದೆ ಬಂದವು ಎಂದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಹಮ್ಮಿಕೊಂಡಿರುವ 3 ದಿನಗಳ ಭಾರತೀಯ ಸಂಗೀತ ಶಾಸ್ತ್ರೋತ್ಸವವನ್ನು ಸೋಮವಾರ ಉದ್ಘಾಟಿಸಲಾಯಿತು.

70ರ ದಶಕದಿಂದಲೂ ಅಧ್ಯಯನ, ಅಧ್ಯಾಪನ, ಸಂಶೋಧನೆ ನಡೆಯುತ್ತಿದೆ. ಕಳೆದ 2 ದಶಕದಿಂದ ಯುವ ಜನತೆ ಸಂಗೀತದ ದಾರಿಯನ್ನು ಹೊಸ ದಿಕ್ಕಿಗೆ ತೆಗೆದುಕೊಂಡು ಹೋಗಿದ್ದಾರೆ. ಈ ಸಂಗೀತದ ಚಳವಳಿ ಹಿಂದೆ ರಾ.ಸತ್ಯನಾರಾಯಣರಂತಹ ರಸಋಷಿಗಳಿದ್ದಾರೆ ಎಂದು ಸ್ಮರಿಸಿದರು.


ಬಳಿಕ ತೇಜಸ್ ಬಾಡಾಲ ಅವರು ಶ್ರೀ ವಿಜಯ ಕವಿ ರಚನೆಯ ಕಾವ್ಯದ ಸಾಲುಗಳನ್ನು ವಾಚಿಸಿ ಅರ್ಥ ವಿವರಿಸಿದರು. ನಂತರ 'ಆರೋಗ್ಯ ದಿನಚರಿ' ಕುರಿತು ಶ್ರೀರಂಗ ಆಯುರ್ವೇದ ಮಂದಿರದ ಡಾ.ಪ್ರಸನ್ನ ವೆಂಕಟೇಶ್ ಮಾತನಾಡಿ, ಭಾರತೀಯ ಮಹರ್ಷಿಗಳು ಸಂಗೀತಗಾರರು ತಮ್ಮ ಆರೋಗ್ಯ ಕಾಪಾಡಿಕೊಳ್ಳುವ ಕುರಿತು ಆಯುರ್ವೇದದ ಮೂಲಕ ಹಲವು ವಿಧಾನಗಳನ್ನು ಸೂಚಿಸಿದ್ದಾರೆ ಎಂದು ತಿಳಿಸಿದರು.

ಮಂಗಳವಾರವೂ ಕನ್ನಡ ಕಾವ್ಯ ವಾಚನ, ಆರೋಗ್ಯ ದಿನಚರಿ, ಕರ್ನಾಟಕ ಸಂಗೀತ ಕಛೇರಿ, ಕರ್ನಾಟಕ ಸಂಗೀತ ಯುಗಳ ಗಾಯನ ಕಛೇರಿ ಹಾಗೂ ಲಯ ಲಹರಿ ಕಾರ್ಯಕ್ರಮಗಳು ನಡೆದವು. ನಾಳೆ (ಆ.13ರ ಬುಧವಾರ) ಮಹಾಮಹೋಪಾಧ್ಯಾಯ ಡಾ.ರಾ.ಸತ್ಯನಾರಾಯಣ ಸಂಸ್ಮರಣ ಪ್ರಶಸ್ತಿ ಸೇರಿದಂತೆ ವಿವಿಧ ಪ್ರಶಸ್ತಿಗಳ ಪ್ರದಾನದೊಂದಿಗೆ ಮೂರು ದಿನಗಳ ಕಾರ್ಯಕ್ರಮಕ್ಕೆ ತೆರೆ ಬೀಳಲಿದೆ.

ಶರೀರ ಹಾಗೂ ಮನಸ್ಸು ಎರಡನ್ನು ಗಮನದಲ್ಲಿಟ್ಟುಕೊಂಡು ನಮ್ಮ ಭಾರತೀಯ ಮಹರ್ಷಿಗಳು ಆರೋಗ್ಯ ಮಾರ್ಗಸೂಚಿ ನೀಡಿದ್ದಾರೆ. ಆಹಾರ ಹಾಗೂ ಜೀವನ ಶೈಲಿ ವಿಧಾನಗಳನ್ನು ತಿಳಿಸಿಕೊಟ್ಟಿದ್ದಾರೆ. ಬ್ರಾಹ್ಮಿ ಮುಹೂರ್ತದಲ್ಲಿ (ಸೂರ್ಯೋದಯಕ್ಕೆ ಸುಮಾರು ಒಂದೂವರೆ ಗಂಟೆ ಮೊದಲು ರಾತ್ರಿಯ ನಿದ್ದೆಯಿಂದ ಏದ್ದೇಳುವುದು) ಪ್ರತಿದಿನಿ ನಿದ್ದೆಯಿಂದ ಏಳುವ ಅಭ್ಯಾಸ ರೂಢಿಸಿಕೊಳ್ಳುವಂತೆ ಸೂಚಿಸಲಾಗಿದೆ. ಗುರು ಮುಖೇನ ಪ್ರಾಣಾಯಾಮ ಕರಗತ ಮಾಡಿಕೊಳ್ಳುವುದು, ಪ್ರತಿನಿತ್ಯ ಸ್ನಾನದ ಅಭ್ಯಾಸ ಇಟ್ಟುಕೊಳ್ಳುವಂತೆಯೂ ಆಯುರ್ವೇದ ಹೇಳುತ್ತದೆ ಎಂದರು. ನಂತರ ನಂದಗಾನ, ವಚನಪದವೈದ್ಯ ಕಾರ್ಯಕ್ರಮಗಳು ನಡೆದವು.

ಡಿವಿಜಿ ಬಳಗ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ನಂದಿನಿ ಕನಕರಾಜು, ಸಂಚಾಲಕ ಕನಕರಾಜು, ಬ್ರಹ್ಮವಿದ್ಯಾ ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಡಾ.ರಾಧಿಕಾ ನಂದಕುಮಾರ್ ಮತ್ತಿತರರು ಹಾಜರಿದ್ದರು.

ಆ.15, 16ರಂದು ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಕಲ್ಯಾಣ ಮಹೋತ್ಸವ



ಮೈಸೂರು,ಆ.12–ಮೈಸೂರಿನ ಉದಯಗಿರಿಯ ಶ್ರೀ ವಿಘ್ನೇಶ್ವರ ಪ್ರಸನ್ನ ಭಕ್ತ ಮಂಡಳಿ ಮಾರ್ಪಾಡಿತ ಟ್ರಸ್ಟ್ ವತಿಯಿಂದ ಆ.15, 16ರಂದು ಶ್ರೀ ಲಕ್ಷ್ಮೀ ವೆಂಕಟ ರಮಣ ಸ್ವಾಮಿ ದೇವಸ್ಥಾನದಲ್ಲಿ ಕಲ್ಯಾಣ ಮಹೋತ್ಸವ ನಡೆಯಲಿದೆ. ದೇಗುಲದ ಪ್ರಾಂಗಣ ದಲ್ಲಿ ಶ್ರೀ ಲಕ್ಷ್ಮೀವರಾಹಸ್ವಾಮಿ, ಶ್ರೀ ಲಕ್ಷ್ಮೀಹಯ ಗ್ರೀವಸ್ವಾಮಿ ದ್ವಾರಪಾಲಕರ ಸಮೇತ ಸುಂದರ ಪ್ರಸನ್ನ ದಿವ್ಯ ಮಂಗಳ ಮೂರ್ತಿ ಶ್ರೀ ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿಯ ಕಲ್ಯಾಣ ಮಹೋತ್ಸವ ಆಚರಣೆಯ ವಿಶೇಷ ಕಾರ್ಯಕ್ರಮಗಳನ್ನು ಪ್ರಧಾನ ಅರ್ಚಕರಾದ ಆರ್.ರಘುನಾಥ್ ನೇತೃತ್ವದಲ್ಲಿ ಆ.15ರಂದು ಬೆಳಗ್ಗೆ 5.30 ಗಂಟೆಗೆ ಶ್ರೀ ಲಕ್ಷ್ಮೀವೆಂಕಟೇಶ್ವರಸ್ವಾಮಿಗೆ ಪಂಚಾಮೃತ ಅಭಿಷೇಕ, ಅಲಂಕಾರ ನಡೆಯಲಿದೆ. ಆ.16ರಂದು ಬೆಳಗ್ಗೆ 8.30ಕ್ಕೆ ಪುಣ್ಯಾಹ ಸ್ವಸ್ತಿವಾಹನ ಋತ್ವಿಕ ವರ್ಣನೆ ಕಲಸ ಸ್ಥಾಪನೆ ಮಹಾ ಸಂಕಲ್ಪ ಪ್ರಕಾರೋತ್ಸವ, ಬೆಳಗ್ಗೆ 10.50ರಿಂದ ಶ್ರೀ ಶ್ರೀನಿವಾಸಸ್ವಾಮಿಗೆ ತಿರು ಕಲ್ಯಾಣ ಧಾರಾ ಮಹೋತ್ಸವ ಸಾಮೂಹಿಕವಾಗಿ ನೆರವೇರಿಸಲಾಗುವುದು. ನಂತರ ರಾಜಾಹೋಮ, ಪೂರ್ಣಾಹುತಿ, ಮಹಾ ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ 5.30ಕ್ಕೆ ಶ್ರೀ ದೇವಿ ಭೂದೇವಿಯವರಿಂದ ಕೂಡಿದ ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿಗೆ ಓಲಗ ಸಮೇತ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮಾಡಲಾಗುವುದು. ರಾತ್ರಿ 8.30ಕ್ಕೆ ಶಯನೋತ್ಸವ, ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ.

ಡೇರಿ ಕಟ್ಟಡಕ್ಕೆ ಗುದ್ದಲಿ ಪೂಜೆ



ಸರಗೂರು, ಆ.12– ತಾಲೂಕಿನ ಬಂಕವಾಡಿ ಗ್ರಾಮದಲ್ಲಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ಕಾಮಗಾರಿಗೆ ಮೈಮುಲ್ ನಿರ್ದೇಶಕ ಕೆ.ಈರೇಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಗ್ರಾಮದ ಡೇರಿ ಹೆಚ್ಚಿನ ಪ್ರಗತಿ ಕಾಣುತ್ತಿದ್ದು, ಮಹಿಳೆಯರು ಸಂಘದ ಸದಸ್ಯರಾಗುವ ಜೊತೆಗೆ ಡೇರಿಯ ಎಲ್ಲಾ ವ್ಯವಹಾರದಲ್ಲಿ ಭಾಗಿಗಳಾಗಬೇಕು. ಮಹಿಳೆಯರು ಡೇರಿಗೆ ಹೆಚ್ಚು ಹಾಲು ಸರಬರಾಜು ಮಾಡಿದಲ್ಲಿ ಸಕಾಲದಲ್ಲಿ ಸ್ವಸಹಾಯ ಸಂಘಗಳಿಂದ ಪಡೆದ ಸಾಲ ಮರುಪಾವತಿಸಲು ಸಾಧ್ಯವಾಗುತ್ತದೆ ಎಂದರು.

ಗ್ರಾಮದಲ್ಲಿ ಡೇರಿಗೆ ಸ್ವಂತ ಕಟ್ಟಡ ಇಲ್ಲವಾದ ಕಾರಣ ಇಂದು ನೂತನ ಕಟ್ಟಡ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ. ಮೈಮುಲ್ ನಿರ್ದೇಶಕರಾದ ನನ್ನ, ದಾಕ್ಷಾಯಿಣಿ, ಶಾಸಕರು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಸಂಘದ ಅನುದಾನಗಳನ್ನು ಬಳಸಿ ಗುಣಮಟ್ಟದ ಕಟ್ಟಡ ನಿರ್ಮಾಣ ಮಾಡಿಸಿಕೊಳ್ಳಬೇಕು ಎಂದರು.

ಮೈಮುಲ್ ವತಿಯಿಂದ ಹಾಲು ಉತ್ಪಾದಕರು, ಹಸುವಿಗೆ ವಿಮೆ ಸೇರಿದಂತೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತಿದ್ದು, ಇದನ್ನು ಸದ್ಬಳಕೆ ಮಾಡಿಕೊಂಡು ಗುಣಮಟ್ಟದ ಹಾಲು ಸರಬರಾಜು ಮಾಡಬೇಕು ಎಂದರು.

ಈ ವೇಳೆ ಡೇರಿ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷೆ ಸುಜಾತ, ನಿರ್ದೇಶಕರಾದ ಸೀತಾ, ವೈ.ಜೆ.ವಿಶ್ವಲತಾ, ಕೆಂಪದೇವಮ್ಮ, ನಾಗರತ್ನ, ಇಂದಿರಾ, ಎಂ.ರಾಜಮ್ಮ, ನೀಲಮ್ಮ, ಕಾರ್ಯದರ್ಶಿ ಪ್ರಿಯ, ಹಾಲು ಪರಿಶೋಧಕಿ ಶಾರದ, ಗ್ರಾಮದ ಗುಡಿಗೌಡ ಚಿಕ್ಕಸ್ವಾಮಿ, ಮುಖಂಡರಾದ ಸುಂದರದಾಸ್, ಪದ್ಮ, ಸುರೇಶ್, ಪ್ರಸನ್ನಕುಮಾರ್, ವೈ.ಎಲ್.ರಾಜಪ್ಪ, ಚಿನ್ನಪ್ಪ, ಪ್ರವೀಣ್ ಹಾಗೂ ಗ್ರಾಮಸ್ಥರಿದ್ದರು.

ಹೊರಗುತ್ತಿಗೆ ನೌಕರನನ್ನು ಕೆಲಸದಿಂದ ತೆಗೆದು ಹಾಕಿ ವೇತನ ನೀಡದ ಕ್ರಮ ಖಂಡಿಸಿ

ತೋಟಗಾರಿಕೆ ಇಲಾಖೆ ಅಧಿಕಾರಿಗಳ ವಿರುದ್ಧ ದಸಂಸ ಪ್ರತಿಭಟನೆ

ತಿ.ನರಸೀಪುರ, ಆ.12– ತೋಟಗಾರಿಕೆ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಳೆದ 14 ವರ್ಷ ಕೆಲಸ ಮಾಡುತ್ತಿದ್ದ ಸಹಾಯಕ ನೌಕರರೊಬ್ಬರನ್ನು ಕೆಲಸದಿಂದ ತೆಗೆದು ಹಾಕಿ ವೇತನ ನೀಡದ ಅಧಿಕಾರಿಗಳ ನಡೆ ಖಂಡಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ(ಭೀಮವಾದ) ಸದಸ್ಯರು ಪ್ರತಿಭಟನೆ ನಡೆಸಿದರು.

ಪಟ್ಟಣದ ತೋಟಗಾರಿಕೆ ಇಲಾಖೆ ಎದುರು ದಸಂಸ ರಾಜ್ಯ ವಿಭಾಗೀಯ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್ ನೇತೃತ್ವದಲ್ಲಿ ಜಮಾವಣೆಗೊಂಡ ದಸಂಸ ಕಾರ್ಯಕರ್ತರು 14 ವರ್ಷ ತೋಟಗಾರಿಕೆಯಲ್ಲಿ ಕಾರ್ಯ ನಿರ್ವಹಿಸಿದ ಹೊರಗುತ್ತಿಗೆ ನೌಕರರೊಬ್ಬರನ್ನು ಕೆಲಸದಿಂದ ತೆಗೆದು ಹಾಕಿ ವೇತನ ನೀಡದಿರುವ ಅಧಿಕಾರಿಗಳ ಧೋರಣೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿ ಇಲಾಖೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು.

ಆಲಗೂಡು ಚಂದ್ರಶೇಖರ್ ಮಾತನಾಡಿ, ತಾಲೂಕಿನ ದೊಡ್ಡೇಬಾಗಿಲು ಗ್ರಾಮದ ಡಿ.ಬಿ.ಪ್ರೇಮ್ ಕುಮಾರ್ ಎಂಬುವರು ಸುವರ್ಣ ಭೂಮಿ ಯೋಜನೆ ಅಡಿ ತೋಟಗಾರಿಕೆ ನಿರ್ವಹಣೆ ಬಗ್ಗೆ ತರಬೇತಿ ಪಡೆದು 2010–11ರಲ್ಲಿ ಹೊರಗುತ್ತಿಗೆ ಆಧಾರದ ಮೇಲೆ 14 ವರ್ಷ ತಿ.ನರಸೀಪುರ ತೋಟಗಾರಿಕೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಇಲಾಖೆಯಿಂದ ಅವರಿಗೆ 2023 ಡಿಸೆಂಬರ್‌ವರೆಗೆ ವೇತನ ಮಂಜೂರು ಮಾಡಿಕೊಟ್ಟು, ಏಪ್ರಿಲ್ 2025ರಿಂದ ಅವರನ್ನು ಕೆಲಸದಿಂದ ಏಕಾಏಕಿ ತೆಗೆದು ಹಾಕಲಾಗಿದೆ. ಅಧಿಕಾರಿಗಳ ಈ ನಡೆಯನ್ನು ನಮ್ಮ ಸಮಿತಿ ಖಂಡಿಸುತ್ತದೆ ಎಂದರು.

ಬಾಕಿ ವೇತನ ಬಿಡುಗಡೆ ವಿಚಾರವಾಗಿ ರಾಜ್ಯ ವಲಯದ ತೋಟಗಾರಿಕೆ ನಿರ್ದೇಶಕರು, ತಾಲೂಕಿನ ತೋಟಗಾರಿಕೆ ಸಹಾಯಕ ನಿರ್ದೇಶಕರಿಗೆ ನೋಟಿಸ್ ನೀಡಿ ಕಾರಣ ಕೇಳಿದರೂ ತಾಲೂಕು ಅಧಿಕಾರಿ ಕಳೆದ 6 ತಿಂಗಳಿಂದ ಯಾವುದೇ ಉತ್ತರ ನೀಡಿಲ್ಲ. ಇದು ಇವರ ಕರ್ತವ್ಯ ಬೇಜವಾಬ್ದಾರಿತನಕ್ಕೆ ಸಾಕ್ಷಿಯಾಗಿದೆ. ನೊಂದ ನೌಕರನ ವೇತನ ಬಾಕಿ ಬಗ್ಗೆ ಮೈಸೂರಿನ ರಾಜ್ಯ ವಲಯ ಸಹಾಯಕ ನಿರ್ದೇಶಕರು ಹಾಗೂ ಸ್ಥಳೀಯ ಸಹಾಯಕ ಹಿರಿಯ ನಿರ್ದೇಶಕರಿಗೆ ನಮ್ಮ ಸಮಿತಿ ಮನವಿ ಮಾಡಿದಾಗ ಸ್ಥಳೀಯ ಅಧಿಕಾರಿ ವಿಭಿನ್ನ ಹೇಳಿಕೆ ನೀಡಿ ಗೊಂದಲ ಸೃಷ್ಟಿಸುತ್ತಿದ್ದಾರೆ. ಒಮ್ಮೆ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾಗಿದೆ ಎಂದು ಹೇಳಿ, ಮತ್ತೊಂದು ಬಾರಿ ಸರ್ಕಾರದಿಂದ ಅನುಮೋದನೆ ದೊರೆತಿರುವುದಿಲ್ಲ ಎಂದು ಹೇಳುತ್ತಾರೆ. ಈ ರೀತಿ ಗೊಂದಲದಿಂದ ದುಡಿದ ನೌಕರನಿಗೆ ವೇತನ ಇಲ್ಲವಾಗಿದೆ. ಪ್ರೇಮ್ ಕುಮಾರ್ ಅವರು ಜನವರಿ 2024ರಿಂದ ನವೆಂಬರ್‌ವರೆಗೆ ಕಚೇರಿಯ ಟಪಾಲು ನಿರ್ವಹಣಾ ವಿಭಾಗದಲ್ಲಿ ಕೆಲಸ ಮಾಡಿದ್ದು ಈ ಬಗ್ಗೆ ದಾಖಲೆಗಳಿವೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಕ್ರಮ ಕೈಗೊಂಡು ಪ್ರೇಮ್ ಕುಮಾರ್ ಅವರ ಮಾಸಿಕ ವೇತನ 13,500 ರೂ.ನಂತೆ ಕರ್ತವ್ಯ ನಿರ್ವಹಿಸಿರುವ ಒಟ್ಟು 11 ತಿಂಗಳ ಬಾಕಿ ವೇತನ ಕೂಡಲೇ ಬಿಡುಗಡೆ ಮಾಡಿಕೊಡುವ ಮೂಲಕ ನೊಂದ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಬೇಕೆಂದು ಸಮಿತಿಯು ಒತ್ತಾಯಿಸುತ್ತದೆ ಎಂದರು.

ವೇತನ ಬಾಕಿ ವಿಳಂಬವಾದಲ್ಲಿ ಮುಂಬರುವ ಸ್ವಾತಂತ್ರ್ಯ ದಿನಾಚರಣೆಯಂದು ದಲಿತರಿಗೆ ಇನ್ನೂ ಸ್ವತಂತ್ರ ಸಿಕ್ಕಿಲ್ಲ ಎಂಬ ಧ್ಯೇಯ ಘೋಷದೊಂದಿಗೆ ಕಪ್ಪು ಬಾವುಟ ಪ್ರದರ್ಶನ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಮಿತಿ ಜಿಲ್ಲಾ ಸಂಚಾಲಕ ಕೆಂಪಯ್ಯನಹುಂಡಿ ಆರ್.ರಾಜು, ಕನ್ನನಾಯಕನಹಳ್ಳಿ ಮರಿಸ್ವಾಮಿ, ಕೊಳತೂರು ಪ್ರಭಾಕರ್, ತಾಲೂಕು ಸಂಚಾಲಕ ನೆರಗ್ಯಾತನಹಳ್ಳಿ ಮನೋಜ್ ಕುಮಾರ್, ತೊಟ್ಟವಾಡಿ ರಾಚಪ್ಪ, ಶಿವಕುಮಾರ್, ಕುಪ್ಯಗವಿಸಿದ್ದಯ್ಯ, ಗಿರೀಶ್, ಹೆಮ್ಮಿಗೆ ಪ್ರಸನ್ನ, ಚೌಹಳ್ಳಿ ಪರಶುರಾವ್, ಚಂದ್ರಪ್ಪ, ಹೆಮ್ಮಿಗೆ ಮಲ್ಲೇಶ್, ರವಿಕಾಂತ್, ಜಯಕುಮಾರ್, ಮಾದೇವ, ಡಿ.ಪ್ರೇಮ್ ಕುಮಾರ್, ಶಿವಕುಮಾರ್, ಸ್ವಾಮಿ ಹಾಜರಿದ್ದರು.



ಗುತ್ತಿಗೆ ನೌಕರನನ್ನು ಕೆಲಸದಿಂದ ತೆಗೆದುಹಾಕಿ, ವೇತನ ನೀಡದಿರುವ ಕ್ರಮ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಸಾಮಾಜಿಕ ನ್ಯಾಯದ ಹರಿಕಾರ ಸಿಎಂ ಸಿದ್ದರಾಮಯ್ಯ

ಕಾಂಗ್ರೆಸ್ ವಕ್ತಾರ ಲಕ್ಷ್ಮಣ್

ನಂಜನಗೂಡು, ಆ.12– ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ಬಡವರ, ಶೋಷಿತ ವರ್ಗಗಳ ಧ್ವನಿಯಾಗಿ ಸಾಮಾಜಿಕ ನ್ಯಾಯದ ಹರಿಕಾರರಾಗಿದ್ದಾರೆ. ಅವರಿಗೆ ದೇವರು ಆಯಸ್ಸು, ಆರೋಗ್ಯ ನೀಡಲಿ ಎಂದು ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ಹೇಳಿದರು.

ತಾಲೂಕಿನ ತಾಂಡವಪುರದಲ್ಲಿ ಮಂಗಳವಾರ ಸಿದ್ದರಾಮಯ್ಯನವರ ಹುಟ್ಟುಹಬ್ಬದ ಪ್ರಯುಕ್ತ ಪೌರ ಕಾರ್ಮಿಕರಿಗೆ ಸನ್ಮಾನ ಹಾಗೂ ಬಟ್ಟೆ ವಿತರಣೆ ಮತ್ತು ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕ ವಿತರಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹುಟ್ಟುಹಬ್ಬವನ್ನು 40 ವರ್ಷಗಳಿಂದ ಅವರ ಒಡನಾಡಿ ಬಿ.ಎಂ.ರಾಮು ಅವರ ನೇತೃತ್ವದಲ್ಲಿ ಪೌರ ಕಾರ್ಮಿಕರನ್ನು ಸನ್ಮಾನಿಸುವ ಮೂಲಕ ಆಚರಿಸಲಾಗುತ್ತಿದೆ. ಸಿದ್ದರಾಮಯ್ಯನವರು ಚುನಾವಣೆ ಸಂದರ್ಭ ಜನರಿಗೆ ವಾಗ್ದಾನ ನೀಡಿದ್ದಂತೆ 5 ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿದ್ದಾರೆ. 13 ಬಜೆಟ್ ಮಂಡಿಸಿ ರಾಜ್ಯದ ಸಮಗ್ರ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ತಮ್ಮ ರಾಜಕೀಯ ಜೀವನದಲ್ಲಿ ಕಳಂಕರಹಿತರಾಗಿ ದುಡಿದಿದ್ದಾರೆ. ಅವರ ವಿರುದ್ಧ ಪಿತೂರಿ ನಡೆಸಿದ ಬಿಜೆಪಿ ಮುಡಾ ಹಗರಣದಲ್ಲಿ ಅವರ ಕುಟುಂಬವನ್ನು ಗುರಿ ಮಾಡಿ ಅಪಪ್ರಚಾರ ನಡೆಸಿತ್ತು. ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದೆ. ಸಿದ್ದರಾಮಯ್ಯ ರಾಜ್ಯದ ನಮ್ಮ ಪ್ರಶ್ನಾತೀತ ನಾಯಕ ಎಂದು ಹೇಳಿದರು.

ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಮಾತನಾಡಿ, ಮುಂಬರುವ 2028ರ ಚುನಾವಣೆಯಲ್ಲಿ ಗೆಲ್ಲುವ ಮೂಲಕ ಸಿದ್ದರಾಮಯ್ಯ 3ನೇ ಬಾರಿಗೆ ಮುಖ್ಯ ಮಂತ್ರಿಯಾಗುತ್ತಾರೆ ಎಂದು ಭವಿಷ್ಯ ನುಡಿದರು.

ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು. ಪೌರ ಕಾರ್ಮಿಕರಿಗೆ ಬಟ್ಟೆ ವಿತರಿಸಲಾಯಿತು. ವಿದ್ಯಾರ್ಥಿಗಳಿಗೆ ಪುಸ್ತಕ ಮತ್ತು ಅಗತ್ಯ ಪರಿಕರಗಳನ್ನು ವಿತರಿಸಲಾಯಿತು. ಅನ್ನಸಂತರ್ಪಣೆ ನಡೆಸಲಾಯಿತು.



ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ಈ ವೇಳೆ ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಮುಖಂಡರಾದ ಬಿ.ಆರ್.ರಾಕೇಶ್, ಹುಚ್ಚೇಗೌಡ, ಬಿ.ಎಂ.ನಾಗರಾಜು, ಅರ್ಕೇಶ್, ನಾರಾಯಣ, ರವಿ, ಪುನೀತ್, ಶಂಕರ್, ಗ್ರಾಪಂ ಅಧ್ಯಕ್ಷ ಮಹದೇವು, ಗ್ರಾಪಂ ಸದಸ್ಯರಾದ ಗಿರೀಶ್, ಶಿವರಾಜು, ಟಿ.ಜೆ.ಮಹದೇವು, ಪ್ರಭುಸ್ವಾಮಿ, ವಿಶ್ವನಾಥ್, ಬಿ.ಬಿ.ಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಆನಂದ, ಮಾಜಿ ಉಪಾಧ್ಯಕ್ಷ ಮಹ ದೇವು, ಸೇರಿದಂತೆ ಬಂಚಳ್ಳಿ ಹುಂಡಿ ಮತ್ತು ತಾಂಡವಪುರ ಗ್ರಾಮಸ್ಥರು ಉಪಸ್ಥಿತರಿದ್ದರು.

ಹಿಂದುಳಿದ ವರ್ಗಗಳ ಆಶಾಕಿರಣ ಸಿಎಂ ಸಿದ್ದರಾಮಯ್ಯ

ನಂಜನಗೂಡು, ಆ.12– ಮುಖ್ಯಮಂತ್ರಿ ಸಿದ್ದರಾಮಯ್ಯ ಶೋಷಿತ ಮತ್ತು ಹಿಂದುಳಿದ ಸಮುದಾಯಗಳ ಆಶಾಕಿರಣ ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹುಟ್ಟುಹಬ್ಬ ಅಂಗವಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ, ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹೊದಿಕೆಗಳನ್ನು ವಿತರಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರನ್ನು ಒಟ್ಟಿಗೆ ಕೊಂಡೊಯ್ಯುವುದಲ್ಲದೆ ಅವರಿಗೆ ಸೂಕ್ತ ರಾಜಕೀಯ ಸ್ಥಾನಮಾನ ದೊರಕಿಸಿಕೊಟ್ಟು, ಆರ್ಥಿಕ, ಸಾಮಾಜಿಕವಾಗಿ ಶಕ್ತಿ ತುಂಬಿದ್ದಾರೆ. ಜೊತೆಗೆ ಎಸ್ಸಿ, ಎಸ್ಟಿ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟು, ಅವರಿಗೆ ಮೀಸಲಾತಿ ದೊರಕಿಸಿ ಕೊಡುವಂತಹ ಕ್ರಾಂತಿಕಾರಕ ತೀರ್ಮಾನ ಕೈಗೊಂಡಿದ್ದರಿಂದ ಶೋಷಿತ ಮತ್ತು ಹಿಂದುಳಿದ ವರ್ಗಗಳು ಅವರನ್ನು ಪ್ರೀತಿ ವಿಶ್ವಾಸದಿಂದ ತಮ್ಮ ಸಮುದಾಯದ ನಾಯಕರಂತೆ ಕಾಣುವಂತಾಗಿದೆ. ಜೊತೆಗೆ ಕಳೆದ 2013ರ ಸರ್ಕಾರದಲ್ಲಿ ಕೊಟ್ಟಿದ್ದ 168 ಭರವಸೆಗಳ ಪೈಕಿ 165 ಅನ್ನು ಈಡೇರಿಸಿದ್ದಾರೆ. 2023ರಲ್ಲಿ ಕೊಟ್ಟಿದ್ದ ಭರವಸೆಯಂತೆ 5 ಗ್ಯಾರಂಟಿ ಯೋಜನೆಗಳನ್ನು ಸಮರ್ಥವಾಗಿ ಜಾರಿಗೊಳಿಸಿ, ಬಡವರು ಬದುಕು ಕಟ್ಟಿಕೊಳ್ಳಲು ನೆರವಾಗಿದ್ದಾರೆ. ಆದ್ದರಿಂದಲೇ ಜನರ ಮನಸ್ಸಿನಲ್ಲಿ ನುಡಿಯುವಂತೆ ನಡೆಯುವ ವಿಶ್ವಾಸಾರ್ಹ ಸರ್ಕಾರ ಎಂಬ ಭಾವನೆ ಮೂಡುವಂತಾಗಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಮಾತನಾಡಿ, ಸಿದ್ದರಾಮಯ್ಯ ಸದಾ ಕಾಲ ಬಡವರ ಪರ ಚಿಂತಿಸುವುದರಿಂದ ಅವರ ಹುಟ್ಟುಹಬ್ಬವನ್ನು ಬಡವರಿಗೆ ನೆರವು ನೀಡುವಂತಹ ಕಾರ್ಯಕ್ರಮಗಳನ್ನು ರೂಪಿಸಿ ವಿನೂತನವಾಗಿ ಆಚರಿಸಲಾಗುತ್ತಿದೆ ಎಂದರು.

ಈ ವೇಳೆ ಮುಖಂಡರಾದ ಕುಳ್ಳಯ್ಯ, ನಿಂಗರಾಜು, ಕಗ್ಗಲೀಪುರ ಮಹದೇವ, ರಂಗಸ್ವಾಮಿ, ಕಾರ್ಮಿಕ ಮುಖಂಡ ಗೋವಿಂದರಾಜು, ಮಡಿವಾಳ ಸಮುದಾಯ ತಾಲೂಕು ಅಧ್ಯಕ್ಷ ಪ್ರಸನ್ನಕುಮಾರ್, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್, ನಗರಸಭಾ ನಾಮ ನಿರ್ದೇಶಿತ ಸದಸ್ಯ ಕೆ.ಎಂ.ಬಸವರಾಜ್ ಸೇರಿದಂತೆ ಹಲವರಿದ್ದರು.



ರೋಗಿಗಳಿಗೆ ಹೊದಿಕೆ ವಿತರಿಸಲಾಯಿತು.

ಸಿದ್ದರಾಮಯ್ಯ ಶೋಷಿತ ವರ್ಗದ ಗಟ್ಟಿ ಧ್ವನಿ

ಶ್ರೀಕಂಠೇಶ್ವರ ದೇಗುಲ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಆರ್.ಇಂಧನ್ ಬಾಬು

ನಂಜನಗೂಡು, ಆ.12– ಸಿಎಂ ಸಿದ್ದರಾಮಯ್ಯ ದೇಶ ಕಂಡ ಧೀಮಂತ ರಾಜಕಾರಣಿ. ಬಡವರ ಪರ ಕಾಳಜಿಯುಳ್ಳ ಶೋಷಿತ ವರ್ಗದ ಗಟ್ಟಿಧ್ವನಿ ಎಂದು ಶ್ರೀ ಕಂಠೇಶ್ವರ ದೇಗುಲ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಆರ್.ಇಂಧನ್ ಬಾಬು ತಿಳಿಸಿದರು.



ಸಿದ್ದರಾಮಯ್ಯ ಹುಟ್ಟುಹಬ್ಬ ಅಂಗವಾಗಿ ಶ್ರೀಕಂಠೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಸಿಎಂ ಸಿದ್ದರಾಮಯ್ಯ ಹುಟ್ಟುಹಬ್ಬದ ಅಂಗವಾಗಿ ಕಾಂಗ್ರೆಸ್ ಕಾರ್ಯಕರ್ತರ ಜೊತೆಗೂಡಿ ಶ್ರೀಕಂಠೇಶ್ವರ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ದೇವಾಲಯದ ಆವರಣದಲ್ಲಿ ಕೇಕ್ ಕತ್ತರಿಸಿ ಸಿಹಿ ಹಂಚಿ ಸಂಭ್ರಮಾ ಚರಣೆ ನಡೆಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ ಸಮಾಜದ ಕನಸುಗಾರ. ಎಲ್ಲರಿಗೂ ಆರ್ಥಿಕ ಸಮಾನತೆ ದೊರಕಬೇಕು ಎಂಬ ದೂರದೃಷ್ಟಿ ಚಿಂತನೆಯುಳ್ಳ ಅಪ ರೂಪದ ನಾಯಕ. ಬಡತನದ ಕುಟುಂಬದಿಂದ ಬಂದ ಸಿದ್ದರಾಮಯ್ಯನವರು ಬಡವರ ಕಷ್ಟ ಅರಿತು ಅನ್ನಭಾಗ್ಯ ಯೋಜನೆ ಜಾರಿಗೆ ತಂದರು. ಅವರು ಶೋಷಿತರ, ಬಡವರ ಪರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಅಲ್ಲದೇ ಹೆಚ್ಚುತ್ತಿರುವ ಆರ್ಥಿಕ ಅಸ ಮಾನತೆಯ ನಡುವೆ ಪಂಚ ಗ್ಯಾರಂಟಿ ಯೋಜನೆಗಳಿಂದ ರಾಜ್ಯವು ಆರ್ಥಿಕ ಸಮಾನತೆ ಸಾಧಿಸುವ ನಿಟ್ಟಿನಲ್ಲಿ ದಾಪುಗಾಲು ಇಡುತ್ತಿದ್ದು, ಈ ಯೋಜನೆಗಳು ಇಡೀ ದೇಶಕ್ಕೆ ಮಾದರಿಯಾಗಿವೆ. ಅವರ ಬಡವರ, ಜನಪರ ಯೋಜನೆಗಳಿಂದಾಗಿ ರಾಜ್ಯದ ಜನತೆ ಅವರನ್ನು ತಮ್ಮ ಮನೆ ಮಗನಂತೆ ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದಾರೆ. ಅವರಿಗೆ ದೇವರು ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಶುಭ ಹಾರೈಸಿದರು.

ಈ ವೇಳೆ ವಾಲ್ಮೀಕಿ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಕುರುಬರ ಸಂಘದ ತಾಲೂಕು ಅಧ್ಯಕ್ಷ ಕೆಂಪಣ್ಣ, ಕೆಂಪಿಸಿದ್ದನ ಹುಂಡಿ ಗ್ರಾಪಂ ಅಧ್ಯಕ್ಷ ಮಹದೇವು, ಮುಖಂಡರಾದ ಗಿರಿಧರ್ ಬಿ.ಪಿ.ಮಹದೇವು, ತೊರೆಮಾವು ಗಿರೀಶ್, ಸೇರಿದಂತೆ ಹಲವರಿದ್ದರು.

ದುಶ್ಚಟಗಳಿಂದ ದೂರವಿದ್ದು ಆರೋಗ್ಯ ಕಾಪಾಡಿಕೊಳ್ಳಿ

ಸಾಲಿಗ್ರಾಮ, ಆ.12– ಯುವಕರು, ವಿದ್ಯಾರ್ಥಿಗಳು ದುಶ್ಚಟಗಳಿಂದ ದೂರವಿದ್ದು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಮಂಜುನಾಥ್ ತಿಳಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ತಾಲೂಕಿನ ಹೆಬ್ಬೂರು ಗ್ರಾಮದ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯಲ್ಲಿ ಆಯೋಜಿಸಿದ್ದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಸಜ್ಜನರ ಸಹವಾಸ ಮಾಡುವ ಮೂಲಕ ಉತ್ತಮ ದಾರಿಯಲ್ಲಿ ಸಾಗಬೇಕು ಎಂದರು.

ಕ್ಷಣಿಕ ಸುಖ, ಬೇರೆ ಯಾವುದೋ ಆಸೆಗಾಗಿ, ಇನ್ನೊಬ್ಬರ ಒತ್ತಡದಿಂದಾಗಿ ಎಂತಹ ಸಂದರ್ಭದಲ್ಲೂ ಕೆಟ್ಟ ಕೆಲಸ ಮಾಡಬಾರದು. ಕೆಟ್ಟ ಚಟಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬಾರದು. ಉತ್ತಮ ಸಂಸ್ಕಾರಯುತ ಗುಣಗಳನ್ನು ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು ಎಂದರು.

ಯುವ ಮುಖಂಡ ಕೆ.ಟಿ.ಮೋಹನ್ ಕುಮಾರ್ ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಗ್ರಾಮೀಣ ಜನರ ಅನುಕೂಲಕ್ಕಾಗಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿರುವುದು ಶ್ಲಾಘನೀಯ ಎಂದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಸಿಗುವ ಸೌಲಭ್ಯಗಳನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ವಿದ್ಯಾರ್ಥಿಗಳು ಓದಿನ ಕಡೆಗೆ ಹೆಚ್ಚಿನ ಗಮನ ಹರಿಸುವ ಮೂಲಕ ಚೆನ್ನಾಗಿ ಕಲಿತು ಉನ್ನತ ಸ್ಥಾನಮಾನ ಅಲಂಕರಿಸಿ, ಗುರುಗಳು, ಹೆತ್ತವರು, ಹುಟ್ಟಿದ ಊರಿಗೆ ಹಾಗೂ ಕಲಿತ ಶಾಲೆಗೆ ಕೀರ್ತಿ ತರಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕು ರೈತ ಸಂಘದ ಅಧ್ಯಕ್ಷ ಎಸ್.ಬಿ.ಶೇಖರ್, ಶಾಲೆ ಪ್ರಾಂಶುಪಾಲ ಎಸ್.ಜೆ.ಸತೀಶ್, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕು ಯೋಜನಾಧಿಕಾರಿ ಉಮೇಶ್ ಪೂಜಾರಿ, ಮೇಲ್ವಿಚಾರಕ ಧರಣಪ್ಪಗೌಡ, ಸೇವಾ ಪ್ರತಿನಿಧಿ ಚಂದ್ರಿಕಾ, ಶಿಕ್ಷಕರಾದ ಉಷಾರಾಣಿ, ಸೌಮ್ಯ, ಮುತ್ತಪ್ಪ, ಮಂಜುನಾಥ, ಸತ್ಯವತಿ, ಸ್ವರ್ಣವತಿ, ಸವಿತಾ, ರೇಣುಕಾ, ಪ್ರೇಮ್, ಶಾಲಿನಿ, ಪ್ರಥಮ ದರ್ಜೆ ಸಹಾಯಕ ಪಾಂಡೇಶ್, ವಿದ್ಯಾರ್ಥಿಗಳು ಇದ್ದರು.



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ತಳಮಟ್ಟದಿಂದ ಪಕ್ಷ ಸಂಘಟಿಸಲು ಕ್ರಮ: ಕುಂಬ್ರಹಳ್ಳಿ ಸುಬ್ಬಣ್ಣ



ಸುದ್ದಿಗೋಷ್ಠಿಯಲ್ಲಿ ಕುಂಬ್ರಹಳ್ಳಿ ಸುಬ್ಬಣ್ಣ ಮಾತನಾಡಿದರು.

ಹೆಚ್.ಡಿ.ಕೋಟೆ, ಆ.12– ತಳಮಟ್ಟದಿಂದ ಪಕ್ಷ ಸಂಘಟಿಸಿ, ಗಟ್ಟಿಗೊಳಿಸುವ ನಿಟ್ಟಿನಲ್ಲಿ ನಮ್ಮ ನಡೆ ಬೂತ್ ಕಡೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಜಿಲ್ಲಾ, ಗ್ರಾಮಾಂತರ ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರದ ದುರಾಡಳಿತ, ಹಗರಣ ಮಿತಿಮೀರಿದ್ದು, ಬಿಜೆಪಿ ಅದನ್ನು ಪ್ರಬಲವಾಗಿ ಖಂಡಿಸುತ್ತಾ ಬಂದಿದೆ. ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಲ್ಲೂ ಪಕ್ಷ ಗೆಲುವು ಸಾಧಿಸಲು ಪಕ್ಷ ಸಂಘಟ ನೆಯಲ್ಲಿ ತೊಡಗಿದ್ದೇವೆ ಎಂದರು. ಈಗಾಗಲೇ ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಂಡಿದ್ದು, ಮುಂಬರುವ ಎಲ್ಲಾ ಚುನಾವಣೆಗಳಲ್ಲಿಯೂ ಮೈತ್ರಿ ಮುಂದುವರೆಯಲಿದೆ ಎಂದರು.

ಮಾಜಿ ಶಾಸಕ ಬಾಲರಾಜ್ ಮಾತನಾಡಿ, ಕಾಂಗ್ರೆಸ್‌ನಲ್ಲಿ ಸತ್ಯ ಹೇಳುವವರಿಗೆ ಗೌರವ ಸಿಗುವುದಿಲ್ಲ. ತಮ್ಮ ಆಡಳಿತಕೋಸ್ಕರ ಜಾತಿಗಳಲ್ಲಿ ಒಡಕು ಉಂಟು ಮಾಡುವ ಕೆಲಸ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ನಿವೃತ್ತ ನ್ಯಾಯಾಧೀಶ ನಾಗಮೋಹನ್ ದಾಸ್ ನೇತೃತ್ವದಲ್ಲಿ ಪ.ಜಾತಿಗಣತಿ ನಡೆಸಿ ಸರ್ಕಾರಕ್ಕೆ ವರದಿ ನೀಡಿದ್ದು ಇದರ ಬಗ್ಗೆ ಕೂಡ ಅಪಸ್ವರ ಕೇಳಿ ಬರುತ್ತಿದೆ ಎಂದರು.

ಈ ವೇಳೆ ಕೋಟೆ, ಸರಗೂರು ತಾಲೂಕು ಬಿಜೆಪಿ ಅಧ್ಯಕ್ಷರಾದ ಶಂಭೇಗೌಡ, ಗುರುಸ್ವಾಮಿ, ಮುಖಂ ಡರಾದ ಸುರೇಶ್ ಬಾಬು, ಬಸವರಾಜಪ್ಪ, ವೆಂಕಟಸ್ವಾಮಿ, ರುದ್ರಪ್ಪ, ಗಿರೀಶ್, ರಾಜು, ಗುರುಸ್ವಾಮಿ, ಸೈಯದ್ ಅಕ್ರಮ್, ಬಸವರಾಜು ಇನ್ನಿತರರಿದ್ದರು.

ಸಂಸದ ಸುನೀಲ್ ಬೋಸ್ ಹುಟ್ಟುಹಬ್ಬ ಹಿನ್ನೆಲೆ

ಆ.31, ಬನ್ನೂರಲ್ಲಿ ಬೃಹತ್ ಉದ್ಯೋಗ ಮೇಳ

● ನೂರಕ್ಕೂ ಹೆಚ್ಚು ಕಂಪನಿಗಳು ಭಾಗಿ ● ಮೇಳದ ಪೋಸ್ಟರ್ ಬಿಡುಗಡೆಗೊಳಿಸಿದ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು

ತಿ.ನರಸೀಪುರ, ಆ.12– ಸಂಸದ ಸುನೀಲ್ ಬೋಸ್ ಅವರ ಹುಟ್ಟುಹಬ್ಬದ ಅಂಗವಾಗಿ ಆ.31ರಂದು ಬನ್ನೂರು ಪಟ್ಟಣದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.

ಸಂಸದ ಸುನೀಲ್ ಬೋಸ್ ಹುಟ್ಟುಹಬ್ಬ ಅಂಗವಾಗಿ ಬನ್ನೂರಿನ ಅತಿಥಿ ಗೃಹದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ನೆಚ್ಚಿನ ನಾಯಕ, ಯುವಕರ ಆಶಾಕಿರಣ ಸಂಸದ ಸುನೀಲ್ ಬೋಸ್ ಹುಟ್ಟುಹಬ್ಬ ಹಿನ್ನಲೆಯಲ್ಲಿ ಆ.31 ರಂದು ಬನ್ನೂರಿನ ಫುಟ್‌ಬಾಲ್ ಮೈದಾನದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಆ ಮೂಲಕ ಸುನೀಲ್ ಬೋಸ್ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದರು.

ಕಳೆದ 2 ವರ್ಷಗಳ ಹಿಂದೆ ತಿ.ನರಸೀಪುರದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಿ ನಿರುದ್ಯೋಗಿ ಯುವಕ, ಯುವತಿಯರಿಗೆ ಉದ್ಯೋಗ ದೊರಕಿಸಿಕೊಡುವ ಪ್ರಯತ್ನ ಮಾಡಲಾಗಿತ್ತು. ಅದೇ ರೀತಿ ಬನ್ನೂರಿನಲ್ಲೂ ಈ ಬಾರಿ ಉದ್ಯೋಗ ಮೇಳ ಆಯೋಜಿಸಲಾಗಿದ್ದು, ನೂರಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿದ್ದು, ನಿರುದ್ಯೋಗಿಗಳಿಗೆ ಉದ್ಯೋಗ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.

ಸಂಸದರ ಹುಟ್ಟುಹಬ್ಬ, ಉದ್ಯೋಗ ಮೇಳ ಯಶಸ್ವಿಗೊಳಿಸುವ ಜವಾಬ್ದಾರಿ ಕಾರ್ಯಕರ್ತರದ್ದಾಗಿದೆ. ಮೇಳದಲ್ಲಿ ಭಾಗವಹಿಸುವ ಕಂಪನಿಗಳು, ವಿದ್ಯಾರ್ಹತೆ ಹೊಂದಿದ ವಿದ್ಯಾರ್ಥಿಗಳು ಸಂದರ್ಶನಕ್ಕೆ ಹಾಜರಾಗಬೇಕೆಂಬ ಪಟ್ಟಿ ಸಿದ್ಧಪಡಿಸಲಾಗಿದೆ. ಉದ್ಯೋಗ ಮೇಳ ಹಿನ್ನೆಲೆಯಲ್ಲಿ ಕಾರ್ಯಕರ್ತರು ತಮ್ಮ ಗ್ರಾಮಕ್ಕೆ ಬಂದ ಪ್ರಚಾರ ವಾಹನ ಸ್ವಾಗತಿಸಿ ಕರ ಪತ್ರ ಹಾಗೂ ಪೋಸ್ಟರ್‌ಗಳನ್ನು ಗೋಡೆಗಳಿಗೆ ಅಂಟಿಸಿ ಪ್ರಚಾರ ಕೈಗೊಳ್ಳಬೇಕು ಎಂದರು.

ಅಂದು ನಡೆಯುವ ಕಾರ್ಯಕ್ರಮಕ್ಕೆ ಸಂಸದರನ್ನು ಮೆರವಣಿಗೆಯಲ್ಲಿ ಕರೆತಂದು ಹುಟ್ಟುಹಬ್ಬ ಆಚರಿಸಬೇಕು. ಹುಟ್ಟುಹಬ್ಬವನ್ನು ಯಾವ ರೀತಿ ಆಚರಿಸಬೇಕು ಎಂಬ ಬಗ್ಗೆ ಕಾರ್ಯಕರ್ತರು ಸಲಹೆ ಸೂಚನೆ ನೀಡಿದರೆ ಅದರಂತೆ ಕಾರ್ಯಕ್ರಮ ಆಯೋಜಿಸಲಾಗುವುದು. ಕಾರ್ಯಕರ್ತರು ಕಾರ್ಯಕ್ರಮ ಯಶಸ್ವಿಗೆ ಸಹಕರಿಸಬೇಕು ಎಂದು ಮನವಿ ಮಾಡಿದರು.

ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಮಾತನಾಡಿ, ಕಳೆದ 2 ವರ್ಷಗಳ ಹಿಂದೆ ತಿ.ನರಸೀಪುರದಲ್ಲಿ ನಡೆದ ಉದ್ಯೋಗ ಮೇಳ ಮೀರಿಸುವ ಕಾರ್ಯಕ್ರಮ ಆ.31ರಂದು ನಡೆಯಬೇಕು. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತಿರುವ ಸಂಸದ ಸುನೀಲ್ ಬೋಸ್ ಹುಟ್ಟುಹಬ್ಬ ಸ್ಮರಣೀಯವಾಗಬೇಕು. ಆ ನಿಟ್ಟಿನಲ್ಲಿ ಕಾರ್ಯಕರ್ತರು ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಬೇಕು. ಅಂದು ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜ್ ಅವರ ಹುಟ್ಟುಹಬ್ಬ ಇರುವುದರಿಂದ ಕಾರ್ಯಕರ್ತರು ಗೊಂದಲಕ್ಕೆ ಒಳಗಾಗಬಾರದು. ಬನ್ನೂರಿನಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಹೆಚ್ಚಿನ ಜನರನ್ನು ಸೇರಿಸಿ ಉದ್ಯೋಗ ಮೇಳದೊಂದಿಗೆ ಸಂಸದರ ಹುಟ್ಟುಹಬ್ಬ ಆಚರಿಸೋಣ. ಕಾರ್ಯಕರ್ತರು ನಮಗೆ ಸಹಕಾರ ನೀಡಿದರೆ, ನಾವು ನಿಮಗೆ ಎಲ್ಲಾ ರೀತಿಯ ಪ್ರೋತ್ಸಾಹ ಕೊಡಲು ಸಿದ್ಧರಿದ್ದು, ಕಾರ್ಯಕ್ರಮ ಯಶಸ್ಸಿಗೆ ಎಲ್ಲರೂ ಒಗ್ಗಟ್ಟಾಗಿ ಶ್ರಮಿಸೋಣ ಎಂದರು.

ಉದ್ಯೋಗದಾತ ಸಂಸ್ಥೆ ಮುಖ್ಯಸ್ಥ ರುಕ್ಮಾಂಗದ ಮಾತನಾಡಿದರು. ಈ ವೇಳೆ ಉದ್ಯೋಗ ಮೇಳದ ಕರಪತ್ರ ಹಾಗೂ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಪುರಸಭಾ ಮಾಜಿ ಉಪಾಧ್ಯಕ್ಷ ರಾಮ ಲಿಂಗೇಗೌಡ, ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕಗ್ಗಲೀಪುರ ಕೆ.ಎಂ.ಮಧುಕುಮಾರ್, ಕೇತುಪುರ ಡೈರಿ ಮಾಜಿ ಅಧ್ಯಕ್ಷ ಕೆ.ಬಿ.ಪ್ರಭಾಕರ್, ಪುರಸಭೆ ಸದಸ್ಯರಾದ ಮೂರ್ತಿ, ಶಿವು, ಮಹೇಶ್, ಮಾಜಿ ಉಪಾಧ್ಯಕ್ಷ ಪಾರ್ಥಸಾರಥಿ, ಡೈರಿ ಅಧ್ಯಕ್ಷ ಮರಿಗೌಡ, ಯುವ ಘಟಕದ ಅಧ್ಯಕ್ಷ ಟಿ.ಎಸ್.ಲೋಕೇಶ್, ಯಾಚೇನಹಳ್ಳಿ ಅಶೋಕ್, ಎಪಿಎಂಸಿ ಮಾಜಿ ಸದಸ್ಯ ಉಕ್ಕಲಗೆರೆ ಬಸವಣ್ಣ, ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಶಿವಕುಮಾರ್, ಅತ್ತಹಳ್ಳಿ ಗ್ರಾಪಂ ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ಸುನೀಲ್ ಕುಮಾರ್, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಟಿ.ಎಸ್.ಪ್ರಸನ್ನ, ಬೀಡನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಕೃಷ್ಣೇಗೌಡ, ರಾಜೂಗೌಡ, ಮಲಿಯೂರು ದೊಳ್ಳಯ್ಯ, ಶಿವ ಸಿದ್ದು, ದೀಪು, ಭಾಸ್ಕರ್, ಜೆ. ಉಮೇಶ್, ಲೋಕೇಶ್ ಹಾಜರಿದ್ದರು.



ಬೃಹತ್ ಉದ್ಯೋಗ ಮೇಳದ ಪೋಸ್ಟರ್ ಅನ್ನು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಬಿಡುಗಡೆ ಮಾಡಿದರು.

> ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೋಮಾ, ಬಿಇ, ಬಿ.ಫಾರ್ಮ, ಡಿ.ಫಾರ್ಮ, ನರ್ಸಿಂಗ್, ಬಿಎ, ಬಿಕಾಂ, ಬಿಎಸ್ಸಿ, ಬಿಸಿಎ, ಬಿಬಿಎಂ, ಎಂಬಿಎ, ಎಂಕಾಂ, ಎಂಎಸ್ಸಿ, ಎಂಎಸ್ ಡಿಪ್ಲೊಮಾ, ಎಂಎಸ್ ಡಬ್ಲ್ಯೂ ಸೇರಿದಂತೆ ಇನ್ನಿತರೆ ಯಾವುದೇ ಪದವಿ ಪಡೆದಿರುವ ಹಾಗೂ ಎಸ್‌ಎಸ್‌ಎಲ್‌ಸಿ ಯಲ್ಲಿ ಅನುತ್ತೀರ್ಣರಾದ ಯುವಕ–ಯುವತಿಯರು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಸುನೀಲ್ ಬೋಸ್ ಹುಟ್ಟುಹಬ್ಬ ಅಂಗವಾಗಿ ಹಮ್ಮಿಕೊಳ್ಳಲಾಗಿರುವ ಉದ್ಯೋಗ ಮೇಳ ದಾಖಲೆ ನಿರ್ಮಿಸುವಂತಾಗಬೇಕು. ನೂರಾರು ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವಂತಾಗಿ ಅವರು ಬದುಕು ಕಟ್ಟಿಕೊಳ್ಳಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಸಂಘಟಿತರಾಗಿ ಕೆಲಸ ಮಾಡುವ ಮೂಲಕ ಕಾರ್ಯಕ್ರಮ ಯಶಸ್ವಿಯಾಗಿಸೋಣ. – ಎ.ಎನ್.ಸ್ವಾಮಿ, ಹಿಂದುಳಿದ ವರ್ಗಗಳ ಅಧ್ಯಕ್ಷ.

ಬೋರಮ್ಮ ನಿಧನ



ಕೆ.ಆರ್.ನಗರ, ಆ.12– ಪಟ್ಟಣದ ವಿಜಯನಗರದ ನಿವಾಸಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ ಅವರ ತಾಯಿ ಬೋರಮ್ಮ(90) ಮಂಗಳವಾರ ಬೆಳಗ್ಗೆ ನಿಧನರಾದರು.

ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಚೀರ್ನಹಳ್ಳಿಯಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೀಪು ದರ್ಶನ್ ಸಿದ್ದೇಗೌಡ



ತಿ.ನರಸೀಪುರ, ಆ.12– ಯುವ ಜೆಡಿಎಸ್ ಮುಖಂಡ ದೀಪು ದರ್ಶನ್ ಸಿದ್ದೇಗೌಡ (40) ಮೈಸೂರಿನಲ್ಲಿ ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ರಜನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ತಾಲೂಕಿನ ಬನ್ನೂರು ಪಟ್ಟಣದ ಚಾಮನಹಳ್ಳಿ ಒಕ್ಕಲಿಗರ ರುದ್ರಭೂಮಿಯಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಡ್ರಗ್ಸ್ ವಿರುದ್ಧ ಮೈಸೂರು ಕಾಲೇಜು ವಿದ್ಯಾರ್ಥಿಗಳ ಪ್ರತಿಭಟನೆ

●ಕರ್ನಾಟಕ ಡ್ರಗ್ಸ್ ಮುಕ್ತ ರಾಜ್ಯವಾಗಿಸಲು ಆಗ್ರಹ ●ಆಕರ್ಷಕ ಘೋಷಣಾ ಫಲಕ; ಎಲ್ಲೆಂದರಲ್ಲಿ ಡ್ರಗ್ಸ್... ಗೃಹ ಇಲಾಖೆ ಠುಸ್ಸು... ಧನ್ಯವಾದಗಳು!

ಮೈಸೂರು, ಆ.12(ಎಂಕೆ)– ಎಲ್ಲೆಂದರಲ್ಲಿ ಡ್ರಗ್ಸ್... ಗೃಹ ಇಲಾಖೆ ಠುಸ್ಸು... ಧನ್ಯವಾದಗಳು ರಾಜ್ಯ ಸರ್ಕಾರಕ್ಕೆ ಡ್ರಗ್ಸ್ ಗ್ಯಾರಂಟಿ ಕೊಟ್ಟಿದ್ದಕ್ಕೆ...! ಎಂಬಿತ್ಯಾದಿ ಘೋಷಣಾ ಫಲಕಗಳನ್ನು ಹಿಡಿದು ಡ್ರಗ್ಸ್ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಿದ ಕಾಲೇಜು ವಿದ್ಯಾರ್ಥಿಗಳು, ಮೈಸೂರು ಮತ್ತು ಕರ್ನಾಟಕವನ್ನು ಡ್ರಗ್ಸ್ ಮುಕ್ತವಾಗಿಸುವಂತೆ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕರ್ನಾಟಕ ದಕ್ಷಿಣ ಪ್ರಾಂತ ವತಿಯಿಂದ 'ಡ್ರಗ್ಸ್ ನಿರ್ಮೂಲನೆಗಾಗಿ ನಶೆ ಮುಕ್ತ ಕ್ಯಾಂಪಸ್' ಅಭಿಯಾನದಡಿಯಲ್ಲಿ ನಗರದ ಗನ್‌ಹೌಸ್ ಬಳಿಯ ಬಸವೇಶ್ವರ ವೃತ್ತದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಜಮಾವಣೆಗೊಂಡ ವಿವಿಧ ಕಾಲೇಜಿನ ಸಾವಿರಾರು ವಿದ್ಯಾರ್ಥಿಗಳು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಮೊಳಗಿಸಿದರು.

ಸಾಂಸ್ಕೃತಿಕ ನಗರಿ ಮೈಸೂರು, ಇತ್ತೀಚೆಗೆ ಮಾದಕ ವ್ಯಸನ ಮತ್ತು ಡ್ರಗ್ಸ್ ಜಾಲದ ಕೇಂದ್ರವಾಗಿ ಮಾರ್ಪಟ್ಟಿರುವುದು ತೀವ್ರ ಆತಂಕಕಾರಿಯಾಗಿದೆ. ಮಾದಕ ವ್ಯಸನವು ಯುವಜನತೆ ಮತ್ತು ವಿದ್ಯಾರ್ಥಿಗಳ ಭವಿಷ್ಯವನ್ನು ನಾಶಪಡಿಸುತ್ತಿದೆ ಮಾದಕ ವಸ್ತುಗಳ ಸುಲಭ ಲಭ್ಯತೆಯು ಅನೇಕ ವಿದ್ಯಾರ್ಥಿಗಳನ್ನು ಈ ದುಶ್ಚಟಕ್ಕೆ ಬಲಿಪಶುಗಳನ್ನಾಗಿ ಮಾಡುತ್ತಿದೆ. ಇದರಿಂದ ಅಪರಾಧ ಚಟುವಟಿಕೆಗಳು ಹೆಚ್ಚಾಗುತ್ತಿವೆ. ವಿದ್ಯಾರ್ಥಿನಿಯರು ಮತ್ತು ಯುವತಿಯರು ಕೂಡ ಮಾದಕ ವ್ಯಸನಿಗಳ ದಾಳಿಗೆ ಒಳಗಾಗುತ್ತಿದ್ದು, ಸಮಾಜವನ್ನು ದುರ್ಬಲಗೊಳಿಸುತ್ತಿದೆ. ಸಮಾಜದ ಶಾಂತಿ–ನೆಮ್ಮದಿ ಹಾಳುಮಾಡುತ್ತಿರುವ ಡ್ರಗ್ಸ್ ಮಾಫಿಯಾಗೆ ಕಡಿವಾಣ ಹಾಕುವಂತೆ ಒತ್ತಾಯಿಸಿದರು.

ಡಗ್ಸ್ ಹಾವಳಿ ತಡೆಗಟ್ಟಲು ರಾಜ್ಯ ಸರ್ಕಾರ ಕೂಡಲೇ ದಿಟ್ಟ ಕ್ರಮಗಳನ್ನು ಕೈಗೊಳ್ಳಬೇಕು. ಡ್ರಗ್ಸ್ ಮಾಫಿಯಾವನ್ನು ಬೇರು ಸಹಿತ ಕಿತ್ತುಹಾಕಲು ಮಾದಕ ವಸ್ತುಗಳು ಹಾಗೂ ಅಮಲು ಪದಾರ್ಥಗಳ ನಿಯಂತ್ರಣ ಕಾಯ್ದೆ(NDPS Act) ಮತ್ತು ಸಿಗರೇಟುಗಳು ಮತ್ತು ಇತರ ತಂಬಾಕು ಉತ್ಪನ್ನಗಳ ಕಾಯ್ದೆ(COTPA)ಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ತನಿಖಾ ಸಂಸ್ಥೆಗಳಿಗೆ ಮತ್ತಷ್ಟು ಅಧಿಕಾರ ಮತ್ತು ಸಂಪನ್ಮೂಲಗಳನ್ನು ಒದಗಿಸಿ, ಡ್ರಗ್ಸ್ ಪೆಡ್ಲರ್ಸ್, ತಯಾರಕರು ಮತ್ತು ಅವರ ಹಿಂದಿರುವ ದೊಡ್ಡ ಶಕ್ತಿಗಳನ್ನು, ಯಾವುದೇ ಮುಲಾಜಿಲ್ಲದೆ ಕಾನೂನಿನಡಿಯಲ್ಲಿ ಶಿಕ್ಷೆಗೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಉನ್ನತ ಮಟ್ಟದ ತನಿಖೆಗೆ ಒಪ್ಪಿಸಿ: ಮೈಸೂರಿನಲ್ಲಿ ಪತ್ತೆಯಾದ ಡ್ರಗ್ಸ್ ಫ್ಯಾಕ್ಟರಿ ಪ್ರಕರಣವನ್ನು ಉನ್ನತ ಮಟ್ಟದ ತನಿಖೆಗೆ ಒಪ್ಪಿಸಬೇಕು. ಮಾದಕ ವ್ಯಸನಿಗಳ ಪುನರ್ವಸತಿ ಕೇಂದ್ರಗಳನ್ನು ಹೆಚ್ಚಿಸಬೇಕು ಮತ್ತು ಯುವಕರಲ್ಲಿ ಜಾಗೃತಿ ಮೂಡಿಸಲು ಪೊಲೀಸ್ ಇಲಾಖೆಯು ಶಾಲಾ–ಕಾಲೇಜು ಹಾಗೂ ವಿದ್ಯಾರ್ಥಿ ಸಂಘಟನೆಗಳ ನೆರವಿನಿಂದ ನಿರಂತರ ಅಭಿಯಾನಗಳನ್ನು ನಡೆಸಬೇಕು. ಸಿವಿಲ್ ಠಾಣೆಗಳಲ್ಲಿ ದಾಖಲಾಗುವ ಡ್ರಗ್ಸ್ ಪ್ರಕರಣಗಳ ಮೇಲ್ವಿಚಾರಣೆಗೆ ಸರ್ಕಾರ ರಚಿಸಿರುವ ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸಂಪೂರ್ಣ ಸ್ವತಂತ್ರವನ್ನು ನೀಡಬೇಕು ಹಾಗೂ ಟಾಸ್ಕ್ ಫೋರ್ಸ್ ರಚನೆಯ ಉದ್ದೇಶದ ಸಫಲತೆಯನ್ನು ಖಚಿತಪಡಿಸಿಕೊಳ್ಳಬೇಕು ಎಂಬ ಬೇಡಿಕೆಗಳನ್ನಿಟ್ಟರು.

ಜಾಥಾ ರದ್ದು: ಗನ್‌ಹೌಸ್‌ನಿಂದ ಗಾಂಧಿವೃತ್ತದವರೆಗೆ ಹಮ್ಮಿಕೊಂಡಿದ್ದ ಜಾಗೃತಿ ಜಾಥಾ ನಡೆಸಲು ಭದ್ರತಾ ದೃಷ್ಟಿಯಿಂದ ಪೊಲೀಸ್ ಇಲಾಖೆ ಅನುಮತಿ ನಿರಾಕರಿಸಿದ ಹಿನ್ನಲೆಯಲ್ಲಿ ಪ್ರತಿಭಟನೆಗೆ ಸೀಮಿತಗೊಳಿಸಲಾಯಿತು. ಪ್ರತಿಭಟನೆಯಲ್ಲಿ ಎಬಿವಿಪಿ ವಿಭಾಗ ವಿದ್ಯಾರ್ಥಿನಿ ಪ್ರಮುಖ್ ವಸಂತ, ನಗರ ಕಾರ್ಯದರ್ಶಿ ಸಂಜೀತ್, ರಾಜ್ಯ ಸಹ ಕಾರ್ಯದರ್ಶಿ ಪ್ರಜ್ವಲ್ ಮತ್ತಿತರರಿದ್ದರು.



ಎಬಿವಿಪಿ ಕರ್ನಾಟಕ ದಕ್ಷಿಣ ಪ್ರಾಂತ ವತಿಯಿಂದ 'ಡ್ರಗ್ಸ್ ನಿರ್ಮೂಲನೆಗಾಗಿ ನಶೆ ಮುಕ್ತ ಕ್ಯಾಂಪಸ್' ಅಭಿಯಾನದಡಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧಡಕ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9986022634)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ತಲೈವನ್ ತಲೈವಿ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಕಿಂಗ್‌ಡಮ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜದ್ರೋಹಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕೂರ್ಗಳ್ಳಿಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಗ್ರಾಮ ಘಟಕ ಉದ್ಘಾಟನೆ


ಕೂರ್ಗಳ್ಳಿಯಲ್ಲಿ ರೈತ ಸಂಘದ ಘಟಕ ಉದ್ಘಾಟನೆ.

ಮೈಸೂರು, ಆ.12(ಜಿಎ)–ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಅವರು ಕೂರ್ಗಳ್ಳಿ ಗ್ರಾಮದಲ್ಲಿ ಸಂಘದ ಘಟಕವನ್ನು ಉದ್ಘಾಟಿಸಿದರು.

ರೈತ ಸಂಘಟನೆಗಳ ಒಕ್ಕೂಟದ ಗ್ರಾಮ ಘಟಕವನ್ನು ಗಿಡ ನೆಟ್ಟು ನೀರೆರೆಯುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಫಲವತ್ತಾದ ಕೃಷಿ ಭೂಮಿಗಳನ್ನು ರೈತರಿಂದ ಕಿತ್ತುಕೊಂಡು ಕೈಗಾರಿಕೆಗಳಿಗೆ ದಾನ ಮಾಡುತ್ತಿರುವ ಸರ್ಕಾರದ ನೀತಿಯ ವಿರುದ್ಧ ರೈತರು ಸಂಘಟಿತರಾಗಿ ಹೋರಾಟ ಮಾಡಬೇಕು ಎಂದರು.

ಎಲ್ಲಾ ಪಕ್ಷದ ಅಧಿಕಾರಸ್ಥರು ಹಸಿರು ಶಾಲು ಹಾಕಿಕೊಂಡು ರೈತರಿಗೆ ಮಕ್ಮಲ್ ಟೋಪಿ ಹಾಕುತ್ತಿದ್ದಾರೆ. ಈ ಬಗ್ಗೆ ರೈತರು ಜಾಗೃತರಾಗಿರಬೇಕು. ಈ ಹಿನ್ನೆಲೆಯಲ್ಲಿ ಆ.25ರಂದು ದೆಹಲಿಯಲ್ಲಿ ನಡೆಯಲಿರುವ ಸಂಯುಕ್ತ ಕಿಸಾನ್ ಮೋರ್ಚಾ ರಾಜಕೀಯೇತರ ಸಂಘಟನೆಯ ರೈತರ ಬೃಹತ್ ರ್‍ಯಾಲಿಯಲ್ಲಿ ಕರ್ನಾಟಕದಿಂದಲೂ ನೂರಾರು ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ತಿಳಿಸಿದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್ ಮಾತನಾಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ತಾಲೂಕು ಅಧ್ಯಕ್ಷ ಲಕ್ಷ್ಮೀಪುರ ವೆಂಕಟೇಶ್, ಸಂಘಟನಾ ಕಾರ್ಯದರ್ಶಿ ವರಕೋಡು ನಾಗೇಶ್, ತಾಲೂಕು ಅಧ್ಯಕ್ಷ ಪೈಲ್ವಾನ್ ವೆಂಕಟೇಶ್ ಕೂರ್ಗಳ್ಳಿ ಘಟಕದ ಅಧ್ಯಕ್ಷ ರವಿ, ಧನಂಜಯ್, ಶಿವರಾಜ್, ರಾಮು ಪ್ರಕಾಶ್, ಅಣ್ಣಯ್ಯ, ರಾಜೇಂದ್ರ, ನಾಗಣ್ಣ, ತಿಮ್ಮೇಗೌಡ, ಮನು, ಕೃಷ್ಣ ವಾಜಮಂಗಲ ಮಹದೇವ್, ದೇವನೂರು ವಿಜಯೇಂದ್ರ, ಅಂಬಳೆ ಮಂಜುನಾಥ್, ಸಾತಗಳ್ಳಿ ಬಸವರಾಜ್, ಕಾಟೂರ್ ಮಹದೇವಸ್ವಾಮಿ, ನಾಗೇಶ್, ಕೆಂಡಗಣ್ಣಪ್ಪ ಸಿದ್ದರಾಮ, ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು

ಗ್ರಂಥಪಾಲಕರ ದಿನ ಅರ್ಥಪೂರ್ಣ ಆಚರಣೆ

ಮೈಸೂರು, ಆ.12(ಎಂಕೆ)– ಮೈಸೂರಿನ ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯದಲ್ಲಿ ಮೈಸೂರು ನಗರ, ಜಿಲ್ಲಾ ಕೇಂದ್ರ ಗ್ರಂಥಾಲಯದ ಸಂಯುಕ್ತಾಶ್ರಯದಲ್ಲಿ ಗ್ರಂಥಪಾಲಕರ ದಿನ ಆಚರಿಸಲಾಯಿತು.

ಗ್ರಂಥಾಲಯದ ಆವರಣದಲ್ಲಿ ಪುಸ್ತಕಗಳನ್ನು ಜೋಡಿಸಿ ಅವುಗಳಿಗೆ ಭಕ್ತಿಪೂರ್ವಕವಾಗಿ ನಮಿಸಿ, ಗ್ರಂಥಾಲಯ ಪಿತಾಮಹ ಡಾ.ಎಸ್.ಆರ್.ರಂಗನಾಥನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ, ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ 'ಗ್ರಾಫಾಲಜಿ(ಕೈ ಬರಹ)' ಕುರಿತು ವಿಶೇಷ ಉಪನ್ಯಾಸ ಗ್ರಾಫಾಲಜಿಸ್ಟ್ ಮೇನಕ ಆನಂದಕುಮಾರ್, ಜ್ಞಾನಾರ್ಜನೆಯಲ್ಲಿ ಗ್ರಾಫಾಲಜಿ ಪ್ರಮುಖವಾಗಿದ್ದು, ಓದುವುದು ಎಷ್ಟು ಮುಖ್ಯವೋ ಬರೆಯುವುದು ಅಷ್ಟೇ ಮುಖ್ಯ. ಪುಸ್ತಕ ಸಂಸ್ಕೃತಿ ಇಲ್ಲವಾಗಿದ್ದರೆ ನಾವುಗಳು ಈ ಹಂತಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ. ಬರವಣಿಗೆಯನ್ನು ಕೈನಲ್ಲಿ ಮಾತ್ರವಲ್ಲದೆ ಕಾಲಿನಲ್ಲೂ ಬರೆಯುವುದನ್ನು ನೋಡಿದ್ದೇವೆ. ಎಲ್ಲದಕ್ಕೂ ಮುಖ್ಯ ಬ್ರೈನ್ ಆಗಿದ್ದು, ಬ್ರೈನ್ ಹೇಗೆ ಕೆಲಸ ಮಾಡಲಿದೆ ಎಂಬುದನ್ನು ಗ್ರಾಫಾಲಜಿ ಮೂಲಕ ತಿಳಿಯಬಹುದು ಎಂದರು.

ತಂತ್ರಜ್ಞಾನ ಇರುವುದು ಸ್ಮಾರ್ಟ್ ವರ್ಕ್ ಮಾಡಲಷ್ಟೇ. ಬರವಣಿಗೆ ದೇವರು ಕೊಟ್ಟ ವರ. ಬರವಣಿಗೆ ವೇಳೆ ಕೈ ಮತ್ತು ಮೆದುಳು ಏಕಕಾಲದಲ್ಲಿ ಒಟ್ಟಿಗೆ ಕೆಲಸ ಮಾಡಲಿವೆ. ಬರವಣಿಗೆ ವ್ಯಕ್ತಿಯ ಜ್ಞಾನ ಮತ್ತು ಚಟುವಟಿಕೆ ಸಾಮರ್ಥ್ಯದ ಬಗ್ಗೆ ತಿಳಿಯಬಹುದಾಗಿದೆ ಎಂದು ತಿಳಿಸಿದರು. ಇನ್‌ಸ್ಪೆಕ್ಟರ್ ಕೆ.ಷಣ್ಮುಗಪ್ಪ 'ಸೈಬರ್ ಕ್ರೈಂ' ಕುರಿತು ಮಾಹಿತಿ ನೀಡಿದರು. ವಾಣಿಜ್ಯ ಇಲಾಖೆ ನಿವೃತ್ತ ಉಪ ಆಯುಕ್ತ ರಾಮನರಸಯ್ಯ, ಪ್ರಾದೇಶಿಕ ಶಿಕ್ಷಣ ಸಂಸ್ಥೆ ಗ್ರಂಥಪಾಲಕ ನಾಗರಾಜು, ಮೈಸೂರು ವಿವಿ ನಿವೃತ್ತ ಗ್ರಂಥಪಾಲಕ ರಾಮಶೇಷು, ಪ್ರೊ.ಚಂದ್ರಶೇಖರ್ ಮತ್ತಿತರರಿದ್ದರು.


ಮೈಸೂರಿನ ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯದಲ್ಲಿ ಗ್ರಂಥಪಾಲಕರ ದಿನ ಆಚರಿಸಲಾಯಿತು.

ಪೌರ ಕಾರ್ಮಿಕರಿಗೆ ಮನೆ ನಿರ್ಮಿಸಿ ಕೊಡಲು ಆಗ್ರಹ

ಮೈಸೂರು, ಆ.12(ಎಂಟಿವೈ)– ಮೈಸೂರು ತಾಲೂಕು ವ್ಯಾಪ್ತಿಯ ವಿವಿಧ ಪಟ್ಟಣ ಹಾಗೂ ಗ್ರಾಮ ಪಂಚಾಯತ್‌ನಲ್ಲಿ ಸ್ವಚ್ಛತಾ ಕಾರ್ಯ ನಡೆಸುತ್ತಿರುವ ಪೌರಕಾರ್ಮಿಕರಿಗೆ ನಿವೇಶನ ಮಂಜೂರು ಮಾಡಿಕೊಟ್ಟು ಮನೆ ನಿರ್ಮಿಸಿಕೊಡುವಂತೆ ಕರ್ನಾಟಕ ರಾಜ್ಯ ಪೌರಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಡಿ.ಆರ್.ರಾಜು ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ತಾಲೂಕಿನ ಕಡಕೊಳ, ಶ್ರೀರಾಂಪುರ, ಬೋಗಾದಿ ಪಟ್ಟಣ ಪಂಚಾಯಿತಿ, ಇಲವಾಲ ಹಾಗೂ ಸಿದ್ದಲಿಂಗಪುರ ಗ್ರಾಪಂಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸುತ್ತಿರುವ ಪೌರ ಕಾರ್ಮಿಕರು ಹಾಗೂ ಇನ್ನಿತರರಿಗೆ ಸ್ವಂತ ಮನೆ ಇಲ್ಲದಂತಾಗಿದೆ. ಈ ಪೌರ ಕಾರ್ಮಿಕರು, ಸ್ವಚ್ಛತಾ ವಾಹನ ಚಾಲಕರು, ಲೋಡರ್ಸ್, ಮ್ಯಾನ್ಯುವಲ್ ಸ್ಕ್ಯಾವೆಂಜರ್ಸ್ ಬೆಳಗ್ಗೆ ಸ್ವಚ್ಛತಾ ಕೆಲಸಕ್ಕೆ ಹೋದರೆ ಬರುವುದು ಸಂಜೆಯೇ ಆಗುತ್ತದೆ. ಇವರಿಗೆ ನಿವೇಶನ ನೀಡಬೇಕು. ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ 2023ನೇ ಸಾಲಿನಲ್ಲಿ ವಿಶೇಷ ನೇಮಕಾತಿ ಅಡಿಯಲ್ಲಿ ನೇಮಕ ಗೊಂಡು ಎರಡು ವರ್ಷ ಕಳೆದು ಪ್ರೊಬೇಷನರಿ ಅವಧಿ ಪೂರೈಸಿರುವವರಿಗೆ ಪ್ರಮಾಣಪತ್ರ ನೀಡಬೇಕೆಂದು ಮನವಿ ಮಾಡಿದರು.

ಕಡಕೊಳ ಪಟ್ಟಣ ಪಂಚಾಯಿತಿ ಸ್ವಚ್ಛತಾ ಪೌರ ಕಾರ್ಮಿಕರಿಗೆ ಬ್ಯಾತಹಳ್ಳಿ ಗ್ರಾಮದಲ್ಲಿ, ಶ್ರೀರಾಂಪುರ ಪಟ್ಟಣ ಪಂಚಾಯಿತಿಯಲ್ಲಿ ಗುರೂರು ಅಥವಾ ಪಾಲಿಕೆಯ ಜಾಗ, ಬೋಗಾದಿ ಪಟ್ಟಣ ಪಂಚಾಯಿತಿಯ ಪೌರ ಕಾರ್ಮಿಕರಿಗೆ ಇಲವಾಲ ಹೋಬಳಿ ಮಾದಹಳ್ಳಿಯಲ್ಲಿ, ಇಲವಾಲ ಗ್ರಾಪಂ ಸ್ವಚ್ಛತಾ ಕಾರ್ಮಿಕರಿಗೂ ಇದೇ ಸ್ಥಳದಲ್ಲಿ, ಸಿದ್ದಲಿಂಗಪುರ ಗ್ರಾಪಂ ಸ್ವಚ್ಛತಾ ಕಾರ್ಮಿಕರಿಗೆ ಕೆಸರೆಯಲ್ಲಿ, ಟಿ. ನರಸೀಪುರ ಪುರಸಭೆ ಪೌರ ಕಾರ್ಮಿಕರಿಗೆ ಬಂಗಾರಪ್ಪ ಬಡಾವಣೆಯಲ್ಲಿ ನಿವೇಶನ ನೀಡಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಪೌರಕಾರ್ಮಿಕರ ಸಂಘದ ಪದಾಧಿಕಾರಿಗಳಾದ ಮಂಚಯ್ಯ, ಕೆ. ನಂಜಪ್ಪ ಬಸವನಗುಡಿ, ಪವಿತ್ರ, ಬೀರಿಹುಂಡಿ ಮಂಜುನಾಥ್, ವಸಂತಕುಮಾರ್, ಆರ್. ಅಂಜಲಿ ಇನ್ನಿತರರು ಇದ್ದರು.

ಮೈಸೂರಲ್ಲಿ ಪಿಒಎಸ್‌ಪಿ ವಿಮಾ ಕಚೇರಿ ಆರಂಭ

ಮೈಸೂರು,ಆ.12–ಭಾರತದ ಮುಂಚೂಣಿಯ ಪಿಒಎಸ್‌ಪಿ–ಪ್ರೇರಿತ ವಿಮಾ ವಿತರಣೆಯ ಪ್ಲಾಟ್‌ಫಾರಂಗಳಲ್ಲಿ ಒಂದಾದ ಪಿಬಿ ಪಾರ್ಟ್ನರ್ಸ್‌ನ ಕರ್ನಾಟಕದಲ್ಲಿ ವಿಮೆಯ ವ್ಯಾಪ್ತಿ ಹೆಚ್ಚಿಸುವುದನ್ನು ಮುಂದುವರಿಸಿದೆ. ಮೈಸೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅಭಿಮನ್ಯು ಶರ್ಮಾ (ಬಿಸಿನೆಸ್ ಹೆಡ್–ಮೋಟಾರ್ ಇನ್ಸೂರೆನ್ಸ್) ಮತ್ತು ಅಮಿತ್ ಭದೋರಿಯಾ (ನ್ಯಾಷನಲ್ ಸೇಲ್ಸ್ ಹೆಡ್–ಮೋಟಾರ್ ಇನ್ಸೂರೆನ್ಸ್) ಮಾತನಾಡಿ, ಭಾರತದ ಪ್ರಗತಿಯ ಮಾರುಕಟ್ಟೆಗಳಲ್ಲಿ ವಿಮೆಯ ವ್ಯಾಪ್ತಿಯನ್ನು ಮತ್ತಷ್ಟು ಆಳವಾಗಿಸುವ ಪಿಬಿ ಪಾರ್ಟ್ನರ್ಸ್‌ನ ವಿಸ್ತಾರ ಯೋಜನೆಯ ಭಾಗವಾಗಿದೆ. ಪಿಬಿ ಪಾರ್ಟ್ನರ್ಸ್‌ನ ತನ್ನ ಗುರುತನ್ನು ಏಜೆಂಟ್ ಪಾರ್ಟ್ನರ್–ಪ್ರಥಮ ಬ್ರಾಂಡ್ ಆಗಿ ಮರು ದೃಢೀಕರಿಸುತ್ತಿದ್ದು, ವಿಮೆಯನ್ನು ಸರಳೀಕರಿಸಲು ಬದ್ಧವಾಗಿದೆ. ಏಜೆಂಟರ ಜೀವನೋಪಾಯಗಳಿಗೆ ಬೆಂಬಲಿಸುತ್ತದೆ ಮತ್ತು ಹೆಚ್ಚು ಆರ್ಥಿಕವಾಗಿ ಸುರಕ್ಷಿತ ಭಾರತ ರೂಪಿಸುತ್ತದೆ ಎಂದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಆದಿವಾಸಿ ರಕ್ಷಣಾ ಪರಿಷತ್ತು ಪ್ರತಿಭಟನೆ


ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿ ಎಡಿಸಿ ಅವರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಆ.12(ಎಂಕೆ)– 31ನೇ ವಿಶ್ವ ಆದಿವಾಸಿ ದಿನಾಚರಣೆ ಅಂಗವಾಗಿ ವಿವಿಧ ಬೇಡಿಕೆ ಈಡೇರಿಸಲು ಒತ್ತಾಯಿಸಿ ಕರ್ನಾಟಕ ಆದಿವಾಸಿ ರಕ್ಷಣಾ ಪರಿಷತ್ತಿನ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡ ಪರಿಷತ್ತಿನ ಸದಸ್ಯರು, ಕರ್ನಾಟಕದ ಪಶ್ಚಿಮಘಟ್ಟ ಪ್ರದೇಶದಲ್ಲಿರುವ ಲೈನ್ ಮನೆಗಳಲ್ಲಿ ವಾಸವಿರುವ ಜೀತದ ಆದಿವಾಸಿಗಳ ಸಮೀಕ್ಷೆ ನಡೆಸಿ ಸಮಗ್ರ ಪುನರ್ವಸತಿ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮವನ್ನು ಪ್ರತ್ಯೇಕಿಸಬೇಕು. ಅದರಲ್ಲಿ ರಾಜ್ಯದ 49 ಪರಿಶಿಷ್ಟ ಪಂಗಡಗಳು ಒಳಗೊಳ್ಳುವಂತೆ ಮಾಡಬೇಕು. ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಅರಣ್ಯ ಹಕ್ಕು ಕಾಯ್ದೆಯ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಿ ಎಲ್ಲಾ ಸಮುದಾಯಗಳಿಗೆ ಅನುಷ್ಠಾನಗೊಳಿಸಬೇಕು ಎಂದು ಒತ್ತಾಯಿಸಿದರು.

ಶೈಕ್ಷಣಿಕ ಮೀಸಲಾತಿಯು ಒಂದೇ ಸಮುದಾಯದ ಪಾಲಾಗಿದೆ. ಮೂಲ ಆದಿವಾಸಿಗಳಿಗೆ ಮೀಸಲಾತಿ ಗಗನ ಕುಸುಮವಾಗಿದೆ. ಆದುದರಿಂದ ಪರಿಶಿಷ್ಟ ಜಾತಿ ಒಳ ಮೀಸಲಾತಿಯ ಆಯೋಗದಂತೆ ಪರಿಶಿಷ್ಟ ಪಂಗಡಕ್ಕೂ ಆಯೋಗ ರಚಿಸಿ ಸಮೀಕ್ಷೆ ಕೈಗೊಂಡು ಸೂಕ್ತ ಒಳ ಮೀಸಲಾತಿಯನ್ನು ಕಲ್ಪಿಸಬೇಕು ಎಂದು ಆಗ್ರಹಿಸಿದರು. ಸಂಘಟನೆ ರಾಜ್ಯಾಧ್ಯಕ್ಷ ಎಂ.ಕೃಷ್ಣಯ್ಯ, ಜಿಲ್ಲಾಧ್ಯಕ್ಷ ವೈ.ಕೆ.ಸುಬ್ರಮಣ್ಯ, ಮುಖಂಡರಾದ ರಾಜು, ನಾಗರಾಜು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪೂರ್ವಜರಿಗೆ ಇಲ್ಲದ ಪ್ಲಾಸ್ಟಿಕ್ ಅನಿವಾರ್ಯತೆ ಇಂದಿನ ಪೀಳಿಗೆಗೇಕೆ...!?

●ಮೈಸೂರು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಬೇಸರದ ಪ್ರಶ್ನೆ ●ಶಾಲಾ ಮಕ್ಕಳ ಮೂಲಕ ಸ್ವಚ್ಛತೆ ಕಾಯ್ದುಕೊಳ್ಳುವ 'ಸ್ವಚ್ಛ ಮೈಸೂರು ಅಭಿಯಾನ'ಕ್ಕೆ ಚಾಲನೆ

ಮೈಸೂರು, ಆ.12(ಎಸ್‌ಪಿಎನ್)– ನಮ್ಮ ಹಿರಿಯರಿಗೆ ಹಿಂದೆ ಪ್ಲಾಸ್ಟಿಕ್ ಬಳಕೆ ಅನಿವಾರ್ಯ ಆಗಿರಲಿಲ್ಲ. ಆದರೆ, ಇಂದಿನ ಪೀಳಿಗೆಗೆ ಪ್ಲಾಸ್ಟಿಕ್ ಅನಿವಾರ್ಯ ಅಲ್ಲದಿದ್ದರೂ ಅನಿವಾರ್ಯ ಎಂಬಂತೆ ಬಿಂಬಿಸಿಕೊಳ್ಳುತ್ತಿದ್ದಾರೆ ಎಂದು ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಕೃಷ್ಣಮೂರ್ತಿಪುರಂನಲ್ಲಿರುವ ಬಿಎಸ್‌ಎಸ್ ವಿದ್ಯೋದಯ ಸಂಸ್ಥೆ ಆವರಣದಲ್ಲಿ ಭಗಿನಿ ಸೇವಾಸಂಘ ವಿದ್ಯೋದಯ ವಿದ್ಯಾಸಂಸ್ಥೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಗ್ರಾಹಕ ಪರಿಷತ್ ಹಾಗೂ ನಗರದ ವಿವಿಧ ಶಾಲೆಗಳ ಸಹಯೋಗದೊಂದಿಗೆ ಆಯೋಜಿಸಿದ್ದ 'ಸ್ವಚ್ಛ ಮೈಸೂರು ಅಭಿಯಾನ'ಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಎಲ್ಲಾ ಧರ್ಮಗಳಲ್ಲೂ ತಿಳಿಸಿರುವಂತೆ ನಾವು ಮಾಡಿದ ಕರ್ಮ ನಾವೇ ಅನುಭವಿಸಬೇಕು ಎಂಬುದನ್ನು ಮರೆಯಬಾರದು. ಇದು ಭಗವದ್ಗೀತೆಯಲ್ಲೂ ಉಲ್ಲೇಖವಿದೆ. ಅದೇ ಸಿದ್ಧಾಂತವು ನಮ್ಮ ಬದುಕಿನ ಜೀವನ ಶೈಲಿಗೂ ಅನ್ವಯವಾಗುತ್ತದೆ. ನಾವು ಅಗತ್ಯಕ್ಕಿಂತ ಹೆಚ್ಚು ವಸ್ತುಗಳ ಬಳಕೆಗೆ ಮುಂದಾದರೆ, ಅದು ಉತ್ಪಾದನೆ ಮೇಲೆ ಒತ್ತಡ ಬೀರುತ್ತದೆ. ಉತ್ಪಾದನೆ ಹೆಚ್ಚಳವು ಪ್ರಕೃತಿ ಮೇಲೆ ಒತ್ತಡ ಸೃಷ್ಟಿಯಾಗಿ, ತ್ಯಾಜ್ಯ ಹೆಚ್ಚಳಕ್ಕೂ ಕಾರಣವಾಗುತ್ತದೆ ಎಂದು ಹೇಳಿದರು.

ಮೈಗ್ರಾಪದ ಬಾಮಿ ವಿ.ಶೆಣೈ ಅವರು ಒಂದು ಬಿಳಿ ಪಂಚೆ–ಅಂಗಿ ಧರಿಸಿ, ಸರಳ ಜೀವನಕ್ಕೆ ಹೊಂದಿಕೊಂಡಿದ್ದಾರೆ. ಆದರೆ, ನಾನು ಹೈಜೆನಿಕ್ ಜೀವನಕ್ಕೆ ಮಾರು ಹೋಗಿದ್ದೇನೆ. ನಾನು ಧರಿಸುವ ಬಟ್ಟೆಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಹೊಸ ಬಟ್ಟೆ ಖರೀದಿಸಲು ನನ್ನ ಮನಸು ಪ್ರೇರೇಪಿಸುತ್ತದೆ. ಇದು ಉತ್ಪಾದನೆ ಮೇಲೆ ಪರಿಣಾಮ ಬೀರಿ, ತ್ಯಾಜ್ಯ ಉತ್ಪಾದನೆಗೆ ನಾನೂ ಕೂಡ ಕಾರಣನಾಗುತ್ತಿದ್ದೇನೆ. ನನ್ನಂತೆ ಹಲವರು ಕೂಡ ಹೈಜೆನಿಕ್ ಜೀವನ ಶೈಲಿನಿಂದ ಪರೋಕ್ಷವಾಗಿ ಪ್ರಕೃತಿ ನಾಶಕ್ಕೆ ಕಾರಣರಾಗುತ್ತಿದ್ದಾರೆ. ಈ ವಿಷಯಗಳನ್ನು ಶಾಲಾ ಹಂತದಲ್ಲೇ ಮಕ್ಕಳಿಗೆ ತಿಳಿಸಿಕೊಟ್ಟರೆ, ಪ್ಲಾಸ್ಟಿಕ್ ಬಳಕೆ ಹಾಗೂ ಪ್ರಕೃತಿ ನಾಶಕ್ಕೆ ಕಡಿವಾಣ ಹಾಕಬಹುದು ಎಂದು ಸಲಹೆ ನೀಡಿದರು.

ಪ್ರತಿ ವಸ್ತುವಿನ ಬಳಕೆ ಹಾಗೂ ಸಮಾಜದಲ್ಲಿ ನಾವು ಮಾಡುವ ಪ್ರತಿ ಕೆಲಸವು ಸರಪಳಿಯಂತೆ ಒಂದಕ್ಕೊಂದು ಸಂಬಂಧ ಹೊಂದಿರುತ್ತದೆ. ನಾವು ಸ್ವಚ್ಛತೆಗೆ ಮುಂದಾಗುವುದಾದರೆ, ಬಳಕೆಯನ್ನು ಮಿತಿಗೊಳಿಸಬೇಕು. ಆಗ ಮಾತ್ರ ಸ್ವಚ್ಛ ನಗರ ನಿರ್ಮಾಣಕ್ಕೆ ಮುನ್ನುಡಿಯಾಗುತ್ತದೆ. ಪ್ರಸ್ತುತ ಮೈಸೂರಿಗೆ ಸ್ವಚ್ಛತೆಯಲ್ಲಿ 3ನೇ ಸ್ಥಾನ ದೊರೆತಿರುವುದಕ್ಕೆ ಇಷ್ಟಕ್ಕೆ ನಗರ ಪಾಲಿಕೆ ಸಮಾಧಾನಪಡುವ ಸ್ಥಿತಿಯಲ್ಲಿಲ್ಲ. ನಗರದಲ್ಲಿ ಕೈಗೊಳ್ಳಬೇಕಾದ ಅನೇಕ ಸುಧಾರಣೆಗಳಲ್ಲಿ ರ್‍ಯಾಂಕಿಂಗ್ ನಮಗೆ ನೆನಪಿಸುತ್ತದೆ. ಸ್ವಚ್ಛತೆ ನಮ್ಮ ಜವಾಬ್ದಾರಿ ಮಾತ್ರವಲ್ಲ. ನಮ್ಮ ಮಕ್ಕಳ ಜವಾಬ್ದಾರಿಯೂ ಹೌದು. ನಾವು ಇನ್ಮುಂದೆ ಎಲ್ಲೆಂದರಲ್ಲಿ ಕಸ ಹಾಕುವುದಿಲ್ಲ. ಸಾರ್ವಜನಿಕವಾಗಿ ಕಸ ಹಾಕುವವರನ್ನೂ ತಡೆಯುತ್ತೇವೆ ಎಂಬ ನಿರ್ಧಾರವನ್ನು ಎಲ್ಲರೂ ತಾಳಬೇಕು ಎಂದು ಮನವಿ ಮಾಡಿದರು.

ಮೈಗ್ರಾಪ ಸಂಸ್ಥಾಪಕ ಅಧ್ಯಕ್ಷ ಬಾಮೀ ವಿ.ಶೆಣೈ ಮಾತನಾಡಿ, ಆಷಾಢ ಮಾಸದಲ್ಲಿ ದೇವರ ಮೇಲಿನ ಭಕ್ತಿಯನ್ನು ತೋರಲು ಸಹಸ್ರಾರು ಭಕ್ತರು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿದ್ದರು. ಹೀಗೆ ಬಂದ ಭಕ್ತರು ಬೆಟ್ಟದಲ್ಲಿ ರಾಶಿ, ರಾಶಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಸುರಿದು ಪಾಪಕಾರ್ಯ ಮಾಡಿ ಹೋಗಿದ್ದಾರೆ. ಇಂತಹ ತ್ಯಾಜ್ಯವನ್ನು ತೆರವುಗೊಳಿಸಲು ನಾವಿದ್ದೇವೆ ಎಂದು ಎನ್‌ಜಿಒ ಸಂಸ್ಥೆಗಳು ಒಂದು ದಿನದ ಮಟ್ಟಿಗೆ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುತ್ತಿದ್ದವು. ಆದರೆ ಇಲ್ಲಿ ಅಗತ್ಯ ಕೆಲಸವೆಂದರೆ ತ್ಯಾಜ್ಯ ಹಾಕದಂತೆ ತಡೆಯುವ ಕೆಲಸವನ್ನೂ ಯಾರೂ ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ದೊಡ್ಡವರಿಗೆ ಸ್ವಚ್ಛತೆ ಬಗ್ಗೆ, ಪ್ಲಾಸ್ಟಿಕ್ ಬಳಸದಂತೆ, ಪರಿಸರ ನಾಶ ಕುರಿತು ಎಲ್ಲೆಂದರಲ್ಲಿ ಬಿಸಾಡದಂತೆ ತಿಳಿ ಹೇಳಿ ಸಾಕಾಗಿ ಹೋಗಿದೆ. ಇನ್ನೇನಿದ್ದರೂ ಶಾಲಾ ಮಕ್ಕಳ ಮೂಲಕ ದೊಡ್ಡವರಿಗೆ ಅರಿವು ಮೂಡಿಸುವುದು ನಮ್ಮ ಕೊನೆಯ ಭರವಸೆ. ಮಕ್ಕಳೇ ಸ್ವಚ್ಛತಾ ರಾಯಭಾರಿಗಳಾಗಬೇಕು. ಹಿರಿಯರಿಗೆ ಪ್ಲಾಸ್ಟಿಕ ಬಳಕೆ ತಗ್ಗಿಸುವಂತೆ, ಸಾರ್ವಜನಿಕ ಸ್ಥಳಗಳಲ್ಲಿ ಕಸ ಸುರಿಯದೇ ಸ್ವಚ್ಛತೆಗೆ ಮುಂದಾಗಬೇಕು ಎಂದು ಒತ್ತಾಯಿಸಬೇಕು ಎಂದು ವಿದ್ಯಾರ್ಥಿಗಳಲ್ಲಿ ಮನವಿ ಮಾಡಿದರು.

ಭಾರತೀಯ ವಿದ್ಯಾ ಭವನ, ರೋಟರಿ ಮೈಸೂರು ಶಾಲೆ, ಮಾನಸ ಸರೋವರ ಪುಷ್ಕರಣಿ ವಿದ್ಯಾಶ್ರಮ, ಜೆಎಸ್‌ಎಸ್ ಮಹಾ ವಿದ್ಯಾಪೀಠ, ಆರ್‌ವಿಪಿಎಸ್ ಪಿಯು ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಲ್ಲ ಶಾಲೆಗಳ ಕೊಠಡಿಗಳಿಗೆ ಪರಿಷತ್‌ನಿಂದ ಸ್ವಚ್ಛತಾ ಜಾಗೃತಿ ಬಿಂಬಿಸುವ ಪೋಸ್ಟರ್‌ಗಳನ್ನು ವಿತರಿಸಲಾಯಿತು.

ವೇದಿಕೆಯಲ್ಲಿ ಬಿಎಸ್‌ಎಸ್ ವಿದ್ಯೋದಯ ಸಂಸ್ಥೆಯ ಕಾರ್ಯದರ್ಶಿ ಆರ್.ವಾಸುದೇವ ಭಟ್, ಸಂಪನ್ಮೂಲ ವ್ಯಕ್ತಿ ಕೆ.ಜಿ. ಮ್ಯಾಥ್ಯೂ, ಪಾಲಿಕೆ ಎಇಇ ಮೃತ್ಯುಂಜಯ, ಮೈಸೂರು ವೆಸ್ಟ್ ಲಯನ್ಸ್ ಸೇವಾ ನಿಕೇತನ ಶಾಲೆಯ ಪ್ರಾಂಶುಪಾಲರಾದ ರೂಪಾ ಕರುಂಬಯ್ಯ ಉಪಸ್ಥಿತರಿದ್ದರು.


ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರು 'ಸ್ವಚ್ಛ ಮೈಸೂರು ಅಭಿಯಾನ'ದ ಪೋಸ್ಟರ್ ಬಿಡುಗಡೆಗೊಳಿಸಿದರು. ಬಿಎಸ್‌ಎಸ್ ವಿದ್ಯೋದಯ ಸಂಸ್ಥೆಯ ಕಾರ್ಯದರ್ಶಿ ಆರ್.ವಾಸುದೇವ ಭಟ್, ಮೈಗ್ರಾಪದ ಬಾಮಿ ವಿ.ಶೆಣೈ, ಸಂಪನ್ಮೂಲ ವ್ಯಕ್ತಿ ಕೆ.ಜಿ.ಮ್ಯಾಥ್ಯೂ, ಪಾಲಿಕೆ ಎಇಇ ಮೃತ್ಯುಂಜಯ ಉಪಸ್ಥಿತರಿದ್ದರು.

> ಪಾಲಿಕೆ ಆಯುಕ್ತರಾದ ಶೇಖ್ ತನ್ವೀರ್ ಆಸಿಫ್ ಅವರು, ಪರಿಸರ ಉಳಿಸುವ ಕುರಿತು ಕಾಳಜಿ ಹೊಂದಿದ್ದಾರೆ. ಜೊತೆಗೆ ಯುವಕರಿದ್ದಾರೆ. ಇವರಲ್ಲಿ ನನ್ನದೊಂದು ಮನವಿ. ಸರ್ಕಾರಿ ಶಾಲಾ ಮಕ್ಕಳಲ್ಲಿ ಪ್ಲಾಸ್ಟಿಕ್ ಬಳಕೆ ತಗ್ಗಿಸುವ ಕುರಿತು ಜಾಗೃತಿ ಮೂಡಿಸಲು ಮೈಸೂರು ಜಿಪಂ ಸಿಇಓ ಮೂಲಕ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ (ಅಭಿವೃದ್ಧಿ ಮತ್ತು ಆಡಳಿತ)ರಿಗೆ ಪತ್ರ ಬರೆಯಲು ನಿರ್ದೇಶಿಸಬೇಕು.
>
> \- ಬಾಮಿ ವಿ. ಶೆಣೈ, ಸಂಸ್ಥಾಪಕ ಅಧ್ಯಕ್ಷರು, ಮೈಗ್ರಾಪ

ಆಗಸ್ಟ್ 15 ರಂದು ಶಾರದಾವಿಲಾಸದಲ್ಲಿ ಸ್ವಾತಂತ್ರ್ಯೋತ್ಸವ

ಮೈಸೂರು, ಆ. 12– ಮೈಸೂರಿನ ಶಾರದಾವಿಲಾಸ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಆಗಸ್ಟ್ 15 ರಂದು ಬೆಳಿಗ್ಗೆ 8.30ಕ್ಕೆ ಸ್ವಾತಂತ್ರ್ಯೋತ್ಸವ–2025 ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹುಬ್ಬಳ್ಳಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಪಿ.ಈಶ್ವರ್ ಭಟ್ ಭಾಗವಹಿಸಲಿದ್ದಾರೆ. ಧ್ವಜಾರೋಹಣ ಮತ್ತು ಅಧ್ಯಕ್ಷತೆಯನ್ನು ಶಾರದಾವಿಲಾಸ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ ವಹಿಸಲಿದ್ದಾರೆ ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಆರ್.ನರಸಿಂಹ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಮೈಸೂರಲ್ಲಿ
ಆಶಾ ಕಾರ್ಯಕರ್ತೆಯರ ಅಹೋರಾತ್ರಿ ಧರಣಿ ಆರಂಭ



ಮೈಸೂರಿನ ಮಹಾತ್ಮಗಾಂಧಿ ಪ್ರತಿಮೆ ಬಳಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರು ಅಹೋರಾತ್ರಿ ಧರಣಿ ಆರಂಭಿಸಿದರು.

ಮೈಸೂರು,ಆ.12(ಎಂಟಿವೈ)– ಕೇಂದ್ರ ಸರ್ಕಾರದ ಪ್ರೋತ್ಸಾಹ ಧನ ಒಳಗೊಂಡಂತೆ ಆಶಾ ಕಾರ್ಯಕರ್ತೆಯರಿಗೆ ಮಾಸಿಕ 10 ಸಾವಿರ ರೂ. ಗೌರವ ಧನ ನೀಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೈಸೂರಲ್ಲಿ ಆಶಾ ಕಾರ್ಯಕರ್ತೆಯರು ಅಹೋರಾತ್ರಿ ಧರಣಿ ಆರಂಭಿಸಿದರು.

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ವತಿಯಿಂದ ಇಂದಿನಿಂದ ಆ.14ರವರೆಗೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಅಹೋರಾತ್ರಿ ಧರಣಿ ನಡೆಸಲಾಗುತ್ತಿದೆ. ಅಂತೆಯೇ ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿಯೂ ಧರಣಿ ಆರಂಭಿಸಿರುವ ಆಶಾ ಕಾರ್ಯಕರ್ತೆಯರು ವಿವಿಧ ಬೇಡಿಕೆ ಈಡೇರಿಸುವಂತೆ ಹಕ್ಕೊತ್ತಾಯ ಮಾಡಿದ್ದಾರೆ.

ಮೈಸೂರಿನ ಮಹಾತ್ಮಗಾಂಧಿ ಪ್ರತಿಮೆ ಬಳಿ ಇಂದು ಬೆಳಗ್ಗೆ ಆರಂಭವಾದ ಆಶಾ ಕಾರ್ಯಕರ್ತೆಯರ ಧರಣಿಗೆ ಪ್ರೊ.ಕಾಳಚನ್ನೇಗೌಡ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಆರೋಗ್ಯ ಕ್ಷೇತ್ರದಲ್ಲಿ ಆಶಾ ಕಾರ್ಯಕರ್ತೆಯರ ಸೇವೆ ಶ್ಲಾಘನೀಯ. ಕೋವಿಡ್ ಸೇರಿದಂತೆ ಅನೇಕ ಸಂದರ್ಭಗಳಲ್ಲಿ ಆಶಾ ಕಾರ್ಯಕರ್ತೆಯರು ಮನೆ ಮನೆಗೆ ತೆರಳಿ ಪರಿಸ್ಥಿತಿ ಅವಲೋಕಿಸಿ, ವಸ್ತುನಿಷ್ಠ ವರದಿಯನ್ನು ನೀಡುವ ಮೂಲಕ ಜನ ಮಾತ್ರವಲ್ಲದೆ ಸಮಾಜದ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. ನವಜಾತ ಶಿಶುಗಳ ಆರೋಗ್ಯ ಕಾಪಾಡುವ, ತಾಯಂದಿರು, ಬಾಣಂತಿಯರ ಆರೋಗ್ಯ ಮೇಲ್ವಿಚಾರಣೆ ಮಾಡುವ ಮೂಲಕ ತಮ್ಮ ಅಮೂಲ್ಯ ಸೇವೆ ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ ಆಶಾ ಕಾರ್ಯಕರ್ತೆಯರ ಬೇಡಿಕೆ ಈಡೇರಿಸುವಲ್ಲಿ ಕ್ರಮ ಕೈಗೊಳ್ಳಬೇಕು ಎಂದರು.

ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿಗಳಾದ ಚಂದ್ರಶೇಖರ್ ಮೇಟಿ ಮಾತನಾಡಿ, ಆಶಾ ಕಾರ್ಯಕರ್ತೆಯರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ನೀಡುವ ಗೌರವಧನವನ್ನು ಕ್ರೋಢೀಕರಿಸಿ ಮಾಸಿಕ 10 ಸಾವಿರ.ರೂ ನಿಗದಿ ಮಾಡಬೇಕು. ಬಜೆಟ್‌ನಲ್ಲಿ ವಿಶಿಷ್ಟ ಯೋಜನೆಯನ್ನು ಏಪ್ರಿಲ್‌ನಲ್ಲಿ ನೀಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದ್ದರು. ಆದರೆ ಇದುವರೆಗೂ ಯಾವುದೇ ಬೆಳವಣಿಗೆಯಾಗಿಲ್ಲ. 2025ರ ಬಜೆಟ್‌ನಲ್ಲಿ ಎಲ್ಲಾ ಅಂಗನವಾಡಿ ಮತ್ತು ಬಿಸಿಯೂಟ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನವಾಗಿ 1 ಸಾವಿರ ರೂ. ಹೆಚ್ಚಳ ಮಾಡುವುದಾಗಿ ಘೋಷಿಸಿದ್ದರು. ಆದರೆ, ಆ ಯೋಜನೆಯಿಂದ ಆಶಾ ಕಾರ್ಯಕರ್ತೆಯರನ್ನು ಕೈಬಿಡಲಾಗಿದೆ. ಮತ್ತೊಂದೆಡೆ ಒಂದು ಸಾವಿರ ಜನ ಸಂಖ್ಯೆಗೆ ಒಬ್ಬ ಆಶಾ ಕಾರ್ಯಕರ್ತೆಯರನ್ನು ನೇಮಿಸಿ ಕೊಂಡಿದ್ದು, ರಾಜ್ಯದಲ್ಲಿ 42 ಸಾವಿರ ಆಶಾ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುತಿದ್ದಾರೆ. ಇದೀಗ ಕಾರ್ಯಕರ್ತೆಯರಿಗೆ ಭರವಸೆ ನೀಡಿದ ಸರ್ಕಾರ ಗ್ಯಾರಂಟಿ ಯೋಜನೆಯ ಆರ್ಥಿಕ ಹೊಡೆತ ಉಂಟಾಗಿ, ಸುಮಾರು 15 ಸಾವಿರ ಆಶಾ ಕಾರ್ಯಕರ್ತೆಯರನ್ನು ಕೆಲಸದಿಂದ ತೆಗೆದು ಹಾಕುವ ಒಳಸಂಚು ರೂಪಿಸುತ್ತಿದೆ ಎಂದು ಆರೋಪಿಸಿದರು.

ಕನಿಷ್ಠ 10ಸಾವಿರ ರೂ. ಕಡ್ಡಾಯವಾಗಿ ನಿಗದಿಯಾಗಬೇಕು. ಬಿಸಿಯೂಟ ಕಾರ್ಯಕರ್ತೆಯರಿಗೆ ನೀಡಿದ 1 ಸಾವಿರ ರೂ. ಪ್ರೋತ್ಸಾಹ ಧನವನ್ನು ಆಶಾ ಕಾರ್ಯಕರ್ತೆಯರಿಗೂ ನೀಡಬೇಕು. ನಗರ ಆಶಾಗೆ 2 ಸಾವಿರ ಗೌರವಧನ ಹೆಚ್ಚಿಸಬೇಕು. ನಿವೃತ್ತರಾದ ಆಶಾಗಳಿಗೆ ಪಶ್ಚಿಮ ಬಂಗಾಳದಂತೆ ಇಡುಗಂಟು ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಮೈಸೂರು ನಗರ ಸಲಹೆಗಾರರಾದ ಸೀಮಾ ಜಿ.ಎಸ್, ಸಂಘದ ಅಧ್ಯಕ್ಷೆ ಭಾಗ್ಯ, ಕಾರ್ಯದರ್ಶಿ ಮಂಜುಳಾ, ಟಿ.ನರಸೀಪುರ ಕಾರ್ಯದರ್ಶಿ ಪವಿತ್ರಾ, ನಂಜನಗೂಡು ಘಟಕದ ಅಧ್ಯಕ್ಷೆ ರೇಣುಕಾ, ಮೈಸೂರು ತಾಲೂಕು ಅಧ್ಯಕ್ಷೆ ಮಂಗಳಮ್ಮ, ಹುಣಸೂರು ತಾಲೂಕು ಅಧ್ಯಕ್ಷೆ ಶಾಂತಮ್ಮ, ಕೆ.ಆರ್. ನಗರ ತಾಲೂಕು ಅಧ್ಯಕ್ಷೆ ಕೋಮಲ, ಹೆಚ್.ಡಿ ಕೋಟೆಯ ತಾಲೂಕು ಕಾರ್ಯದರ್ಶಿ ಸುಧಾ, ಮೈಸೂರು ನಗರ ಅಧ್ಯಕ್ಷೆ ಕೋಮಲ, ಜಿಲ್ಲಾ ಸಮಿತಿ ಸದಸ್ಯೆ ಸವಿತಾ ಸೇರಿದಂತೆ ಜಿಲ್ಲೆಯ ವಿವಿಧೆಡೆಯಿಂದ ನೂರಾರು ಮಂದಿ ಆಶಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

ಪ್ರಾಥಮಿಕ ಶಾಲಾ ಶಿಕ್ಷಕರ ಹಿಂಬಡ್ತಿ ಕೈಬಿಡುವುದು ಸೇರಿದಂತೆ ಇತರೆ ಬೇಡಿಕೆ ಈಡೇರಿಕೆಗೆ ಡಿಸಿಗೆ ಮನವಿ



ಪಿಎಸ್‌ಟಿ ಶಿಕ್ಷಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮೈಸೂರು ಘಟಕದ ಪದಾಧಿಕಾರಿಗಳು ಮೈಸೂರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಮೈಸೂರು,ಆ.12(ಎಸ್‌ಪಿಎನ್)– ಪ್ರಾಥಮಿಕ ಶಾಲಾ ಶಿಕ್ಷಕರಿಗೆ(ಪಿಎಸ್‌ಟಿ) ಸಾಮೂಹಿಕ ಹಿಂಬಡ್ತಿ ಕೈಬಿಡುವುದು ಸೇರಿದಂತೆ ಇತರೆ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮೈಸೂರು ಘಟಕದ ಪದಾಧಿಕಾರಿಗಳು ಮೈಸೂರು ಜಿಲ್ಲಾಧಿಕಾರಿ, ಮೈಸೂರು ಜಿಪಂ ಸಿಇಓ ಹಾಗೂ ಶಾಲಾ ಶಿಕ್ಷಣ ಇಲಾಖೆ ಡಿಡಿಪಿಐ ಮೂಲಕ ಜಿಲ್ಲಾಧ್ಯಕ್ಷ ಸೋಮೇಗೌಡ ನೇತೃತ್ವದಲ್ಲಿ ಸೋಮವಾರ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

2017ರವರೆಗೆ ನೇಮಕವಾದ ಶಿಕ್ಷಕರನ್ನು 1–7ನೇ ತರಗತಿಗೆ ನೇಮಕವಾದ ಶಿಕ್ಷಕರೆಂದು ಪರಿಗಣಿಸಬೇಕು. ಇದಕ್ಕೆ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಅನ್ವಯಿಸಬಾರದು. ಪದವಿ ಪೂರೈಸಿದ ಶಿಕ್ಷಕರಿಗೆ ಸೇವಾ ಜೇಷ್ಠತೆಯೊಂದಿಗೆ ಜಿಪಿಟಿ ಶಿಕ್ಷಕರೆಂದು ಪದನಾಮೀಕರಿಸಲು ಯಾವುದೇ ಷರತ್ತು ವಿಧಿಸಬಾರದು. ಪಿಎಸ್‌ಟಿ ಶಿಕ್ಷಕರಿಗೆ ಈ ಹಿಂದಿನಂತೆ ಮುಖ್ಯಶಿಕ್ಷಕರು, ಹಿರಿಯ ಮುಖ್ಯಶಿಕ್ಷಕರ ಹುದ್ದೆಗೆ ಸೇವಾ ಜೇಷ್ಠತೆಯ ಆಧಾರದ ಮೇಲೆ ಬಡ್ತಿ ನೀಡಬೇಕು.

ಅನ್ಯ ಕಾರ್ಯಗಳಿಂದ ಹಾಗೂ ಅನ್‌ಲೈನ್ ಕೆಲಸಗಳಿಂದ ಶಿಕ್ಷಕರ ಮೇಲೆ ಆಗುತ್ತಿರುವ ಅನಗತ್ಯ ಒತ್ತಡ ಕಡಿಮೆ ಮಾಡಿ, ಬೋಧನೆಗೆ ಹೆಚ್ಚಿನ ಸಮಯಾವಕಾಶ ನೀಡಬೇಕು. ಈ ಹಿಂದೆ ಪ್ರಾಥಮಿಕ ಶಾಲಾ ಶಿಕ್ಷಕರ ಎಲ್ಲಾ ಬೇಡಿಕೆಗಳನ್ನು 4.9.2024 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಿಕ್ಷಣ ಇಲಾಖೆ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ತಜ್ಞರ ಸಮಿತಿ ರಚಿಸಿ, ಆ ಸಮಿತಿಯಿಂದ ವರದಿ ಪಡೆದು 30 ದಿನಗಳಲ್ಲಿ ನಿಮ್ಮ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ್ದರು. ಆ ಭರವಸೆ ಇನ್ನೂ ಈಡೇರಿಲ್ಲ. ಹಾಗಾಗಿ ಆ.25ರೊಳಗೆ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಬೇಡಿಕೆಗಳಿಗೆ ಅನುಗುಣವಾಗಿ ಕಾನೂನು ಇಲಾಖೆ ತನ್ನ ಅಭಿಪ್ರಾಯವನ್ನು ಎರಡು ಬಾರಿ ಸಕಾರಾತ್ಮಕವಾಗಿ ನೀಡಿದೆ. ಕಾನೂನು ಇಲಾಖೆಯ ಅಭಿಪ್ರಾಯವನ್ನು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯೂ ಮಾನ್ಯ ಮಾಡಿದೆ. ಈ ವಿಷಯವಾಗಿ ಆರ್ಥಿಕ ಇಲಾಖೆ ಮಾತ್ರ ಅನುಮತಿ ನೀಡಲು ವಿಳಂಬ ಧೋರಣೆ ಅನುಸರಿಸುತ್ತಿದೆ ಎಂದು ಪದಾಧಿಕಾರಿಗಳು ತೀವ್ರ ಬೇಸರ ಹೊರಹಾಕಿದರು.

ಪಿಎಸ್‌ಟಿ–ಜಿಪಿಟಿ ಶಿಕ್ಷಕರ ಸಮಸ್ಯೆಯನ್ನು ಬಗೆಹರಿಸುವಂತೆ 2017ರಿಂದ ಹೋರಾಟ ಮಾಡುತ್ತಿದ್ದರೂ ನಮ್ಮ ಹೋರಾಟಕ್ಕೆ ರಾಜ್ಯ ಸರ್ಕಾರ ಸ್ಪಂದಿಸುತ್ತಿಲ್ಲ. ಇತ್ತೀಚೆಗೆ 6–8ನೇ ತರಗತಿಯವರೆಗೆ ಸಂಪೂರ್ಣ ಬೋಧನೆಯನ್ನು ಜಿಪಿಟಿ ಶಿಕ್ಷಕರಿಗೆ ಮೀಸಲಾಗಿಟ್ಟು, ವರ್ಗಾವಣೆಯಲ್ಲೂ ಇದೇ ನೀತಿ ಅನುಸರಿಸುತ್ತಿದೆ. ಇದರಿಂದ ಸಾವಿರಾರು ಪಿಎಸ್‌ಟಿ ಶಿಕ್ಷಕರಿಗೆ ಬೋಧನೆ, ವರ್ಗಾವಣೆಯಲ್ಲಿ ಅನ್ಯಾಯವಾಗಿದೆ. ಈ ವಿಷಯವಾಗಿ ಸಮಸ್ಯೆ ಬಗೆಹರಿಸುವಂತೆ ಕಳೆದೆರಡು ವರ್ಷಗಳಿಂದ ರಾಜ್ಯ ಸರ್ಕಾರಕ್ಕೆ ಹತ್ತಾರು ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಜಿಲ್ಲಾಧ್ಯಕ್ಷ ಸೋಮೇಗೌಡ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

ಈ ವೇಳೆ ಜಿಲ್ಲಾ ಸಂಘ ಉಪಾಧ್ಯಕ್ಷ ಸುಬ್ರಹ್ಮಣ್ಯ, ಖಜಾಂಚಿ ಮಹದೇವ್, ಕಾರ್ಯದರ್ಶಿ ಕಾಂತರಾಜು, ಮುಖಂಡರಾದ ರಾಮಚಂದ್ರ, ಮಲ್ಲಣ್ಣ, ಬಬಿತಾ ಹಾಗೂ ತಾಲೂಕು ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಹಾಗೂ ಶಿಕ್ಷಕವೃಂದ ಹಾಜರಿದ್ದರು.

ರಾಷ್ಟ್ರ ಮಟ್ಟದ ವಿದ್ಯಾರ್ಥಿವೇತನಕ್ಕೆ ಪರೀಕ್ಷೆ

ಮೈಸೂರು, ಆ.12–ರಾಷ್ಟ್ರೀಯ ನಾಯಕ ಆಕಾಶ್ ಎಜುಕೇಷನಲ್ ಸರ್ವೀಸಸ್ ಲಿಮಿಟೆಡ್ (ಎಇಎಸ್‌ಎಲ್) ರಾಷ್ಟ್ರೀಯ ಮಟ್ಟದ ವಿದ್ಯಾರ್ಥಿವೇತನಕ್ಕೆ ಪರೀಕ್ಷಾ ಪೂರ್ವ ಸಿದ್ಧತಾ ಪೂರ್ವವಾಗಿ ಆಕಾಶ್ ರಾಷ್ಟ್ರೀಯ ಪ್ರತಿಭಾನ್ವೇಷಣೆ ಪರೀಕ್ಷೆ (ಅಂಥೆ) ಅನ್ನು ಪ್ರಾರಂಭಿಸುವುದಾಗಿ ಘೋಷಿಸಿದೆ.

ಆಕಾಶ್ 8ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಆಕಾಶ್ ಇನ್ವಿಕ್ಟಸ್ ಜೆಇಇ ಅಡ್ವಾನ್ಸ್ ತಯಾರಿ ಕಾರ್ಯಕ್ರಮಕ್ಕೆ ಪ್ರವೇಶಕ್ಕಾಗಿ ವಿದ್ಯಾರ್ಥಿ ವೇತನ ಪರೀಕ್ಷೆ ಯಾದ ಇನ್ವಿಕ್ಟಸ್ ಎಸ್ ಪರೀಕ್ಷೆಯನ್ನು ಸಹ ಪ್ರಾರಂಭಿಸುತ್ತಿದೆ. ರಾಷ್ಟ್ರೀಯ ಮಟ್ಟದ ಅರ್ಹತಾ–ಕಮ್–ವಿದ್ಯಾರ್ಥಿವೇತನ ಪರೀಕ್ಷೆ ಯನ್ನು ಆ. 24, 31, ಸೆಪ್ಟೆಂಬರ್ 7ರಂದು ನಡೆಸಲಾಗುವುದು ಎಂದು ಆಕಾಶ್ ಎಜು ಕೇಷನಲ್ ಸರ್ವೀಸಸ್ ಲಿಮಿಟೆಡ್ (ಎಇಎಸ್‌ಎಲ್)ನ ಸಿಇಒ ಮತ್ತು ಎಂಡಿ ದೀಪಕ್ ಮೆಹ್ರೋತ್ರಾ ತಿಳಿಸಿದ್ದಾರೆ.

ಐದು ವರ್ಷದಲ್ಲಿ ಸಿಐಎಸ್‌ಎಫ್ ಸಿಬ್ಬಂದಿ ಬಲ 2.20 ಲಕ್ಷಕ್ಕೆ ಏರಿಕೆ



ಮೈಸೂರು, ಆ.12– ಕೇಂದ್ರ ಗೃಹ ಇಲಾಖೆ ಅಡಿ ಕಾರ್ಯ ನಿರ್ವಹಿಸುವ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ(ಸಿಐಎಸ್‌ಎಫ್)ಯ ಒಟ್ಟು ಸಿಬ್ಬಂದಿ ಪ್ರಮಾಣವನ್ನು ಮುಂದಿನ ಐದು ವರ್ಷಗಳಲ್ಲಿ 2.20 ಲಕ್ಷಕ್ಕೆ ಹೆಚ್ಚಿಸಲಾಗುತ್ತಿದೆ.

ಸಿಐಎಸ್‌ಎಫ್ ಒಟ್ಟು ಬಲ ಸದ್ಯ 1.62 ಲಕ್ಷ ಇದ್ದು, ವಾರ್ಷಿಕ 14 ಸಾವಿರ ಸಿಬ್ಬಂದಿ ನೇಮಕಾತಿಯಂತೆ ಮುಂದಿನ ಐದು ವರ್ಷಗಳಲ್ಲಿ ಒಟ್ಟು ಸದಸ್ಯ ಬಲವನ್ನು 2.20 ಲಕ್ಷಕ್ಕೆ ಹೆಚ್ಚಿಸಿಕೊಳ್ಳಲು ಗೃಹ ಇಲಾಖೆ ಹಸಿರು ನಿಶಾನೆ ತೋರಿದೆ. ಈ ಕ್ರಾಂತಿಕಾರಿ ನಿರ್ಧಾರದಿಂದ ದೇಶದ ಕೈಗಾರಿಕಾ ಭದ್ರತೆ ಜೊತೆಗೆ ಸುಸ್ಥಿರ ಆರ್ಥಿಕ ಅಭಿವೃದ್ಧಿಗೆ ಸುರಕ್ಷಿತ ನೆಲೆಯನ್ನು ಒದಗಿಸುವ ನಿಟ್ಟಿನಲ್ಲಿ ಸಿಐಎಸ್‌ಎಫ್ ಗಣನೀಯ ಕೊಡುಗೆ ನೀಡಲು ಸಾಧ್ಯವಾಗುತ್ತದೆ ಎಂದು ಸಿಐಎಸ್‌ಎಫ್ ಪ್ರಕಟಣೆ ತಿಳಿಸಿದೆ.

ನಕ್ಸಲ್ ಪೀಡಿತ ಪ್ರದೇಶಗಳಲ್ಲಿನ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಸರ್ಕಾರಿ, ಅರೆ ಸರ್ಕಾರಿ ಸ್ವಾಮ್ಯದ ಉದ್ಯಮಗಳಿಗೆ, ಗಣಿಗಳಿಗೆ, ಜಲಾಶಯಗಳಿಗೆ, ಸಂಸ್ಥೆಗಳಿಗೆ ಭದ್ರತೆ, ಜಮ್ಮು–ಕಾಶ್ಮೀರದ ಜೈಲುಗಳಿಗೆ ಭದ್ರತೆ ಕಲ್ಪಿಸಲು ಸಿಐಎಸ್‌ಎಫ್ ಸಿಬ್ಬಂದಿ ಅಗತ್ಯವಿದೆ. ಅಲ್ಲದೆ ಪಹಲ್ಗಾಮ್ ದಾಳಿ ನಂತರ ದೇಶದ ವಿವಿಧ ಸರ್ಕಾರಿ, ಅರೆ ಸರ್ಕಾರಿ ಉದ್ಯಮಗಳ ಮುಖ್ಯಸ್ಥರಿಂದ ಸಿಐಎಸ್‌ಎಫ್ ಭದ್ರತೆಗೆ ಬೇಡಿಕೆ ಹೆಚ್ಚಿರುವುದರಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಬಲ ಹೆಚ್ಚಿಸಲಾಗುತ್ತಿದೆ. 2024ರಲ್ಲಿ 13,230 ಸಿಬ್ಬಂದಿ ನೇಮಕಾತಿಯಾಗಿದ್ದು, ಪ್ರಸಕ್ತ ವರ್ಷದಲ್ಲಿ 24,098 ಹುದ್ದೆಗಳಿಗೆ ನೇಮಕಾತಿಗೆ ಪ್ರಕ್ರಿಯೆ ನಡೆಯುತ್ತಿದೆ. ಬದಲಾಗುತ್ತಿರುವ ಭದ್ರತಾ ಸನ್ನಿವೇಶಕ್ಕೆ ಅನುಗುಣವಾಗಿ ಸಿಐಎಸ್‌ಎಫ್‌ನ ಸಾಮರ್ಥ್ಯ ಬಲಪಡಿಸಲಾಗುತ್ತಿದೆ.

ವಿಷ್ಣು ಪುಣ್ಯಭೂಮಿ ಧ್ವಂಸ; ಪೌರಕಾರ್ಮಿಕರಿಂದ ಪ್ರತಿಭಟನೆ



ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿರುವ ವಿಷ್ಣುವರ್ಧನ್ ಅವರ ಸ್ಮಾರಕ ಧ್ವಂಸ ಮಾಡಿರುವುದನ್ನು ಖಂಡಿಸಿ ಮೈಸೂರಲ್ಲಿ ಅಭಿಮಾನಿಗಳು ಪ್ರತಿಭಟಿಸಿದರು.

ಮೈಸೂರು, ಆ.12–ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗದಲ್ಲಿರುವ ಡಾ.ವಿಷ್ಣುವರ್ಧನ್ ಉದ್ಯಾನವನ ಮುಂಭಾಗ ಪೌರಕಾರ್ಮಿಕರು ಬೆಂಗಳೂರಿನ ಅಭಿಮಾನ್ ಸ್ಟುಡಿಯೋದಲ್ಲಿರುವ ಸಾಹಸಸಿಂಹ ವಿಷ್ಣುವರ್ಧನ್ ಅವರ ಪುಣ್ಯಭೂಮಿ ಧ್ವಂಸ ಮಾಡಿರುವುದನ್ನು ಖಂಡಿಸಿ ಪ್ರತಿಭಟಿಸಿದರು.

ಈ ವೇಳೆ ಮಾತನಾಡಿದ ಪೌರಕಾರ್ಮಿಕ ಮಹದೇವ್, ವಿಷ್ಣುವರ್ಧನ್ ಅವರ ಪುಣ್ಯಭೂಮಿ ಸರಿಪಡಿಸಬೇಕು ಎಂದು ಸರ್ಕಾರಕ್ಕೆ ಕೈಮುಗಿದು ಮನವಿ ಮಾಡಿದರು. ಇಲ್ಲವಾದಲ್ಲಿ ಸ್ವಚ್ಛತಾ ಕೆಲಸವನ್ನು ಬಿಟ್ಟು ಉಗ್ರವಾಗಿ ಪ್ರತಿಭಟಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ನಂತರ ಮಾತನಾಡಿದ ನಗರಪಾಲಿಕಾ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ ಸಾಹಸಸಿಂಹ ವಿಷ್ಣುವರ್ಧನ್ ಸಮಾಧಿ ಜಾಗವನ್ನು ಕೆಲವರು ತಮ್ಮ ಭೂಮಿ ಎಂದು ಹೇಳಿಕೊಂಡು, ಸಮಾಧಿಯನ್ನು ರಾತ್ರೋರಾತ್ರಿ ಧ್ವಂಸ ಮಾಡಿರುವುದು ಲಕ್ಷಾಂತರ ಅಭಿಮಾನಿಗಳಿಗೆ ನೋವು ತಂದಿದೆ. ಸರ್ಕಾರ ಈ ಕೂಡಲೇ ಕನ್ನಡ ಮತ್ತು ಸಂಸ್ಕೃತಿಯ ಪ್ರತೀಕವಾಗಿ ಅಭಿವೃದ್ಧಿಪಡಿಸಬೇಕು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಭೂಮಿಯನ್ನು ತಕ್ಷಣ ಸ್ವಾಧೀನಪಡಿಸಿಕೊಂಡು ಮಾಲೀಕರಿಗೆ ನಿಯಮಾನುಸಾರ, ಪರಿಹಾರ ನೀಡ ಬೇಕು ಎಂದರು. ಈ ವೇಳೆ ಸಂತೋಷ್, ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ರಾಜೇಶ್, ಪೌರಕಾರ್ಮಿಕರಾದ ಮುರುಗೇಶ್, ಮಹದೇವ್, ಗೋಪಾಲ್, ಪಳನಿ, ಮುರುಗೇಶ್, ಮಹದೇವ, ವಿಜಯ್ ಇನ್ನಿತರ ಪೌರಕಾರ್ಮಿಕರಿದ್ದರು.

ಆ.30, ಹಿರಿಯರ ನಡಿಗೆ ಕಾರ್ಯಕ್ರಮ

ಮೈಸೂರು,ಆ.12(ಜಿಎ)–ಮೈಸೂರಿನಲ್ಲಿ ಹಿರಿಯರ ನಡಿಗೆ(ಸ್ಟ್ರಾಲ್ ಎ ಥಾನ್) ಕಾರ್ಯಕ್ರಮವನ್ನು ವಯಾ ವಿಕಾಸ್ ವತಿಯಿಂದ ಆ.30ರಂದು ಆಯೋಜಿಸಲಾಗಿದೆ ಎಂದು ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪವಿತ್ರ ರೆಡ್ಡಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯರ ಸಬಲೀಕರಣದಲ್ಲಿ ನಿರತವಾಗಿರುವ ವಯಾ ವಿಕಾಸ್ ಸಂಸ್ಥೆಯಿಂದ ಮಾನಸ ಗಂಗೋತ್ರಿಯ ಓವೆಲ್ ಮೈದಾನದಲ್ಲಿ ಆ.30ರಂದು ಬೆಳಿಗ್ಗೆ 6.30ರಿಂದ 10ರವರೆಗೆ ಹಿರಿಯ ನಾಗರಿಕರಿಗೆ ಸ್ವಲ್ಪ ದೂರ ಓಡಾಟ(ಸ್ಟ್ರಾಲ್ ಎ ಥಾನ್) ಕಾರ್ಯಕ್ರಮ ಆಯೋಜಿಸಿದ್ದು, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಲಿದ್ದಾರೆ. ಸಂಸ್ಥೆಯ ಚೇರ್ಮನ್ ಕ್ರಿಸ್ ಗೋಪಾಲಕೃಷ್ಣನ್, ಸ್ಥಾಪಕ ಸದಸ್ಯರಾದ ಡಾ.ದೇವಿಪ್ರಸಾದ್‌ಶೆಟ್ಟಿ ಅಲೆಕ್ಸಾಂಡರ್ ಥಾಮಸ್, ಗೌರಿ ಕುಮಾರ್, ಡಾ.ಶ್ರೀನಾಥ್ ರೆಡ್ಡಿ, ಡಾ.ಗಿರಿಧರ್ ಜೆ.ಗ್ಯಾನಿ, ಪ್ರೊ.ಒ.ವಿ. ನಂದಿಮಠ್ ಭಾಗವಹಿಸುವರು ಎಂದರು.

ಭಾಗವಹಿಸವವರು ಆ.28ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ಸಂಸ್ಥೆಯು ಹಿರಿಯ ನಾಗರಿಕರಿಗೆ ಕಾನೂನು, ಆರೋಗ್ಯ ಮತ್ತು ಇತರ ಚಟುವಟಿಕೆಗಳ ಸೇವೆ ನೀಡುತ್ತಿದ್ದು, ಆಸಕ್ತರು ಉಚಿತವಾಗಿ ಸದಸ್ಯರಾಗಬಹುದು. ಮಾಹಿತಿ ಹಾಗೂ ನೋಂದಣಿಗೆ ಮೊ.ಸಂ.95133 00821 ಸಂಪರ್ಕಿಸಬಹುದು ಎಂದರು. ಗೋಷ್ಠಿಯಲ್ಲಿ ಜಾಯ್ಸ್ ಕುರಿಯನ್ ಇದ್ದರು.

PUBLIC NOTICE

This is to notify to the General Public that our client Sri Shivamurthy son of Karisiddegowda of Belawadi Village, Yelwala Hobli, Mysore Taluk is the owner in possession of landed property bearing Survey No. 84/2 measuring 21 guntas out of the total area of 3 acre 17 guntas situated at Madagalli Village, Yelwala Hobli, Mysore Taluk by virtue of a registered sale deed dated 23-06-2000 which was executed by its owners Sri. Ramegowda son of Annaiahana Kempegowda and his only son Shivanna. Ever since then our client continued to be in possession of the said property by changing khata to his name as per MR No. 1/2000-01.

In spite of the sale made by Ramegowda & Shivanna, clandestinely they divided the property in between them and got the land repoded as Survey Nos. 84/2 measuring 9 guntas in the name of Shivanna & 84/5 measuring 12 guntas in the name of Ramegowda. The said poding was challenged by our client before the Assistant Commissioner, Mysore in RA No.288/2024 & got the poding cancelled which was in the name of Shivanna & Ramegowda. After obtaining the order our client got the khata registered in his name.

The order of the Assistant Commissioner, Mysore was challenged before the Deputy Commissioner, Mysore in RP No.142/2024 and Deputy Commissioner, Mysore passed an order on 20.07.2024 setting aside the mutation entry and remanded the matter for fresh enquiry after issue of notice to both the parties. Now the remanded matter is under enquiry.

Now taking advantage of the order of the Deputy Commissioner, Mysore Ramegowda & Shivanna is making hectic effort to sell the below schedule property in favour of third party by not disclosing the existence of the sale deed executed by them in favour of our client. Wherefore the general public is hereby notified not to enter into any type of sale transaction with respect to the schedule property with Ramegowda & Shivanna.

SCHEDULE

All that piece and parcel of land bearing Survey No.84/2 measuring 21 guntas (repoded as Survey Nos. 84/2 measuring 9 guntas & 84/5 measuring 12 guntas) out of the total area of 3 acre 17 guntas situated at Madagalli Village. Yelwala Hobli, Mysore Taluk. Mysore and bounded on: East by: Property belonging to son-in-law of Siddaiah ; West by: Remaining property of Siddaiah ; North by: Property belonging to sons of Hucchegowda ; South by: Property belonging to Shivamurthy.

Sd/- Sri P.K. Ponnaiah, Sri B.P. Vignesh, Sri Naveen Ponnaiah, Advocates, No. 1662/1A, First floor Radhamadhav Connect, Narayana Shastry Road, Beside Secure Hospital, (Old Seetharanga Hospital) Mysore-570 004. Mob: 9448773611

5ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ಶ್ರೀ ನಿಂಗಪ್ಪನವರು
ನಿಧನ : 13.08.2020

ದುಃಖಿತಪ್ತರು: ಕುಟುಂಬವರ್ಗ

12ನೇ ವರ್ಷದ ಸವಿನೆನಪು



ನಮ್ಮ ಪ್ರೀತಿಯ ಸೌಜು, ಇಂದಿಗೆ ನೀನು ನಮ್ಮನ್ನಗಲಿ ಹನ್ನೆರಡು ವರ್ಷ ಕಳೆದರೂ, ನಿನ್ನ ನೆನಪು ನಮ್ಮ ಮನದಲ್ಲಿ ಸದಾ ಹಸಿರಾಗಿದೆ ಮತ್ತೆ ಹುಟ್ಟಿ ಬಾ ಸೌಜು.

ಇಂತಿ ದುಃಖತಪ್ತರು. ತಂದೆ ನಾಗಣ್ಣ, ತಾಯಿ ಪಂಕಜ, ಅಜ್ಜಿ ತಾಯಿ, ಚಿಕ್ಕಪ್ಪ ಚಿಕ್ಕಮ್ಮಂದಿರು, ಅಣ್ಣ ತಮ್ಮ, ಅಕ್ಕ ತಂಗಿ ಹಾಗೂ ಕುಟುಂಬಸ್ಥರು. ಮಾದಹಳ್ಳಿ, ಬೀರಿಹುಂಡಿ ಪೋ॥, ಜಯಪುರ ಹೋ॥, ಮೈಸೂರು ತಾ॥

ಕು.ಸೌಜನ್ಯ